ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 1 ಶುಕ್ರವಾರ 2024

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 196 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಮೈಸೂರಲ್ಲಿ ಪಟಾಕಿ ಖರೀದಿ ಉತ್ಸಾಹ

ಹೋಲ್‌ಸೇಲ್ ಮಳಿಗೆಗಳಿಗೆ ಮುಗಿಬಿದ್ದ ಜನ



ಹೆಬ್ಬಾಳು ಕೈಗಾರಿಕಾ ಬಡಾವಣೆಯ ಪಟಾಕಿ ಹೋಲ್‌ಸೇಲ್ ಮಾರಾಟ ಮಳಿಗೆಯಲ್ಲಿ ಜನರು ಪಟಾಕಿ ಖರೀದಿಸುತ್ತಿರುವುದು.

ಮೈಸೂರು, ಅ.31(ಎಂಟಿವೈ)– ಸಾಂಸ್ಕೃತಿಕ ನಗರಿ ಮೈಸೂರಲ್ಲಿ ಬೆಳಕಿನ ಹಬ್ಬ ದೀಪಾವಳಿ ಆಚರಣೆಗೆ ಭರದ ಸಿದ್ಧತೆ ಮಾಡಿಕೊಂಡಿರುವ ಜನತೆ, ಹಬ್ಬದ ವಿಶೇಷ ಆಕರ್ಷಣೆ ಪಟಾಕಿ ಖರೀದಿಸಲು ಮುಗಿಬೀಳುತ್ತಿದ್ದಾರೆ.

ಹಿಂದೂ ಸಂಪ್ರದಾಯದಲ್ಲಿ ದೀಪಾವಳಿ ಹಬ್ಬಕ್ಕೆ ವಿಶೇಷ ಸ್ಥಾನವಿದ್ದು, ಮನೆ ಮುಂದೆ ಮಣ್ಣಿನ ಹಣತೆ ಬೆಳಗುವುದರೊಂದಿಗೆ ಪಟಾಕಿ ಸಿಡಿಸಿ ಸಂಭ್ರಮಿಸುವ ರೂಢಿ ಇದೆ. ಈ ಹಿನ್ನೆಲೆಯಲ್ಲಿ ಮೈಸೂರಿನ ಹಲವೆಡೆ ತಾತ್ಕಾಲಿಕವಾಗಿ ಪಟಾಕಿ ಮಾರಾಟ ಮಳಿಗೆಗಳನ್ನು ನಿರ್ಮಿಸಲಾಗಿದೆ. ಅತ್ತ ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿರುವ ಹೋಲ್‌ಸೇಲ್ ಪಟಾಕಿ ಮಳಿಗೆಗಳಲ್ಲಿ ಜನ ಪಟಾಕಿ ಖರೀದಿಸಲು ಮುಗಿಬಿದ್ದಿದ್ದಾರೆ.

ಹಸಿರು ಪಟಾಕಿ ಮಾತ್ರ ಮಾರಾಟ: ಸುಪ್ರೀಂಕೋರ್ಟ್ ನಿರ್ದೇಶನದಂತೆ ಪಟಾಕಿ ತಯಾರಿಕಾ ಕಾರ್ಖಾನೆಗಳು ಪರಿಸರದ ಮೇಲೆ ಅಧಿಕ ಪ್ರಮಾಣದ ದುಷ್ಪರಿಣಾಮ ಬೀರುವಂತಹ ಪಟಾಕಿ ಬದಲು ಹಸಿರು ಪಟಾಕಿಗಳ ಮಾರಾಟಕ್ಕೆ ಅಣಿಗೊಳಿಸಿದ್ದಾರೆ. ಈ ಬಾರಿ ಬಹುತೇಕ ಮಳಿಗೆಗಳಲ್ಲಿ ಹಸಿರು ಪಟಾಕಿಗಳು ಮಾರಾಟಕ್ಕಿವೆ. ಎಲ್ಲಾ ಪಟಾಕಿ ಬಾಕ್ಸ್ ಮೇಲೆ ಹಸಿರು ಪಟಾಕಿ ಚಿಹ್ನೆ ಹಾಗೂ ಬಾರ್‌ಕೋಡ್ ಮುದ್ರಿಸಲಾಗಿದ್ದು, ಗ್ರಾಹಕರು ಹಸಿರು ಪಟಾಕಿ ಎಂಬುದನ್ನು ಖಚಿತಪಡಿಸಿಕೊಂಡು ಖರೀದಿಸುತ್ತಿದ್ದಾರೆ.

ಆಕಾಶಬುಟ್ಟಿ ಖರೀದಿ ಹೆಚ್ಚು

ಪರಿಸರ ಸಂರಕ್ಷಣೆ ಬಗ್ಗೆ ಕಾಳಜಿಯುಳ್ಳ ಅನೇಕರು ಪರಿಸರಕ್ಕೆ ಮಾರಕವಾದ ಪಟಾಕಿ ಸಿಡಿಸುವುದಕ್ಕೆ ಹಿಂದೇಟು ಹಾಕಿ ಆಕಾಶಬುಟ್ಟಿ ಹಚ್ಚಿ ದೀಪಾವಳಿ ಆಚರಿಸಲು ಮುಂದಾಗಿದ್ದು, ಇದಕ್ಕಾಗಿ ಆಕಾಶಬುಟ್ಟಿ ಖರೀದಿಸುವವರ ಸಂಖ್ಯೆ ಹೆಚ್ಚಾಗಿತ್ತು.

ಜನಸಂದಣಿ: ಮೈಸೂರಿನ ಜೆಕೆ ಮೈದಾನ, ಜೆಎಲ್‌ಬಿ ರಸ್ತೆ, ಲಲಿತ ಮಹಲ್ ರಸ್ತೆ, ಬೂತಾಳೆ ಪಿಚ್, ಬೋಗಾದಿ, ಕುವೆಂಪುನಗರ ಸೇರಿದಂತೆ ವಿವಿಧೆಡೆ ನಗರಪಾಲಿಕೆ ಅನುಮತಿ ಪಡೆದು ಪಟಾಕಿ ಮಾರಾಟ ಮಳಿಗೆ ನಿರ್ಮಿಸಲಾಗಿದೆ. ಈ ಮಳಿಗೆಗಳಲ್ಲಿ ಅ.28ರಿಂದ ನ.2ರವರೆಗೆ ಪಟಾಕಿ ಮಾರಾಟ ಮಾಡಲು ಅವಕಾಶ ಕಲ್ಪಿಸಲಾಗಿದೆ. ಈ ಮಳಿಗೆಗಳಲ್ಲಿ ಗ್ರಾಮೀಣ ಪ್ರದೇಶದ ಜನರೂ ಸೇರಿದಂತೆ ಸ್ಥಳೀಯರು ಪಟಾಕಿ ಖರೀದಿಸಲು ಮುಗಿಬಿದ್ದಿದ್ದರೆ, ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿರುವ ಹೋಲ್‌ಸೇಲ್ ಮಾರಾಟ ಮಳಿಗೆಗಳಲ್ಲಿ ಭಾರಿ ಪ್ರಮಾಣದಲ್ಲಿ ಪಟಾಕಿ ಖರೀದಿಸಲು ಜನಜಂಗುಳಿಯೇ ನೆರೆದಿತ್ತು.

ವಿವಿಧ ಕಂಪನಿಗಳ ನೌಕರರಿಗೆ ಪಟಾಕಿ ಉಡುಗೊರೆ ನೀಡುವುದಕ್ಕಾಗಿ ಹತ್ತಾರು ಬಾಕ್ಸ್ ಪಟಾಕಿಗಳನ್ನು ಸಗಟು ದರದಲ್ಲಿ ಖರೀದಿಸಲು ಮುಗಿಬಿದ್ದಿದ್ದರು. ಇದರಿಂದ ಪಟಾಕಿ ಮಳಿಗೆಗಳಿರುವ ರಸ್ತೆಯಲ್ಲಿ ಟ್ರಾಫಿಕ್ ಜಾಮ್ ಉಂಟಾಗಿತ್ತು.

ಕಳೆದ ಬಾರಿಗಿಂತ ದರ ಹೆಚ್ಚು: ಈ ಬಾರಿ ಪಟಾಕಿ ದರದಲ್ಲಿ ಶೇ.10ರಷ್ಟು ಹೆಚ್ಚಳವಾಗಿದೆ. ಆದರೂ, ಪಟಾಕಿ ದಾಸ್ತಾನು ಬೇಡಿಕೆಗೆ ಅನುಗುಣವಾಗಿ ತರಲಾಗಿದ್ದು, ಕೈ ಸುಡುವ ಬೆಲೆ ಇದ್ದರೂ, ಪಟಾಕಿ ಮಾರಾಟ ಬಿರುಸಾಗಿಯೇ ಸಾಗಿದೆ.

ಹಳೇ ಮಾದರಿ ಪಟಾಕಿ: ಈ ಬಾರಿ 2–3 ದಶಕಗಳ ಹಿಂದೆ ಮಾರುಕಟ್ಟೆಗೆ ಬರುತ್ತಿದ್ದ ಹೂವಿನ ಕುಂಡ, ವಿಷ್ಣುಚಕ್ರ, ರಾಕೆಟ್‌ಗಳು ಹಸಿರು ಪಟಾಕಿ ಮಾದರಿಯಲ್ಲಿ ಮಾರುಕಟ್ಟೆಗೆ ಬಂದಿವೆ. 20 ಬಗೆಯ ಹೂವಿನ ಕುಂಡಗಳು ಲಭ್ಯವಿದ್ದು ಜನ ಖರೀದಿಸುತ್ತಿದ್ದಾರೆ.

ಶೇಕಡ 50:50 ಅನುಪಾತದ ನಿವೇಶನ ಹಂಚಿಕೆ ಹಗರಣ ಸಂಬಂಧ ಸೋಮವಾರ ಸಿದ್ದರಾಮಯ್ಯ ಮಹತ್ವದ ನಿರ್ಧಾರ

ಮೈಸೂರು, ಅ.31(ಬಿಎಲ್‌ಯು)– ಮುಡಾದ ಶೇಕಡ 50:50 ಅನುಪಾತದ ಅಕ್ರಮ ನಿವೇಶನಗಳ ಆದೇಶ ರದ್ದು ಮಾಡುವ ಸಂಬಂಧ ತಮ್ಮ ಮನವಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಕಾರಾತ್ಮಕವಾಗಿ ಸ್ಪಂದಿಸಿದ್ದು, ಸೋಮವಾರ ಈ ಬಗ್ಗೆ ನಿರ್ಧಾರ ಮಾಡುವುದಾಗಿ ಭರವಸೆ ನೀಡಿದ್ದಾರೆ ಎಂದು ಶಾಸಕ ಟಿ.ಎಸ್.ಶ್ರೀವತ್ಸ ತಿಳಿಸಿದ್ದಾರೆ. ಮುಡಾದ ಶೇ.50:50 ಅನುಪಾತದ ಅಕ್ರಮ ನಿವೇಶನಗಳ ಆದೇಶ ರದ್ದು ಮಾಡುವಂತೆ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿದ್ದೆ. ಈ ಪತ್ರದಲ್ಲಿ ಅಗತ್ಯ ಕ್ರಮ ಕೈಗೊಳ್ಳುವಂತೆ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿಗೆ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ ಎಂದರು. ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿರುವ ಅರ್ಥವೇನು ಎಂದು ಪ್ರಶ್ನಿಸಿದಾಗ, ಸೋಮವಾರ ಈ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದ್ದಾರೆ ಎಂದು ಶ್ರೀವತ್ಸ ತಿಳಿಸಿದ್ದಾರೆ.



ಟಿ.ಎಸ್.ಶ್ರೀವತ್ಸ

ಅಭಿನಯ ರಂಗ ಕಾರ್ಯಾಗಾರ

ಮೈಸೂರು,ಅ.31–ಮೈಸೂರಿನ ಮಹಾಬೆಳಕು ಸಂಸ್ಥೆ ವತಿಯಿಂದ ಉಚಿತವಾಗಿ ಶಾಲಾ ಕಾಲೇಜು ವಿದ್ಯಾರ್ಥಿಗಳು ಹಾಗೂ ರಂಗಾಸಕ್ತ ಯುವಕ–ಯುವತಿಯರಿಗೆ ನ.4ರಿಂದ ಕೆಎಸ್‌ಜಿಹೆಚ್ ಸಂಗೀತ ಕಲೆಗಳ ವಿವಿ ಆವರಣದಲ್ಲಿ ಪ್ರತಿದಿನ ಸಂಜೆ 5 ಗಂಟೆಗೆ ಅಭಿನಯ ರಂಗ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ. ಆಸಕ್ತರು ತಮ್ಮ ಹೆಸರು ನೋಂದಾಯಿಸಿಕೊಳ್ಳಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 8150085480, 8277315586.

ಪಡುವಾರಹಳ್ಳಿಯಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ




ಪಡುವಾರಹಳ್ಳಿಯಲ್ಲಿ ವಾಲ್ಮೀಕಿ ಜಯಂತಿ, ಸರ್ದಾರ್ ವಲ್ಲಭಭಾಯ್ ಪಟೇಲ್ ಜಯಂತಿ, ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು.

ಮೈಸೂರು, ಅ.31– ಮೈಸೂರಿನ ಪಡುವಾರಹಳ್ಳಿಯಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ, ಏಕೀಕರಣ ರೂವಾರಿ ಸರ್ದಾರ್ ವಲ್ಲಭಭಾಯ್ ಪಟೇಲರ ಜನ್ಮ ದಿನಾಚರಣೆ, 69ನೇ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಪಡುವಾರಹಳ್ಳಿಯ ಗ್ರಾಮಾಭ್ಯುದಯ ಟ್ರಸ್ಟ್ ಕಾರ್ಯದರ್ಶಿ ಎಂ.ಭೈರಪ್ಪ ಪುಷ್ಪನಮನ ಸಲ್ಲಿಸಿದರು. ದಿ ಮೈಸೂರು ಕೋಆಪರೇಟಿವ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ಉಮಾಶಂಕರ್, ಬ್ಯಾಂಕಿನ ಎಸ್‌ಟಿ ವಿಭಾಗದ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ ಮಾತನಾಡಿದರು.

ಕೆ.ಆರ್.ಬ್ಯಾಂಕ್ ನೂತನ ನಿರ್ದೇಶಕರಾಗಿ ಆಯ್ಕೆಯಾದ ಎಂ.ಶಿವಪ್ರಕಾಶ್ ಹಾಗೂ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಹರೀಶ್ ರೆಡ್ಡಿ ಅವರನ್ನು ಸನ್ಮಾನಿಸಲಾಯಿತು. ಪಡುವಾರಹಳ್ಳಿ ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ಉಪಾಧ್ಯಕ್ಷ ಸಿ.ಸಂತೋಷ್, ನಿರ್ದೇಶಕರಾದ ಈ.ಲೋಕೇಶ್ವರ, ಎಂ.ಸೋಮಣ್ಣ, ರಾಘವ್ ಎಂ.ಗೌಡ, ಸಿ.ರೇವಣ್ಣ, ನಗರಪಾಲಿಕೆ ಮಾಜಿ ಸದಸ್ಯರಾದ ಎಂ.ಚಿಕ್ಕವೆಂಕಟು, ಈ. ಬಸವರಾಜ್, ಟೆನ್ನಿಸ್ ಗೋಪಿ, ದಿ ಸಿಟಿ ಕೋಆಪರೇಟಿವ್ ಬ್ಯಾಂಕ್ ನಿರ್ದೇಶಕ ವಿ.ಮಧು, ಗೋಕುಲಂ ಡಿ.ಮರಿಲಿಂಗು, ಕೇಬಲ್ ಕಿಟ್ಟಿ, ಕೆ.ಗಿರೀಶ್, ಎಂ.ಮಹೇಶ್, ಲೋಕನಾಯಕ ನಗರದ ಶ್ರೀನಿವಾಸ್‌ಗೌಡ ಮತ್ತಿತರರು ಉಪಸ್ಥಿತರಿದ್ದರು.

ಮೂಡಲಹುಂಡಿಯಲ್ಲಿ ನಾಳೆ ಬಸವೇಶ್ವರರ ಕೊಂಡೋತ್ಸವ



ಮೂಡಲಹುಂಡಿಯಲ್ಲಿರುವ ಕೊಂಡದ ಬಸವೇಶ್ವರರ ಗುಡಿ.

ಮೈಸೂರು,ಅ.31(ಎಂಟಿವೈ)– ಬೆಳಕಿನ ಹಬ್ಬ ದೀಪಾವಳಿ ಅಂಗವಾಗಿ ಮೈಸೂರು ತಾಲೂಕಿನ ಮೂಡಲಹುಂಡಿ ಗ್ರಾಮದ ಕೊಂಡದ ಬಸವೇಶ್ವರರ ಕೊಂಡೋತ್ಸವ ಶನಿವಾರ(ನ.2) ಸಂಜೆ 6ಕ್ಕೆ ವಿಜೃಂಭಣೆಯಿಂದ ಜರುಗಲಿದೆ.

ಕೊಂಡೋತ್ಸವದ ಹಿನ್ನೆಲೆಯಲ್ಲಿ ವರಕೋಡು ಗ್ರಾಮದ ಶ್ರೀ ಬಸವೇಶ್ವರ ದೇವಾಲಯದಿಂದ ಉತ್ಸವ ಮೂರ್ತಿ, ಬೀರೇಶ್ವರ ಹಾಗೂ ಬನ್ನಿಮಹಾಕಾಳೇಶ್ವರಿ ದೇವಿಯ ಉತ್ಸವ ಮೂರ್ತಿ, ದೇವಾಲಯದ ಬಸಪ್ಪ, ಪೂಜಾ ಕುಣಿತ ಹಾಗೂ ವಿವಿಧ ದೇವಾಲಯಗಳ ದೇವರ ಗುಡ್ಡರು ಮೆರವಣಿಗೆಯಲ್ಲಿ ಮೂಡಲಹುಂಡಿಗೆ ಆಗಮಿಸಲಿದ್ದಾರೆ. ನಂತರ ಗ್ರಾಮದ ಪ್ರಮುಖ ರಸ್ತೆಗಳಲ್ಲಿ ಸಾಗಿ ಸಂಜೆ 5.30ಕ್ಕೆ ಗ್ರಾಮದ ಸಮೀಪವಿರುವ ದೊಣ್ಣೆಕಲ್ಲು ಬೆಟ್ಟದಲ್ಲಿರುವ ಕೊಂಡದ ಬಸವೇಶ್ವರ ಗುಡಿಗೆ ತಲುಪಲಿದ್ದಾರೆ. ಈ ವೇಳೆ ವಿವಿಧ ಹರಕೆ ಹೊತ್ತವರು ಬಾಯಿ ಬೀಗದಾರಿಗಳಾಗಿ ಮೆರವಣಿಗೆಯಲ್ಲಿ ಸಾಗಲಿದ್ದಾರೆ.

ದೀಪಾವಳಿ ದಿನದಂದು ಕೊಂಡದ ಬಸವೇಶ್ವರರ ಕೊಂಡೋತ್ಸವ ಆಚರಿಸುವ ಪದ್ಧತಿಯಿದ್ದು, ವರಕೋಡು, ಮೂಡಲಹುಂಡಿ ಗ್ರಾಮಸ್ಥರು ನೀಡುವ ಸೌದೆಯನ್ನು ಕೊಂಡದ ಬಸವೇಶ್ವರ ಗುಡಿಗೆ ಕೊಂಡೊಯ್ದು ಮಧ್ಯಾಹ್ನ ಬೆಂಕಿ ಹಚ್ಚಿ ಕೆಂಡ ಸಿದ್ಧಪಡಿಸಲಾಗುತ್ತದೆ. ದೇವರ ಮೆರವಣಿಗೆ ಗುಡಿ ಬಳಿ ತಲುಪುತ್ತಿದ್ದಂತೆಯೇ ಕೆಂಡದ ರಾಶಿಯನ್ನು ಕೊಂಡದ ಕಟ್ಟೆಗೆ ಸುರಿದು ಗಾಳಿ ಬಿಸಿ ಶಾಖ ಹೆಚ್ಚಿಸಲಾಗುತ್ತದೆ. ವಿವಿಧ ಪೂಜೆ ಬಳಿಕ ಸಂಜೆ 6.30ಕ್ಕೆ ಕೊಂಡೋತ್ಸವಕ್ಕೆ ಚಾಲನೆ ದೊರೆಯಲಿದ್ದು, ಬಸವೇಶ್ವರ ದೇವಾಲಯ, ಶನೇಶ್ವರ ದೇವಾಲಯದ ದೇವರ ಗುಡ್ಡರು ಹಾಗೂ ಹರಕೆ ಹೊತ್ತಿರುವವರು ಕೊಂಡಹಾಯಲಿದ್ದಾರೆ. ಕೊಂಡೋತ್ಸವವನ್ನು ವೀಕ್ಷಿಸಿ, ಪೂಜೆ ಸಲ್ಲಿಸಲು ಮೂಡಲಹುಂಡಿ, ವರಕೋಡು, ಬಡಗಲಹುಂಡಿ, ಕೆಂಪೇಗೌಡನಹುಂಡಿ, ಹೊಸಹುಂಡಿ, ಮೆಲ್ಲಹಳ್ಳಿ, ಉನಗನಹಳ್ಳಿ, ವಾಜಮಂಗಲ, ಮೈಸೂರು ಸೇರಿದಂತೆ ವಿವಿಧೆಡೆಯಿಂದ ಆಗಮಿಸಲಿದ್ದಾರೆ. ಮುಗಿದ ನಂತರ ದೇವರ ಮೆರವಣಿಗೆಯನ್ನು ಮೂಡಲಹುಂಡಿ ಗ್ರಾಮದ ಮೂಲಕ ವರಕೋಡಿಗೆ ಕೊಂಡೊಯ್ದು ದೇವಾಲಯದಲ್ಲಿ ಉತ್ಸವ ಮೂರ್ತಿಯನ್ನು ಇಟ್ಟು, ದೀಪಾವಳಿಯ ಕೊಂಡೋತ್ಸವಕ್ಕೆ ತೆರೆ ಎಳೆಯಲಾಗುತ್ತದೆ.

ಮಾರನಾಯಕ ಪ್ರತಿಮೆಗೆ ವಿಶೇಷ ಪೂಜೆ, ಪುಷ್ಪಾರ್ಚನೆ



ಮಾರನಾಯಕರ ಪ್ರತಿಮೆಗೆ ರಾಜ್ಯ ನಾಯಕ ಜನಾಂಗದ ಹಿತರಕ್ಷಣಾ ವೇದಿಕೆ ವತಿಯಿಂದ ವಿಶೇಷ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ಮಾಡಲಾಯಿತು.

ಮೈಸೂರು, ಅ.31(ಜಿಎ)–ಮೈಸೂರಿನ ಉತ್ತನಹಳ್ಳಿ ಜ್ವಾಲಾಮುಖಿ ತ್ರಿಪುರ ಸುಂದರಿ ದೇವಾಲಯದ ಆವರಣದಲ್ಲಿರುವ ಮೈಸೂರು ಮೂಲ ದೊರೆ ಶ್ರೀ ಮಾರನಾಯಕರ ಪ್ರತಿಮೆಗೆ ರಾಜ್ಯ ನಾಯಕ ಜನಾಂಗದ ಹಿತರಕ್ಷಣಾ ವೇದಿಕೆ ವತಿಯಿಂದ ವಿಶೇಷ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ಮಾಡಲಾಯಿತು.

ವೇದಿಕೆ ರಾಜ್ಯಾಧ್ಯಕ್ಷ ದ್ಯಾವಪ್ಪನಾಯಕ ಮಾತನಾಡಿ, ಮೈಸೂರು ಪ್ರಾಂತ್ಯದ ದೊರೆ ಮಾರನಾಯಕ ಅವರ ಇತಿಹಾಸವು ಮುಂದಿನ ಪೀಳಿಗೆಗೆ ಪರಿಚಯಿಸುವುದು ಅತ್ಯವಶ್ಯಕವಾಗಿದೆ. ಇಲ್ಲಿರುವ ಮೂಲ ವಿಗ್ರಹವನ್ನು ಪುನರ್ ಪ್ರತಿಷ್ಠಾಪಿಸಿ, ಇವರ ಇತಿಹಾಸ ಎಲ್ಲರಿಗೂ ತಿಳಿಸುವ ಪ್ರಯತ್ನ ನಡೆಯಬೇಕು. ಹಾಗೇ ಮೈಸೂರಿನ ಯಾವುದಾದರೂ ಒಂದು ವೃತ್ತಕ್ಕೆ ಮಾರನಾಯಕರ ಹೆಸರಿಡಬೇಕು ಎಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಕೆ.ಜೆ.ಶ್ರೀಧರ್ ನಾಯಕ, ಪ್ರಭಾಕರ ಹುಣಸೂರು, ಡಿ.ಮಂಜುನಾಥ್, ಪಿ.ದೇವರಾಜ್, ನಂಜನಗೂಡು ಮಂಜುನಾಥ್, ಶಿವಣ್ಣ ಹೊಸರಾಮನಹಳ್ಳಿ, ಬಂಡಳ್ಳಿ ಕುಮಾರ್, ಮಣಿನಾಯಕ, ಮಯೂರ, ಮಹದೇಶ ಕೆರೆಹಳ್ಳಿ ರಘು, ಕರಿನಾಯಕ, ಉತ್ತನಹಳ್ಳಿ ಶಿವಣ್ಣ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

1.11.2024 ಶುಕ್ರವಾರ, ಮಳೆ ನಕ್ಷತ್ರ: ಸ್ವಾತಿ, 24.10.2024ರಿಂದ 05.11.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ, ಕೃಷ್ಣ ಪಕ್ಷ, ತಿಥಿ: ಅಮಾವಾಸ್ಯೆ, ನಕ್ಷತ್ರ: ಸ್ವಾತಿ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಬಣ್ಣದ ಬಾನಾಡಿಗಳು–ಬಾನುಲಿ ಸರಣಿ, ರಚನೆ: ಡಾ.ಕಲೀಂವುಲ್ಲಾ, ಪ್ರಸ್ತುತಿ: ಜಿ.ಶಾಂತಕುಮಾರ್, 6.40 ಮತ್ತು ಸಂಜೆ 5.45 ಕರಾಮುವಿವಿ ಮುಕ್ತವಾಣಿ–ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಭಾಗವಹಿ ಸುತ್ತಾರೆ: ಪ್ರಾಯೋಜಕರು: ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯ, ಮೈಸೂರು. ಪ್ರಸ್ತುತಿ: ಎನ್. ಕೇಶವಮೂರ್ತಿ, 6.50 ರೈತರಿಗೆ ಸಲಹೆ, 7.15 KABHI–ಕರ್ನಾಟಕ, ಮೆದುಳು ಆರೋಗ್ಯ ಕುರಿತ ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ನಿಮ್ಹಾನ್ಸ್ ಸಂಸ್ಥೆ, ಬೆಂಗಳೂರು, 8.30 ಹಾಸನಾಂಬೆ ದರ್ಶನ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ಜಿಲ್ಲಾಡಳಿತ, ಹಾಸನ, 9.00 ನಮ್ಮ ಆರೋಗ್ಯ–ಹೃದಯದ ಆರೋಗ್ಯ ಕಾಪಾಡಿಕೊಳ್ಳುವುದು ಹೇಗೆ ಕುರಿತು ಡಾ.ಕೇಶವಮೂರ್ತಿ. ವಿ ಅವರೊಂದಿಗೆ ಮಾತುಕತೆ. ನಂತರ 'ಸಂಧಿವಾತ ಅಂದರೆ ಆರ್‌ಥ್ರೈಟಿಸ್‌ಗೆ ಆಯುರ್ವೇದ ಚಿಕಿತ್ಸೆ ಕುರಿತು ಡಾ.ಬೀನಾ. ಎಂ.ಡಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 9.30 ಗಾಂಧಿ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಅಭಿಷೇಕ್ ರಘುರಾಮ್–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಸೈಕಲ್ ಸವಾರಿ ಮಾತಿನ ಲಹರಿ, ಪ್ರಸ್ತುತಿ: ಜಾಂಪಣ್ಣ ಆಶೀಹಾಳ್ **ಮಧ್ಯಾಹ್ನ:** 12.30–ದೇವರನಾಮ, 12.45–ಕಾದಂಬರಿ ವಿಹಾರ–ಅ.ನ.ಕೃ ಅವರ 'ಉದಯರಾಗ' ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ: ಉಮೇಶ್. ಎಸ್.ಎಸ್., 1.00 ಸಕ್ಕರೆ ನಾಡಿನ ಅಕ್ಕರೆಯ ಲೇಖಕರು, ಲೇಖಕರು ಹಾಗೂ ಪ್ರಸ್ತುತಿ : ಶಭಾನ ಮತ್ತು ಕೀರ್ತಿ. ಎಸ್. ಬೈಂದೂರು, ಪರಿಕಲ್ಪನೆ: ಅಬ್ದುಲ್ ರಶೀದ್, 1.25 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಚಂದನಾ ಬಾಲ–ಹಾಡುಗಾರಿಕೆ, 4.00 ಮಹಿಳಾರಂಗ–ಸಖೀ ಸಂವಾದ–ವ್ಯವಹಾರಿಕವಾಗಿ ಕನ್ನಡ ಭಾಷೆಯ ಬಳಕೆಯ ಅಗತ್ಯ. ಪ್ರಸ್ತುತಿ : ಸಹನ, ಕೀರ್ತನ ಹಾಗೂ ನೇತ್ರ, 4.30 ವೃತ್ತಿ ಮಾರ್ಗದರ್ಶನ 'ಕನ್ನಡ ಭಾಷೆ ಮತ್ತು ಸಾಹಿತ್ಯ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು' ಕುರಿತು ಮೈಸೂರಿನ ಎಂ.ಎಂ.ಕೆ–ಎಸ್.ಡಿ.ಎಂ ಮಹಿಳಾ ಪ್ರಥಮದರ್ಜೆ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ.ವಿನೋದಾ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 6.50 ಕೃಷಿರಂಗ: ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ ಈ ಕುರಿತು ಮೈಸೂರು ಜಿಲ್ಲೆ, ಟಿ. ನರಸೀಪುರ ತಾಲೂಕು ವಾಟಾಳು ಗ್ರಾಮದ ಡಾ.ಡಿ.ರವಿಶಂಕರ್ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್.ಕೇಶವಮೂರ್ತಿ, 7.45 ಜಾತ್ರಾ ವಿಶೇಷ–ಬಾನುಲಿ ಮಾಲಿಕೆ. ಚಾಮರಾಜನಗರ ಜಿಲ್ಲೆ ಬಿಳಿಗಿರಿರಂಗನ ಬೆಟ್ಟದ ಜಾತ್ರೆಯನ್ನು ಪರಿಚಯಿಸುತ್ತಾರೆ ಡಾ. ಕೃಷ್ಣಮೂರ್ತಿ ಹನೂರು ಹಾಗೂ ಡಾ. ಮೈಸೂರು ಗುರುರಾಜ್, 8.00 ವಿಜ್ಞಾನ ಭಾರತಿ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ : ಕೆ.ವಿ.ಕೃಷ್ಣ–ವೀಣಾವಾದನ, 10.00 ಜನಪದ ಸಂಗೀತ, 10.30 ಸವಿನೆನಪು

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಯೋಗ ತರಗತಿ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 6.30ರಿಂದ

■ **ಕುವೆಂಪುನಗರ ನಿವಾಸಿಗಳ ಒಕ್ಕಲಿಗರ ಕ್ಷೇಮಾಭಿವೃದ್ಧಿ ಟ್ರಸ್ಟ್:** ಕನ್ನಡ ರಾಜ್ಯೋತ್ಸವ, ಧ್ವಜಾರೋಹಣ: ನಟ ಮಂಡ್ಯ ರಮೇಶ್, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಹೆಚ್.ಕೆ. ರಾಮು, ಸ್ಥಳ: ಸಂಘದ ಕಚೇರಿ ಆವರಣ, ಬೆಳಗ್ಗೆ 8ಕ್ಕೆ.

■ **ಕೇಂದ್ರೀಯ ಆಹಾರ ತಾಂತ್ರಿಕ ಸಂಶೋಧನಾಲಯ, ಕನ್ನಡ ಸಹೃದಯ ಬಳಗ:** ಕನ್ನಡ ರಾಜ್ಯೋತ್ಸವ, ಕನ್ನಡ ಧ್ವಜಾರೋಹಣ: ಕನ್ನಡ ಪುಸ್ತಕ ಪ್ರಾಧಿಕಾರ ನಿಕಟಪೂರ್ವ ಅಧ್ಯಕ್ಷ ಡಾ.ಬಂಜಗೆರೆ ಜಯಪ್ರಕಾಶ್, ಅಧ್ಯಕ್ಷತೆ : ಸಿಎಸ್‌ಐಆರ್–ಸಿಎಫ್‌ಟಿಆರ್‌ಐ ನಿರ್ದೇಶಕರಾದ ಶ್ರೀಮತಿ ಶ್ರೀದೇವಿ ಅನ್ನಪೂರ್ಣ ಸಿಂಗ್, ಸ್ಥಳ: ಚೆಲುವಾಂಬ ಅರಮನೆ, ಸಿಎಸ್‌ಐಆರ್–ಸಿಎಫ್‌ಟಿಆರ್‌ಐ, ಬೆಳಗ್ಗೆ 9ಕ್ಕೆ.

■ **ಸುವರ್ಣ ಬೆಳಕು ಫೌಂಡೇಷನ್:** ಕನ್ನಡ ರಾಜ್ಯೋತ್ಸವ ಆಚರಣೆ, ಸ್ಥಳ: ಎಎಸ್‌ಜಿ ಕಣ್ಣಿನ ಆಸ್ಪತ್ರೆ ಆವರಣ, ನಾರಾಯಣಶಾಸ್ತ್ರಿ ರಸ್ತೆ, ಬೆಳಗ್ಗೆ 9ಕ್ಕೆ.

■ **ಎ.ಎಸ್.ಜಿ ಕಣ್ಣಿನ ಆಸ್ಪತ್ರೆ ಹಾಗೂ ಸುವರ್ಣ ಬೆಳಕು ಫೌಂಡೇಶನ್:** ಕನ್ನಡ ರಾಜ್ಯೋತ್ಸವ, ಧ್ವಜಾರೋಹಣ: ಹಿರಿಯ ಸಾಹಿತಿ ಸಿ.ಪಿ.ಕೃಷ್ಣಕುಮಾರ್, ಅಧ್ಯಕ್ಷತೆ: ಫೌಂಡೇಷನ್ ಅಧ್ಯಕ್ಷ ಮಹೇಶ್, ಉಪಸ್ಥಿತರು: ಯುವ ಸಾಹಿತಿ ಮಹೇಶ್, ಸ್ಥಳ: ಎಎಸ್‌ಜಿ ಕಣ್ಣಿನ ಆಸ್ಪತ್ರೆ, ಬೆಳಗ್ಗೆ 9 ಗಂಟೆಗೆ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.

■ **ಬಸವ ಸಮಿತಿ, ಹೆಬ್ಬಾಳು–ವಿಜಯನಗರ :** ಶರಣ ಸಂಗಮ–299, ಕನ್ನಡ ರಾಜ್ಯೋತ್ಸವ, ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮೀಜಿಯವರ 109ನೇ ಜಯಂತಿ, ಬೆಳಗ್ಗೆ 10ಕ್ಕೆ ಧ್ವಜಾರೋಹಣ, ಸಹಾಯಕ ಪ್ರಾಧ್ಯಾಪಕ ಡಾ.ಸಿ.ಪಿ. ಲಾವಣ್ಯ ಅವರಿಂದ ಕನ್ನಡ ಸಾಹಿತ್ಯ ಪರಂಪರೆಯ ವಿಶಿಷ್ಟ ಪ್ರಕಾರವಾಗಿ ವಚನ ಸಾಹಿತ್ಯ ಕುರಿತು ಉಪನ್ಯಾಸ, ಕನ್ನಡ ಗೀತೆಗಳ ಗಾಯನ, ಅಧ್ಯಕ್ಷತೆ : ಬಸವ ಸಮಿತಿ ಅಧ್ಯಕ್ಷ ಹೆಚ್.ವಿ. ಬಸವರಾಜು, ಸ್ಥಳ: ಬಸವ ಭವನ, ವಿಜಯನಗರ 1ನೇ ಹಂತ.

■ **ಆಯೋಜಕರು :** ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಅಂತರರಾಷ್ಟ್ರೀಯ ವನ್ಯಜೀವಿ ಛಾಯಾಗ್ರಾಹಕರಿಂದ ಕಲರವ ಛಾಯಾಚಿತ್ರ ಪ್ರದರ್ಶನ, ಉದ್ಘಾಟನೆ: ವನ್ಯಜೀವಿ ಛಾಯಾಗ್ರಾಹಕ ಕೃಪಾಕರ ಸೇನಾನಿ, ಉಪಸ್ಥಿತರು: ಉರಗ ತಜ್ಞ ಸ್ನೇಕ್ ಶ್ಯಾಮ್, ಸ್ಥಳ : ಸುಚಿತ್ರ ಕಲಾ ಗ್ಯಾಲರಿ, ಕಲಾಮಂದಿರ ಆವರಣ, ಬೆಳಗ್ಗೆ 11ಕ್ಕೆ

■ **ಜಿಲ್ಲಾಡಳಿತ:** 69ನೇ ಕನ್ನಡ ರಾಜ್ಯೋತ್ಸವ, ಬೆಳಗ್ಗೆ 7.45ಕ್ಕೆ ಅರಮನೆ ಆವರಣದಲ್ಲಿರುವ ಶ್ರೀ ಭುವನೇಶ್ವರಿ ದೇವಿಗೆ ಪೂಜೆ, ಬೆಳಗ್ಗೆ 9ಕ್ಕೆ ವೇದಿಕೆ ಕಾರ್ಯಕ್ರಮ, ಉಪಸ್ಥಿತರು: ಮುಖ್ಯಮಂತ್ರಿ ಸಿದ್ದರಾಮಯ್ಯ, ಉಕ್ಕು ಮತ್ತು ಬೃಹತ್ ಕೈಗಾರಿಕಾ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ಧ್ವಜಾರೋಹಣ : ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಉಪಸ್ಥಿತರು: ಪಶು ಸಂಗೋಪನೆ ಸಚಿವ ಕೆ.ವೆಂಕಟೇಶ್, ಶಾಸಕರಾದ ಸಿ.ಅನಿಲ್‌ಕುಮಾರ್, ಎ.ಬಿ.ರಮೇಶ್ ಬಂಡಿಸಿದ್ದೇಗೌಡ, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಉಪಾಧ್ಯಕ್ಷೆ ಡಾ. ಪುಷ್ಪ ಅಮರನಾಥ್, ಕನ್ನಡ ಪುಸ್ತಕ ಪ್ರಾಧಿಕಾರ ಅಧ್ಯಕ್ಷ ಡಾ.ಮಾನಸ, ಅಧ್ಯಕ್ಷತೆ: ಶಾಸಕ ಕೆ.ಹರೀಶ್‌ಗೌಡ, ಮುಖ್ಯ ಅತಿಥಿಗಳು: ಸಂಸದರಾದ ಸುನೀಲ್ ಬೋಸ್, ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಸ್ಥಳ: ಓವೆಲ್ ಮೈದಾನ.

■ **ಶ್ರೀ ಮಲೆ ಮಹದೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್ :** 47ನೇ ವರ್ಷದ ಕಾರ್ತಿಕ ಮಾಸದ ಶ್ರೀ ಮಲೆ ಮಹದೇಶ್ವರ ಸ್ವಾಮಿ ಪೂಜಾ ಮಹೋತ್ಸವ, 26ನೇ ವರ್ಷದ ಮಹಾ ಕುಂಭಾಭಿಷೇಕ, 10ನೇ ವರ್ಷದ ಹಾಲರವಿ ಸೇವೆ, ದೀಪಾವಳಿ ಹಬ್ಬದ ಅಮಾವಾಸ್ಯೆ ಪ್ರಯುಕ್ತ ಶ್ರೀ ಸ್ವಾಮಿಯವರಿಗೆ ಮಹಾರುದ್ರಾಭಿಷೇಕ, ಬಿಲ್ವಾರ್ಚನೆ, ಮಹಾ ಮಂಗಳಾರತಿ, ಪ್ರಸಾದ ವಿನಿಯೋಗ, ಬೆಳಗ್ಗೆ 9ಕ್ಕೆ ಮಹಾ ಗೋಪುರದ ಮೇಲೆ ಧ್ವಜಾರೋಹಣ, ಸ್ಥಳ: ಶ್ರೀ ಮಲೆ ಮಹದೇಶ್ವರಸ್ವಾಮಿ ದೇವಸ್ಥಾನ, ಲಷ್ಕರ್ ಮೊಹಲ್ಲಾ.


■ **ಮೈಸೂರು ಮೆಲೋಡಿ ಸಿಂಗರ್ಸ್ ಗ್ರೂಪ್ :** 69ನೇ ಕನ್ನಡ ರಾಜ್ಯೋತ್ಸವದ ಅಂಗವಾಗಿ ಕನ್ನಡ ಮಧುರ ಗಾನೋತ್ಸವ, ಕನ್ನಡ ಗೀತೆಗಳ ಗಾಯನ ಕಾರ್ಯಕ್ರಮ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 4ಕ್ಕೆ.

■ **ಜನಚೈತನ್ಯ ಫೌಂಡೇಷನ್, ಮೈಸೂರು ಜಿಲ್ಲಾ ಒಳಮೀಸಲಾತಿ ಜಾರಿ ಹೋರಾಟ ಸಮಿತಿ:** ಸುಪ್ರೀಂ ಕೋರ್ಟ್ ಒಳಮೀಸಲಾತಿ ತೀರ್ಪು ಮತ್ತು ಜಾರಿ ಕುರಿತು ವಿಚಾರ ಸಂಕಿರಣ, ಉದ್ಘಾಟನೆ: ಚಿಂತಕ ಪ್ರೊ.ಹೆಚ್.ಗೋವಿಂದಯ್ಯ, ಅಧ್ಯಕ್ಷತೆ: ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮುಖ್ಯ ಅತಿಥಿಗಳು : ಮಾಜಿ ಮೇಯರ್ ನಾರಾಯಣ, ಹಿರಿಯ ವಕೀಲ ಎಸ್.ಅರುಣ್‌ಕುಮಾರ್, ಪ್ರೊ.ಆರ್.ತಿಮ್ಮರಾಯಪ್ಪ, ಅರಕಲವಾಡಿ ನಾಗೇಂದ್ರ, ದಾಸಯ್ಯ, ಮಾಳಪ್ಪ ಕುರ್ಕಿ, ರೈಲ್ವೆ ಗಂಗಯ್ಯ, ಪ್ರಾಸ್ತಾವಿಕ ನುಡಿ : ಜನಚೈತನ್ಯ ಫೌಂಡೇಷನ್ ಅಧ್ಯಕ್ಷ ಆರ್. ಲಕ್ಷ್ಮಣ್, ಸ್ಥಳ: ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 4.30ಕ್ಕೆ.

■ **ಅದಮ್ಯ ರಂಗಶಾಲೆ :** ನಿಲಿಯಿತು ನವಿಲು ನಾಟಕ ಪ್ರದರ್ಶನ, ನಿರ್ದೇಶನ : ವಿನೋದ ಸಿ. ಮೈಸೂರು, ಸಂಗೀತ : ಲೋಕನಾಥ್ ಸೋಗುಂ, ಸ್ಥಳ: ಕಿರುರಂಗ ಮಂದಿರ, ಸಂಜೆ 6.30ಕ್ಕೆ.

■ **ಶ್ರೀ ವೀರಭದ್ರೇಶ್ವರಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್:** ಬೆಳಗ್ಗೆ 7ರಿಂದ ಕಾರ್ತಿಕ ಮಾಸದ ವಿಶೇಷ ಪೂಜಾ ಮಹೋತ್ಸವ, ಅಗ್ನಿ ಕೊಂಡೋತ್ಸವ ಮತ್ತು ಗಿರಿಜಾ ಕಲ್ಯಾಣ, ತೈಲಾಭಿಷೇಕ, ಪಂಚಾಮೃತ ಅಭಿಷೇಕ, ಮಹಾರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಮಹಾಮಂಗಳಾರತಿ, ತೀರ್ಥಪ್ರಸಾದ, ರಾತ್ರಿ 7ಕ್ಕೆ ಪ್ರಾಕಾರದ ಉತ್ಸವ, ಮಹಾ ಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಶ್ರೀ ವೀರಭದ್ರೇಶ್ವರಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನ, ಕೆ.ಆರ್.ಮೊಹಲ್ಲಾ.

ಮೈಸೂರು ಹಾಗೂ ಸುತ್ತಮುತ್ತ ನಾಳೆ...



ನಾಳಿನ ಪಂಚಾಂಗ

2.11.2024 ಶನಿವಾರ, ಮಳೆ ನಕ್ಷತ್ರ: ಸ್ವಾತಿ, 24.10.2024ರಿಂದ 05.11.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ, ಶುಕ್ಲ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ವಿಶಾಖ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 CFTRI ಶೋಧ–ಅನುಶೋಧ–ಪ್ರಾಯೋಜಿತ ಬಾನುಲಿ ಸರಣಿ, ಪ್ರಾಯೋಜಕರು: CSIR, CFTRI, Mysuru, 6.40 ಸಕ್ಕರೆ ನಾಡಿನ ಅಕ್ಕರೆಯ ಲೇಖಕರು, ಲೇಖನ ಹಾಗೂ ಪ್ರಸ್ತುತಿ: ಶಭಾನ ಮತ್ತು ಕೀರ್ತಿ. ಎಸ್. ಬೈಂದೂರು, ಪರಿಕಲ್ಪನೆ: ಅಬ್ದುಲ್ ರಶೀದ್, 6.50 ರೈತರಿಗೆ ಸಲಹೆ, 7.15 ಜೀವನ ಜೋಪಾನ– ಹೆಚ್.ಐ.ವಿ– ಅಂದು ಇಂದು, ಪ್ರಾಯೋಜಕರು– ಕರ್ನಾಟಕ ರಾಜ್ಯ ಏಡ್ಸ್ ನಿಯಂತ್ರಣ ಮಂಡಳಿ, 8.45 ಹಾದಿಯಲ್ಲಿ ಕಂಡ ಮುಖ–ಬಾನುಲಿ ಸರಣಿ, ಪ್ರಸ್ತುತಿ: ಅಬ್ದುಲ್ ರಶೀದ್, 9.00 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಲಕ್ಷ್ಮಣ್ ಮತ್ತು ಸಂಗಡಿಗರಿಂದ ನಾದಸ್ವರ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ನಮ್ಮೂರ್ ಹೆಸರು, ಪ್ರಸ್ತುತಿ: ಡಾ. ಮೈಸೂರು ಉಮೇಶ್ **ಮಧ್ಯಾಹ್ನ:** 12.30 ಆಯುಷ್‌ವಾಣಿ– ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ಆಯುಷ್ ಇಲಾಖೆ, ಕರ್ನಾಟಕ ಸರ್ಕಾರ, 12.35 ದೇವರನಾಮ, 12.45 ಜನಪದ ಸಂಗೀತ, 1.20 ಭಾವಗೀತೆ ಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಹಳ್ಳಿ ಹಾಡು, 3.30 ಮಕ್ಕಳ ಮಂಟಪ, 4.00 ನಾಟಕ, 4.30 ನೆನಪಿನಂಗಳ (ಧ್ವನಿ ಭಂಡಾರದಿಂದ), 6.50 ಕೃಷಿರಂಗ: ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ ತರಕಾರಿ ಬೇಸಾಯ. ಈ ಕುರಿತು ಮೈಸೂರು ತಾಲೂಕು ಜಯಪುರ ಹೋಬಳಿಯ ದಾರಿಪುರ ಗ್ರಾಮದ ಎಸ್. ರವಿಕುಮಾರ್ ಅವರೊಂದಿಗೆ ಸಂದರ್ಶನ, ಸಂದರ್ಶಕರು: ಎನ್.ಕೇಶವಮೂರ್ತಿ, 8.00 ಯುವವಾಣಿ, 9.30 ಸವಿನೆನಪು– ಹಳೆಯ ಕನ್ನಡ ಚಿತ್ರಗೀತೆಗಳು, 10.00–ರಾಷ್ಟ್ರೀಯ ಸಂಗೀತ ಕಾರ್ಯಕ್ರಮ: ವಿದುಷಿ. ಅಮೃತಾ ವೆಂಕಟೇಶ್–ಗಾಯನ

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.

■ **ಆಯೋಜಕರು :** ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಅಂತರರಾಷ್ಟ್ರೀಯ ವನ್ಯಜೀವಿ ಛಾಯಾಗ್ರಾಹಕರಿಂದ ಕಲರವ ಛಾಯಾಚಿತ್ರ ಪ್ರದರ್ಶನ, ಸ್ಥಳ : ಸುಚಿತ್ರ ಕಲಾ ಗ್ಯಾಲರಿ, ಕಲಾಮಂದಿರ ಆವರಣ, ಬೆಳಗ್ಗೆ 11ಕ್ಕೆ.

■ **ಕಲಾಸುರುಚಿ, ಸುರುಚಿ ರಂಗಮನೆ:** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ–852, ಕಥೆ ಹೇಳುವವರು: ಬಾಲಕೃಷ್ಣಯ್ಯ, ನಿವೃತ್ತ ಶಿಕ್ಷಕರು ಹಾಗೂ ರಾಜ್ಯ ಸಂಪನ್ಮೂಲ ವ್ಯಕ್ತಿ, ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30ರಿಂದ.

ಸುತ್ತೂರು ಶ್ರೀ ಕ್ಷೇತ್ರ, ನಂಜನಗೂಡು ತಾಲೂಕು

■ **ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಪೂಜಾ ಮಹೋತ್ಸವ ಸಮಿತಿ:** ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃ ಗದ್ದುಗೆ ಶ್ರೀ ಮಹದೇಶ್ವರರ ಸನ್ನಿಧಿ, ಶ್ರೀ ವೀರಭದ್ರೇ ಶ್ವರ ಮತ್ತು ಶ್ರೀ ಸೋಮೇಶ್ವರ ದೇವಸ್ಥಾನಗಳಲ್ಲಿ ಕಾರ್ತಿಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮಗಳು.

ನವೆಂಬರ್ 3ರ ಕಾರ್ಯಕ್ರಮಗಳು

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಯೋಗ ತರಗತಿ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 6.30ರಿಂದ

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ರಿಂದ.

■ **ಜಿಲ್ಲಾ ಬ್ರಾಹ್ಮಣ ಮಹಾಸಭಾ:** ಕನ್ನಡ ರಾಜ್ಯೋತ್ಸವ ಆಚರಣೆ, ಉಪಸ್ಥಿತರು: ಡಾ.ಬಿ.ಆರ್.ನಟರಾಜ ಜೋಯಿಸ್, ಇಳೈ ಆಳ್ವಾರ್ ಸ್ವಾಮೀಜಿ, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ವಿಕ್ರಾಂತ್ ಪಿ.ದೇವೇಗೌಡ, ಅಂಶಿಪ್ರಸನ್ನಕುಮಾರ್, ರಘುನಾಥ್, ಲಕ್ಷ್ಮೀಕಾಂತ್, ಮೂಗೂರು ನಂಜುಂಡಸ್ವಾಮಿ, ಧ್ವಜಾರೋಹಣ: ಶಾಸಕ ಟಿ.ಎಸ್.ಶ್ರೀವತ್ಸ, ಸ್ಥಳ: ಭಾರತ ಮಾತ ಧ್ವಜಕಟ್ಟೆ, ಶ್ರೀರಾಂಪುರ 2ನೇ ಹಂತ, ಬೆಳಗ್ಗೆ 11ಕ್ಕೆ.

■ **ಆಯೋಜಕರು :** ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಅಂತರರಾಷ್ಟ್ರೀಯ ವನ್ಯಜೀವಿ ಛಾಯಾಗ್ರಾಹಕರಿಂದ ಕಲರವ ಛಾಯಾಚಿತ್ರ ಪ್ರದರ್ಶನ, ಸ್ಥಳ : ಸುಚಿತ್ರ ಕಲಾ ಗ್ಯಾಲರಿ, ಕಲಾಮಂದಿರ ಆವರಣ, ಬೆಳಗ್ಗೆ 11ಕ್ಕೆ.

■ **ಜೆಎಸ್‌ಎಸ್ ಪ್ರಸಾದ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘ, ಡಾ.ಶ್ರೀ ಶಿವರಾತ್ರಿ ರಾಜೇಂದ್ರ ವಿದ್ಯಾರ್ಥಿ ನಿಲಯ:** ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 109ನೇ ಜಯಂತಿ ಮಹೋತ್ಸವ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ: ನ್ಯಾಯಮೂರ್ತಿ ಹೆಚ್.ಎಸ್.ಮಲ್ಲಿಕಾರ್ಜುನ ಸ್ವಾಮಿ, ಅಧ್ಯಕ್ಷತೆ: ಜೆಎಸ್‌ಎಸ್ ಪ್ರಸಾದ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಎಲ್.ರೇವಣ್ಣ ಸಿದ್ದಯ್ಯ, ಮುಖ್ಯ ಅತಿಥಿಗಳು: ಬೆಂಗಳೂರು ಮೆಟ್ರೋಪಾಲಿಟನ್ ಟ್ರಾನ್ಸ್‌ಪೋರ್ಟ್ ಕಾರ್ಪೋರೇಷನ್ ನಿರ್ದೇಶಕಿ ಶ್ರೀಮತಿ ಎಂ.ಶಿಲ್ಪಾ, ಬೆಳಗಾವಿ ವಿಭಾಗದ ಜಂಟಿ ಸಾರಿಗೆ ಆಯುಕ್ತರಾದ ಶ್ರೀಮತಿ ಎಂ.ಪಿ. ಓಂಕಾರೇಶ್ವರಿ, ಸ್ಥಳ: ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವಿದ್ಯಾರ್ಥಿ ನಿಲಯದ ಆವರಣ, ಬೆಳಗ್ಗೆ 11ಕ್ಕೆ.

■ **ಜೆಎಸ್‌ಎಸ್ ಪ್ರಸಾದ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘ :** ಸರ್ವ ಸದಸ್ಯರ ಮಹಾಸಭೆ, ಸ್ಥಳ: ವಿದ್ಯಾರ್ಥಿ ನಿಲಯದ ಆವರಣ, ಶ್ರೀ ಶಿವರಾತ್ರಿ ರಾಜೇಂದ್ರ ವಿದ್ಯಾರ್ಥಿ ನಿಲಯ, ಮಧ್ಯಾಹ್ನ 3ಕ್ಕೆ.

■ **ರಂಗಾಯಣ:** ಚಿಕ್ಕಮಗಳೂರು ಅಭಿನಯ ದರ್ಪಣ ತಂಡದ ಕಲಾವಿದರಿಂದ ಮುಸ್ಸಂಜೆಯಲ್ಲಿ ನಡೆದ ಘಟನೆ, ನಿರ್ದೇಶನ : ಎಂ. ವಿನೀತ್‌ಕುಮಾರ್, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ

■ **ನಟನ ರಂಗಶಾಲೆ :** ವಾರಾಂತ್ಯ ರಂಗ ಪ್ರದರ್ಶನ, ರಂಗಶಾಲೆಯ ಮಕ್ಕಳಿಂದ ನಾಟಕ 'ನಾಯಿ ಬಂತಪ್ಪೋ ನಾಯಿ' ಪ್ರದರ್ಶನ, ನಾಟಕದ ರಚನೆ : ಗುರುರಾಜ, ವೆಂಕಟೇಶ ಶಿರಹಟ್ಟಿ, ಸಂಗೀತ : ಪಾಣಿನಿ ದೇರಾಜೆ, ನಿರ್ದೇಶನ: ನಟನ ಮಂಜು, ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 1 ಶುಕ್ರವಾರ 2024

45

ಸಂಪುಟ: 45 | ಸಂಚಿಕೆ: 196 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಶುಭಾಶಯಗಳು



ನಾಡಿನ ಸಮಸ್ತರಿಗೂ
ಕನ್ನಡ ರಾಜ್ಯೋತ್ಸವ ಹಾಗೂ ದೀಪಾವಳಿ ಶುಭಾಶಯಗಳು

ಬಿಡುವು

ಕನ್ನಡ ರಾಜ್ಯೋತ್ಸವ ಹಾಗೂ ದೀಪಾವಳಿ ಪ್ರಯುಕ್ತ ಇಂದು ಮತ್ತು ನಾಳೆ ನಮ್ಮ ಕಾರ್ಯಾಲಯಕ್ಕೆ ರಜೆ ಇರುವುದರಿಂದ ನ.2 ಮತ್ತು 3ರ 'ಮೈಸೂರು ಮಿತ್ರ' ಸಂಚಿಕೆ ಪ್ರಕಟವಾಗುವುದಿಲ್ಲ. –ಸಂ.

'ಶಕ್ತಿ'ಯೂ ಸೇರಿದಂತೆ ಯಾವ 'ಗ್ಯಾರಂಟಿ' ನಿಲ್ಲಿಸುವ ಪ್ರಶ್ನೆಯೇ ಇಲ್ಲ

ನನ್ನ ಹೇಳಿಕೆ 'ಪರಿಷ್ಕರಣೆ'ಯನ್ನು ತಪ್ಪಾಗಿ ಅರ್ಥೈಸಲಾಗಿದೆ: ಡಿಸಿಎಂ ಡಿಕೆಶಿ ಸ್ಪಷ್ಟನೆ



ಬೆಂಗಳೂರು, ಅ.31–(ಕೆಎಂಶಿ) ಶಕ್ತಿ ಯೋಜನೆ ಸೇರಿದಂತೆ ಯಾವುದೇ ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸುವ ಪ್ರಶ್ನೆಯೇ ಇಲ್ಲ. ನನ್ನ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಿ ತಿರುಚಲಾಗಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸ್ಪಷ್ಟನೆ ನೀಡಿದ್ದಾರೆ.

ಶಕ್ತಿ ಯೋಜನೆ ಮರುಪರಿಶೀಲನೆಗೆ ಸಂಬಂಧಿಸಿದಂತೆ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಈ ವಿಚಾರದಲ್ಲಿ ನನ್ನ ಹೇಳಿಕೆಯನ್ನು ತಿರುಚಲಾಗಿದೆ. ಆರ್ಥಿಕವಾಗಿ ಸದೃಢವಾಗಿರುವವರು, ಐಟಿ–ಬಿಟಿ ಸಂಸ್ಥೆಗಳವರು, ಎಂಎನ್‌ಸಿ ಕಂಪನಿಗಳ ಸಿಬ್ಬಂದಿ ಸೇರಿದಂತೆ ಅನೇಕ ಮಹಿಳೆಯರು ತಮಗೆ ಬಸ್‌ಗಳಲ್ಲಿ ಉಚಿತ ಪ್ರಯಾಣದ ಅವಶ್ಯಕತೆ ಇಲ್ಲ ಎಂದು ಹೇಳಿದ್ದಾರೆ.

ಕಂಪನಿ ಸಿಬ್ಬಂದಿಗೆ ಉಚಿತ ಬಸ್ ಬೇಕಿಲ್ಲ: ತಾವು ಕೆಲಸ ಮಾಡುವ ಕಂಪನಿಗಳಲ್ಲಿ ಸಂಚಾರಕ್ಕಾಗಿ ಪ್ರತ್ಯೇಕ ಭತ್ಯೆ ನೀಡಲಾಗುತ್ತಿದೆ. ಹೀಗಾಗಿ ನಮಗೆ ಉಚಿತ ಬಸ್ ಪ್ರಯಾಣ ಸೌಲಭ್ಯ ಅಗತ್ಯವಿಲ್ಲ ಎಂದು ಹೇಳಿದ್ದಾರೆ. ಈ ವಿಚಾರದ ಬಗ್ಗೆ ನಾನು ಸಚಿವರ ಜತೆ ಚರ್ಚೆ ಮಾಡುತ್ತೇನೆ ಎಂದು ಹೇಳಿದ್ದೇನೆ ಅಷ್ಟೇ. ಯೋಜನೆ ನಿಲ್ಲಿಸುತ್ತೇವೆ ಎಂದು ಎಲ್ಲಿಯೂ ಹೇಳಿಲ್ಲ ಎಂದು ತಿಳಿಸಿದರು.



ನಮ್ಮ ಐದು ಗ್ಯಾರಂಟಿ ಯೋಜನೆಗಳ ಪೈಕಿ ಯಾವುದೇ ಯೋಜನೆಯನ್ನು ಹಿಂಪಡೆಯುವ ಪ್ರಶ್ನೆಯೇ ಇಲ್ಲ. ಈ ಯೋಜನೆ ಸೌಲಭ್ಯ ಬೇಡ ಎಂದು ಹೇಳುವವರಿಗೆ ಬಲವಂತ ಮಾಡಲು ಸಾಧ್ಯವೇ? ■6ನೇ ಪುಟಕ್ಕೆ

'ಶಕ್ತಿ' ಪರಿಷ್ಕರಣೆ ಪ್ರಸ್ತಾವನೆ ಸರ್ಕಾರದ ಮುಂದಿಲ್ಲ

ಬೆಂಗಳೂರು: ಶಕ್ತಿ ಯೋಜನೆ ಪರಿಷ್ಕರಣೆ ಪ್ರಸ್ತಾವನೆ ಸರ್ಕಾರದ ಮುಂದೆ ಇಲ್ಲ. ಆ ರೀತಿಯ ಉದ್ದೇಶವೂ ಸರ್ಕಾರಕ್ಕೆ ಇಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.



ವಕ್ಫ್ ಆಸ್ತಿ ನೋಟೀಸುಗಳಿಗೆ ಸಂಬಂಧಿಸಿದಂತೆ ನವೆಂಬರ್ 4ರಂದು ಬಿಜೆಪಿ ಪ್ರತಿಭಟನೆ ಮಾಡುವುದರ ಕುರಿತು ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿದ ಮುಖ್ಯಮಂತ್ರಿಗಳು, ಬಿಜೆಪಿ ಸರ್ಕಾರದ ಅವಧಿಯಲ್ಲಿಯೇ ಸುಮಾರು 200ಕ್ಕೂ ಹೆಚ್ಚು ನೋಟೀಸ್‌ಗಳನ್ನು ನೀಡಿದ್ದಾರೆ. ಅವರದು ಇಬಂದಿ ರಾಜಕೀಯ ನಡೆ. ಯಾವ ರೈತರನ್ನೂ ಒಕ್ಕಲೆಬ್ಬಿಸುವುದಿಲ್ಲ ಎಂದು ■6ನೇ ಪುಟಕ್ಕೆ

ರಾಜ್ಯ ರಾಜಕಾರಣದಲ್ಲಿ ಕೈ ಹಾಕಲ್ಲ; ಇಲ್ಲೇನಿದ್ರೂ ನೀವೇ ಬಗೆಹರಿಸಿ

ಸಿಎಂ, ಡಿಸಿಎಂಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೂಚನೆ

ಬೆಂಗಳೂರು, ಅ.31–ರಾಜ್ಯ ರಾಜಕಾರಣದ ವಿಚಾರದಲ್ಲಿ ನಾನು ಕೈ ಹಾಕಲ್ಲ. ಇಲ್ಲೇನಿದ್ರೂ ನೀವೇ ಬಗೆಹರಿಸಿಕೊಳ್ಳಬೇಕು ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ. ಕೆಪಿಸಿಸಿ ಕಚೇರಿಯಲ್ಲಿ ಗುರುವಾರ ನಡೆದ ಇಂದಿರಾ ಗಾಂಧಿ ಪುಣ್ಯ ಸ್ಮರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಾನು ರಾಜ್ಯದಲ್ಲಿ ನಡೆಯುವ ವಿದ್ಯಮಾನಗಳ ಬಗ್ಗೆ ಮಾತನಾಡುವುದಿಲ್ಲ ಎಂದರು.

ರಾಜ್ಯ ರಾಜಕಾರಣದ ವಿಚಾರದಲ್ಲಿ ಏನೇ ಕೇಳಿದ್ರೂ ಇಲ್ಲಿಯ ನಾಯಕರನ್ನೇ ಕೇಳಿ ಅಂತೇನೆ. ನಾನೇನಾದ್ರೂ ಮಾತನಾಡಿದರೆ ಅದು ರಾಷ್ಟ್ರಮಟ್ಟದಲ್ಲಿ ದೊಡ್ಡದಾಗುತ್ತದೆ. ಅದಕ್ಕೆ ನಾನು ಏನೂ ಮಾತನಾಡಲ್ಲ. ಇಲ್ಲಿ ನೀವೇ ಬಗೆಹರಿಸಿಕೊಳ್ಳಬೇಕು ಎಂದು ಸಿಎಂ, ಡಿಸಿಎಂ ಹಾಗೂ ನಾಯಕರಿಗೆ ಖರ್ಗೆ ಹಿತವಚನ ನೀಡಿದರು. ದೇಶದಲ್ಲಿ ದಲಿತರ ಮೇಲೆ ಅನ್ಯಾಯ ಆಗುತ್ತಿದೆ. ಅದರ ಬಗ್ಗೆ ಒಂದೂ ಮಾತು ಹೇಳಲ್ಲ. ಮಹಾರಾಷ್ಟ್ರದಲ್ಲಿ ಹೊಡೆಯುವ ಕೆಲಸ ಮಾಡುತ್ತಿದ್ದಾರೆ. ಎಲ್ಲಾ ಕಡೆ ಬಿಜೆಪಿ ಅವರದ್ದು ರಾಜಕಾರಣವೇ. ಪ್ರತಿಯೊಂದರಲ್ಲೂ ರಾಜಕಾರಣ ಮಾಡುತ್ತಾರೆ. ಇಂತಹವರನ್ನೂ ನಂಬಿ ದೇಶ ಪ್ರಗತಿ ಸಾಧಿಸಲ್ಲ. ದೇಶ ಒಗ್ಗೂಡಲ್ಲ, ಪ್ರತಿಯೊಂದರಲ್ಲೂ ನನ್ನದೇ ನಡೆಯಬೇಕು. ಇದು ಅವರ ಧೋರಣೆ ಎಂದರು. ಇದೇ ಸಂದರ್ಭದಲ್ಲಿ ಪ್ರಧಾನಿ ಮೋದಿ ವಿರುದ್ಧ ಖರ್ಗೆ ವಾಗ್ದಾಳಿ ನಡೆಸಿದರು.



ಗ್ಯಾರಂಟಿ ಯೋಜನೆಗಳ ಪರಿಷ್ಕರಣೆ ವಿವಾದಕ್ಕೆ ಸಂಬಂಧಿಸಿದಂತೆ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿಕೆ ಶಿವಕುಮಾರ್ ಅವರಿಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಖಡಕ್ ಸೂಚನೆ ನೀಡಿದ್ದಾರೆ. ಗ್ಯಾರಂಟಿ ಬಗ್ಗೆ ತಲೆದೋರಿದ ವಿವಾದದ ಹಿನ್ನೆಲೆಯಲ್ಲಿ ಕೆಪಿಸಿಸಿ ಕಚೇರಿಯಲ್ಲಿ ನಡೆದ ಕಾರ್ಯಕ್ರಮದ ಸಂದರ್ಭದಲ್ಲೇ ಈ ಸೂಚನೆ ನೀಡಿದ್ದಾರೆ. ■6ನೇ ಪುಟಕ್ಕೆ

ರೈತರ ಜಮೀನು ವಕ್ಫ್ ಕಬಳಿಕೆ ಯತ್ನ; ನ.4ರಿಂದ ಬಿಜೆಪಿ ಹೋರಾಟ

ಬೆಂಗಳೂರು, ಅ.31–(ಕೆಎಂಶಿ) ರೈತರ ಜಮೀನು, ದೇವಸ್ಥಾನಗಳ ಆಸ್ತಿಗಳನ್ನು ಕಬಳಿಸುತ್ತಿರುವ ವಕ್ಫ್ ಮಂಡಳಿ ಹಾಗೂ ಕಾಂಗ್ರೆಸ್ ಸರ್ಕಾರದ ವಿರುದ್ಧ ನ.4ರಿಂದ ತೀವ್ರ ಹೋರಾಟ ಆರಂಭಿಸಲಾಗುವುದು ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ ತಿಳಿಸಿದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಜಯಪುರದ ಬಳಿಕ ಕೋಲಾರದಲ್ಲಿ ದೇವಸ್ಥಾನದ ಆಸ್ತಿಗಳನ್ನು ವಕ್ಫ್ ಬೋರ್ಡ್ ಆಸ್ತಿ ಎಂದು ನಮೂದಿಸಲಾಗಿದೆ. ನಾಗಮಂಗಲ, ಚನ್ನಪಟ್ಟಣ, ಬೆಳಗಾವಿ ಮೊದಲಾದ ಕಡೆಗಳಲ್ಲಿ ರೈತರ ಜಮೀನುಗಳನ್ನು ಕೊಳ್ಳೆ ಹೊಡೆಯಲು ಪಹಣಿಯಲ್ಲಿ ವಕ್ಫ್ ಆಸ್ತಿ ಎಂದು ನಮೂದಿಸಲಾಗಿದೆ. ಇದರ ವಿರುದ್ಧ ಬಿಜೆಪಿ ಹೋರಾಟ ಆರಂಭಿಸಿದೆ ಎಂದು ತಿಳಿಸಿದರು. ■6ನೇ ಪುಟಕ್ಕೆ

ಬೆಂಗಳೂರು, ಮುಂಬೈನಲ್ಲಿ ನಡೆಯುತ್ತಿದ್ದ ಭೂಗತ ಪಾತಕಿಗಳ ಉಪಟಳ ಸಾಂಸ್ಕೃತಿಕ ನಗರಿಗೂ ಕಾಲಿಟ್ಟಿದೆ!

ಮೈಸೂರು ಜೈಲಲ್ಲಿರುವ ರೌಡಿಯಿಂದ ರಿಯಲ್ ಎಸ್ಟೇಟ್ ಉದ್ಯಮಿಗೆ ಬೆದರಿಕೆ; 40 ಲಕ್ಷ ನೀಡದಿದ್ದರೆ ಒಂದು ಗತಿ ಕಾಣಿಸುವ ಎಚ್ಚರಿಕೆ

- ಹೆಬ್ಬಾಳು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು
- ಸಹಚರರು ಮಾಡಿದ ಮೊಬೈಲ್ ಕರೆ ಮೂಲಕ ಜೈಲಲ್ಲಿರುವ ಮಂಜೇಶ್ ಎಂಬಾತ ಧಮ್ಕಿ

ಮೈಸೂರು, ಅ.31(ಬಿಎಲ್‌ಯು)–ಬೆಂಗಳೂರು, ಮುಂಬೈನಂತಹ ಮೆಟ್ರೋಪಾಲಿಟನ್ ನಗರಗಳಲ್ಲಿ ಜೈಲಿನಿಂದಲೇ ಭೂಗತ ಪಾತಕಿಗಳು ಕರೆ ಮಾಡಿ ಹಣಕ್ಕಾಗಿ ಬೆದರಿಕೆ ಹಾಕುವುದು, ಡೀಲ್ ವಿಚಾರದಲ್ಲಿ ಧಮ್ಕಿ ಹಾಕುವುದನ್ನು ಕೇಳಿದ್ದೇವೆ. ಇಂತಹುದೇ ಸಂಸ್ಕೃತಿ ನಮ್ಮ ಸಾಂಸ್ಕೃತಿಕ ನಗರಿ ಮೈಸೂರಿಗೂ ಕಾಲಿಟ್ಟಿರುವ ಆಘಾತಕಾರಿ ವಿಷಯ ವರದಿಯಾಗಿದೆ.

ಮೈಸೂರಿನ ಹೆಬ್ಬಾಳು 2ನೇ ಹಂತದಲ್ಲಿ ವಾಸವಿರುವ ರಿಯಲ್ ಎಸ್ಟೇಟ್ ಉದ್ಯಮಿ ರಾಜೇಂದ್ರ ರಾವ್(48) ಎಂಬುವರಿಗೆ ಜೈಲಿನಲ್ಲಿದ್ದಾನೆ ಎನ್ನಲಾದ ಮಂಜೇಶ್ ಎಂಬ ರೌಡಿ ಕರೆ ಮಾಡಿ 40 ಲಕ್ಷ ರೂ. ನೀಡುವಂತೆ ಬೆದರಿಕೆ ಹಾಕಿದ್ದಲ್ಲದೇ, ಜೀವಭಯವೊಡ್ಡಿದ ಬಗ್ಗೆ ಹೆಬ್ಬಾಳು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೆಲವು ರೌಡಿಗಳು ರಾಜೇಂದ್ರ ರಾವ್ ಅವರನ್ನು ಭೇಟಿ ಮಾಡಿ ಬೆದರಿಕೆ ಹಾಕಿದ್ದಲ್ಲದೇ, ತಾವೇ ಜೈಲಿನಲ್ಲಿರುವ ಮಂಜೇಶ್

> **ರಾಜೇಂದ್ರ ರಾವ್ ಅವರು ದೂರು ಸಲ್ಲಿಸಿದ್ದಾರೆ. ಆದರೆ ಅದು ಇನ್ನೂ ಎಫ್‌ಐಆರ್ ಆಗಿಲ್ಲ. ಅವರು ಸುಳ್ಳು ಆರೋಪ ಮಾಡುತ್ತಿದ್ದಾರೆ ಅನ್ನಿಸುತ್ತಿದೆ. ಈ ಬಗ್ಗೆ ತನಿಖೆ ನಡೆಸುತ್ತಿದ್ದೇವೆ.**
> **–ಮಲ್ಲೇಶ್, ಹೆಬ್ಬಾಳ ಠಾಣೆ ಇನ್‌ಸ್ಪೆಕ್ಟರ್**

ಎಂಬ ರೌಡಿಗೆ ಕರೆ ಮಾಡಿ, ಮೊಬೈಲ್ ಅನ್ನು ರಾಜೇಂದ್ರ ರಾವ್ ಅವರಿಗೆ ಕೊಟ್ಟಿದ್ದಾರೆ. ಅತ್ತ ಮಾತನಾಡಿದ ಮಂಜೇಶ್ 40 ಲಕ್ಷ ರೂ. ಕೊಡಬೇಕು. ಇಲ್ಲದಿದ್ದರೆ ಒಂದು ಗತಿ ಕಾಣಿಸುತ್ತೇನೆ ಎಂದು ಬೆದರಿಕೆ ಹಾಕಿರುವುದಾಗಿ ದೂರಿನಲ್ಲಿ ತಿಳಿಸಲಾಗಿದೆ.

ವಿವರ: ರಾಜೇಂದ್ರ ರಾವ್ ಅವರು 2018ರಲ್ಲಿ ಮಹದೇವ ಮತ್ತು ಚಂದ್ರಶೇಖರ್ ಎಂಬುವರೊಂದಿಗೆ ರಿಯಲ್ ಎಸ್ಟೇಟ್ ವ್ಯವಹಾರ ನಡೆಸುತ್ತಿದ್ದರು. ಅವರು ಚಂದ್ರಶೇಖರ್ ಅವರಿಗೆ ನೀಡಬೇಕಾದ 27 ಲಕ್ಷ ರೂ.ಗಳನ್ನು ಆರ್‌ಟಿಜಿಎಸ್ ಮೂಲಕ 3 ಕಂತುಗಳಲ್ಲಿ ನೀಡಿದ್ದಾರೆ. ಆದರೆ ಕಳೆದ ನಾಲ್ಕೈದು ತಿಂಗಳಿಂದ ಚಂದ್ರಶೇಖರ್ ತನಗೆ ಇನ್ನೂ 40 ಲಕ್ಷ ರೂ. ಕೊಡಬೇಕೆಂದು ನಾಲ್ಕೈದು ಯುವಕರನ್ನು ಅವರ ಮನೆಗೆ ಕರೆದುಕೊಂಡು ಬಂದು ಧಮ್ಕಿ ಹಾಕಿದ್ದಾಗಿ ದೂರಿನಲ್ಲಿ ಹೇಳಲಾಗಿದೆ. ಚಂದ್ರಶೇಖರ್ ಜೊತೆ ಬಂದಿದ್ದ ಯುವಕರು, ನಾವು ರೌಡಿ ಮಂಜೇಶ್ ಕಡೆಯವರು. ನಮ್ಮ ಮಂಜೇಶ್ ಅವರು ಜೈಲಿನಿಂದ ಮಾತನಾಡುತ್ತಾರೆ. ಮಾತನಾಡಿ ಎಂದು ತಮ್ಮದೇ ಮೊಬೈಲ್‌ನಲ್ಲಿ ಕರೆ ಮಾಡಿ, ರಾಜೇಂದ್ರ ರಾವ್ ಅವರಿಗೆ ಕೊಟ್ಟಿದ್ದಾರೆ. ಆ ವೇಳೆ ಮಾತನಾಡಿದ ಮಂಜೇಶ್, 40 ಲಕ್ಷ ರೂ. ಕೊಡದಿದ್ದರೆ ಒಂದು ಗತಿ ಕಾಣಿಸುತ್ತೇವೆ ಎಂದು ಬೆದರಿಕೆ ಹಾಕಿದ್ದಾನೆ. ನಂತರ ಅ.26ರಂದು ಬೆಳಗ್ಗೆ ರೌಡಿ ಮಂಜೇಶ್ ಕಡೆಯವರಾದ ತಿಲಕ್ ಅಲಿಯಾಸ್ ಸುರೇಶ್ ಮತ್ತು ಅನಿಲ್ ಎಂಬುವರು ರಾಜೇಂದ್ರ ರಾವ್ ಅವರ ಮನೆಗೆ ಬಂದು ಹಣ ನೀಡದಿದ್ದರೆ ಗತಿ ಕಾಣಿಸುತ್ತೇವೆ ಎಂದು ಬೆದರಿಕೆ ■6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಪ್ರಿನ್ಸಿಪಾಲ್ : ಏನು ಮಕ್ಕಳಾ, ಏನು ನಿಮ್ಮ ಸಮಸ್ಯೆ?
ಮಕ್ಕಳು : ನಮ್ಮ ಕ್ಲಾಸ್ ಟೀಚರ್ ಬಗ್ಗೆ ಕಂಪ್ಲೇಂಟ್ ಮಾಡಬೇಕಿತ್ತು..
ಪ್ರಿನ್ಸಿಪಾಲ್ : ಏನದು?
ಮಕ್ಕಳು : ನಮ್ಮ ಟೀಚರ್‌ಗೆ ಏನೂ ಗೊತ್ತಿಲ್ಲ ಸರ್, ಎಲ್ಲದಕ್ಕೂ ನಮಗೇ ಆನ್ಸರ್ ಮಾಡಿ.. ಆನ್ಸರ್ ಮಾಡಿ ಅಂತಾರೆ...

ಮೈಸೂರು ಮಿತ್ರ

ಶುಕ್ರವಾರ, 1 ನವೆಂಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಎಣಿಸಲಾಗದಷ್ಟು ಗುಣಿಸಲಾಗದಷ್ಟು ಕಾವ್ಯಗಳನ್ನು
ಸೃಷ್ಟಿಸುವ ಕಾರ್ಖಾನೆ ಹೆಣ್ಣೇ ಅದು ನಿನ್ನ ಕಣ್ಣೆ. – ಶ್ರೀಧರ್

ವೇದ ಸುಳ್ಳಾದರೂ { ಆರಕ್ಕೇರಲಿಲ್ಲ,
ಗಾದೆ ಸುಳ್ಳಾಗದು { ಮೂರಕ್ಕಿಳಿಯಲಿಲ್ಲ

ನಿಮ್ಮ ಪತ್ರಗಳು

ಕುಕ್ಕರಹಳ್ಳಿಯಲ್ಲಿ ಶೌಚಾಲಯ ದುರಸ್ತಿಪಡಿಸಿ



ಮಾನ್ಯರೆ,

ಮೈಸೂರಿನ ಕುಕ್ಕರಹಳ್ಳಿ ಕೆರೆಗೆ ಪ್ರತಿದಿನ ಬೆಳಗ್ಗೆ ಮತ್ತು ಸಂಜೆ ಸಾವಿರಾರು ಮಂದಿ ತಮ್ಮ ದೈನಂದಿನ ಚಟುವಟಿಕೆಗಳಿಗೆ ಮತ್ತು ವಾಯುವಿಹಾರಕ್ಕಾಗಿ ಬರುತ್ತಾರೆ. ಕುಕ್ಕರಹಳ್ಳಿ ಕೆರೆಯಲ್ಲಿ ಎಲ್ಲವನ್ನೂ ಚೆನ್ನಾಗಿ ನಿರ್ವಹಣೆ ಮಾಡಲಾಗಿದೆ. ಆದರೆ ಹಲವಾರು ತಿಂಗಳುಗಳಿಂದ ಇಲ್ಲಿರುವ ಶೌಚಾಲಯವನ್ನು ನಿರ್ಲಕ್ಷಿಸಲಾಗಿದೆ. ಇದರಿಂದ ಕುಕ್ಕರಹಳ್ಳಿ ಕೆರೆಗೆ ಬರುವ ಸಾರ್ವಜನಿಕರು, ವಾಯುವಿಹಾರಿಗಳಿಗೆ ತುಂಬಾ ತೊಂದರೆಯಾಗಿದೆ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನಹರಿಸಿ ಶೌಚಾಲಯವನ್ನು ದುರಸ್ತಿಪಡಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಈ ಮೂಲಕ ಮನವಿ. – ವಿ. ಸೂರಜ್, ಮೈಸೂರು.

■ ದೀಪಾವಳಿ, ಬೇಡ ಶಬ್ದದ ಹಾವಳಿ



ಮಾನ್ಯರೆ,

ದೀಪಾವಳಿ ಹಬ್ಬ ಆರಂಭವಾಗಿದೆ. ದೀಪಾವಳಿ ಹಬ್ಬ ಎಂದರೆ ಬೆಳಕಿನ ಹಬ್ಬ. ಎಲ್ಲೆಲ್ಲೂ ಬೆಳಕು ಪಸರಿಸಬೇಕು. ಆದರೆ, ಈ ಹಬ್ಬದಲ್ಲಿ ಮುಖ್ಯವಾಗಿ ಬಳಸುವ ಪರಿಣಾಮಕಾರಿ ಸ್ಫೋಟಕ ವಸ್ತುವೆಂದರೆ ಶಬ್ದವನ್ನುಂಟು ಮಾಡುವ 'ಪಟಾಕಿ'. ಈ ಪಟಾಕಿಯನ್ನು ಹೆಚ್ಚು ಹೆಚ್ಚು ಬಳಸುವುದರಿಂದ ಮೂಕ ಪ್ರಾಣಿ, ಪಕ್ಷಿಗಳಿಗೆ, ಹಿರಿಯ ನಾಗರಿಕರಿಗೆ ಅತೀವ ತೊಂದರೆಯಾಗುವುದರ ಜೊತೆಗೆ ಅವರ ಆರೋಗ್ಯದ ಮೇಲೂ ದುಷ್ಪರಿಣಾಮ ಬೀರುತ್ತದೆ. ಆದ್ದರಿಂದ ಪಟಾಕಿ ನಿಷೇಧಿಸಿ ಶಬ್ದಮಾಲಿನ್ಯವನ್ನು ತಡೆಗಟ್ಟುವುದರ ಜೊತೆಗೆ ಬೆಳಕಿನ ಹಬ್ಬದಲ್ಲಿ ಬೆಳಕಿಗೆ ಹೆಚ್ಚು ಒತ್ತು ನೀಡಲಿ.

–ಪ್ರದೀಪ್, ಯರಗನಹಳ್ಳಿ, ಮೈಸೂರು

■ ಕನ್ನಡಿಗರಿಗೆ ಕನ್ನಡದ ಅಸ್ಮಿತೆ ಸದಾ ಇರಬೇಕಿದೆ

ಮಾನ್ಯರೆ,

ಕನ್ನಡ ರಾಜ್ಯೋತ್ಸವದ ಸಂದರ್ಭದಲ್ಲಿ ಕನ್ನಡ ಅಸ್ಮಿತೆ ಎನ್ನುವ ಪದಪ್ರಯೋಗ ಮತ್ತೆ ಮತ್ತೆ ಕೇಳಿಬರುತ್ತಿದೆ. ಕನ್ನಡವು ವಿವಿಧ ಕಾಲಘಟ್ಟಗಳಲ್ಲಿ ಸಂಸ್ಕೃತ, ಇಂಗ್ಲಿಷ್ ಭಾಷೆಗಳ ಎದುರಿನಲ್ಲಿ ತನ್ನ ಅಸ್ಮಿತೆಗಾಗಿ ಹೋರಾಟ ನಡೆಸಿದೆ. ಆದರೀಗ ಕನ್ನಡದ ನೆಲದಲ್ಲಿ ಕನ್ನಡದ ಅಸ್ಮಿತೆಯನ್ನು ಸದಾ ಉಳಿಸಿ ಬೆಳೆಸಿ ಎಂದು ನಾವುಗಳು ನಮ್ಮವರನ್ನೇ ಕೇಳುವಂತೆ ಹೇಳುವಂತೆ ಆಗುವುದರ ಮಟ್ಟಿಗೆ ನಮ್ಮ ಕನ್ನಡದ ಸ್ಥಿತಿಗತಿ ಹಾಗೂ ವಾತಾವರಣ ಇದೆ. ಇದು ತಪ್ಪಬೇಕು.

ಕನ್ನಡದ ನೆಲದಲ್ಲಿ ಜನಿಸಿದ ನಾವು ಬೇರೆ ಬೇರೆ ಭಾಷೆಗಳನ್ನು ಗೌರವಿಸಬೇಕು. ಆದರೆ ಕನ್ನಡ ನಮ್ಮ ಉಸಿರಾಗಿರಬೇಕು. ಕನ್ನಡ ಭಾಷೆಗೆ ನಶಿಸುವ ಆತಂಕವಿಲ್ಲ. ಏಕೆಂದರೆ ಶತಮಾನಗಳಷ್ಟು ಇತಿಹಾಸ ಇರುವ ಕನ್ನಡ ಭಾಷೆಗೆ ತನ್ನದೇ ಆದ ಸಾಂಸ್ಕೃತಿಕ ಇತಿಹಾಸವಿದ್ದು, ಇಂತಹ ಭಾಷೆಯ ಉಳಿವು, ಬೆಳವಣಿಗೆ ಮತ್ತು ಪ್ರಸರಣ ಮಾಡುವುದು ನಮ್ಮ ಆದ್ಯ ಕರ್ತವ್ಯವಾಗಬೇಕು. ನಮ್ಮ ಕನ್ನಡವನ್ನು ನಾವುಗಳು ಹೆಚ್ಚೆಚ್ಚು ಬಳಸುವಂತಾಗಬೇಕು. ನಮ್ಮ ಹೆಮ್ಮೆಯ ಕನ್ನಡವನ್ನು ಮಾತನಾಡಲು ಹಿಂಜರಿಯುವ ಮನೋಭಾವ ಸರಿಯಲ್ಲ. ಕನ್ನಡ ಭಾಷೆ ವಿಚಾರ ಬಂದಾಗ ಯಾವುದೇ ಹೊಂದಾಣಿಕೆ ಮಾಡಿಕೊಳ್ಳಬಾರದು. ಹೆಮ್ಮೆಯಿಂದ ಕನ್ನಡಿಗರು ಎಂದು ಹೇಳಿಕೊಳ್ಳುವ ನಾವುಗಳು ನವೆಂಬರ್ ಕನ್ನಡ ರಾಜ್ಯೋತ್ಸವಕ್ಕೆ ಮಾತ್ರ ಸೀಮಿತವಾಗದೆ ನಿತ್ಯ ಕನ್ನಡ ಭಾಷೆಯನ್ನು ಮಾತನಾಡುವುದನ್ನು ರೂಢಿಸಿಕೊಳ್ಳಬೇಕು. ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಕನ್ನಡದ ಜತೆಗೆ ಇತರ ಭಾಷೆಗಳನ್ನೂ ಕಲಿಯುವ ಮೂಲಕ ಕನ್ನಡದ ಸಿರಿವಂತಿಕೆಯನ್ನು ಹೆಚ್ಚಿಸಬೇಕು. ತೀರಾ ಇತ್ತೀಚೆಗೆ ಕನ್ನಡ ರಾಜ್ಯೋತ್ಸವ ಎಂಬುದು ಕನ್ನಡಪರ ಸಂಘಟನೆಗಳು ಮತ್ತು ಆಟೋರಿಕ್ಷಾ ಚಾಲಕರಿಗೆ ಕನ್ನಡದ ಹಬ್ಬವಾದರೆ, ವಿದ್ಯಾವಂತರು, ವಿಚಾರವಂತರೆನಿಸಿಕೊಂಡ ಮಂದಿಯಲ್ಲಿ ಅಂತಹ ಕನ್ನಡದ ಸ್ವಾಭಿಮಾನ ಮತ್ತು ಆತ್ಮಾಭಿಮಾನ ನೋಡಲು ಸಾಧ್ಯವಾಗುತ್ತಿಲ್ಲದಿರುವುದು ಬೇಸರದ ಸಂಗತಿ. ಇದರಿಂದಾಗಿಯೇ ಕನ್ನಡ ಶಾಸ್ತ್ರೀಯ ಭಾಷೆ ಎಂಬುದು ಬರೀ ಘೋಷಣೆಗೆ ಮಾತ್ರ ಸೀಮಿತವಾಗಿದೆ. ನಮ್ಮ ಮಾತೃಭಾಷೆ ಪ್ರೀತಿಸೋಣ. ಇತರ ಭಾಷೆಗಳನ್ನು ಗೌರವಿಸೋಣ. ಭಾಷೆ ಹಾಗೂ ದೇಶಾಭಿಮಾನವನ್ನು ಎಲ್ಲರೂ ಬೆಳೆಸಿಕೊಂಡು ನಮ್ಮ ಕರುನಾಡಿನಲ್ಲಿ ಕನ್ನಡ ಕಟ್ಟುವ ಕೆಲಸವನ್ನು ಕನ್ನಡಿಗರಾದ ನಾವುಗಳು ನಿತ್ಯ ನಿರಂತರ ಮಾಡೋಣ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

■ ಉಪಚುನಾವಣೆ : ಮುಜುಗರವಾದ ಖಾಸಗಿ ಚಾನೆಲ್‌ಗಳ ಅತಿಯಾದ ಪ್ರಸಾರ

ಮಾನ್ಯರೆ,

ಇದೇ ನವೆಂಬರ್ 13 ರಂದು ಖಾಲಿ ಇರುವ ರಾಜ್ಯದ ಮೂರು ವಿಧಾನಸಭಾ ಕ್ಷೇತ್ರದಲ್ಲಿ ಉಪಚುನಾವಣೆ ನಡೆಯುವುದು ಸರಿಯಷ್ಟೆ ಆದರೆ ಕೆಲವು ದೃಶ್ಯ ಮಾಧ್ಯಮಗಳು ಚನ್ನಪಟ್ಟಣದ ಉಪ ಚುನಾವಣೆಗೆ ಅತಿಯಾದ ರೋಚಕವಾಗಿ ಸುದ್ದಿ ಪ್ರಸಾರ ಮಾಡುತ್ತಿವೆ. ಕೆಲವು ಖಾಸಗಿ ಮಾಧ್ಯಮಗಳಂತೂ ಒಂದು ಗಂಟೆಯ ಸುದ್ದಿ ಪ್ರಸಾರದಲ್ಲಿ ಸುಮಾರು ಅರ್ಧ ಗಂಟೆಗಳ ಕಾಲ ಈ ವಿಧಾನಸಭಾ ಚುನಾವಣೆ ಬಗ್ಗೆ ಪ್ರಸಾರ ಮಾಡುತ್ತಿರುವುದು ತೀರಾ ಅತಿಯಾಯಿತು ಎನಿಸುತ್ತಿದೆ. ಕೆಲವು ದಿನಗಳ ಹಿಂದೆ ಪ್ರಜ್ವಲ್ ರೇವಣ್ಣನ ಸುದ್ದಿ ಮತ್ತು ಸಿನಿಮಾ ನಟ ದರ್ಶನ್ ಸುದ್ದಿ ನೋಡಿ ನೋಡಿ ಪ್ರೇಕ್ಷಕರು ಕೆಲವು ಖಾಸಗಿ ಚಾನೆಲ್‌ಗಳನ್ನೇ ಹಾಕುತ್ತಿರಲಿಲ್ಲ. ಈಗ ಕೆಲವರು ಖಾಸಗಿ ದೃಶ್ಯ ಮಾಧ್ಯಮಗಳನ್ನೇ ನೋಡುವುದನ್ನು ಬಿಟ್ಟಿದ್ದಾರೆ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು



ನಿವೇದಿತ ಹೆಚ್.
ಇಂಗ್ಲಿಷ್ ಉಪನ್ಯಾಸಕಿ
ಯುವರಾಜ ಕಾಲೇಜು
ಮೈಸೂರು.

ಮಂಥನ

ಕನ್ನಡ ಬೆಳೆಯಬೇಕೆ... ಹಾಗಿದ್ದರೆ ಬಳಸಬೇಕು!




ಪೂಜಾ ಗಾಂಧಿ


ಚಿರಂಜೀವಿ ಸಿಂಗ್


ಸರಿತಾ


ನಾ. ಕಸ್ತೂರಿ


ಜೆನ್ನಿಫರ್

ಕಳೆದ ಆಗಸ್ಟ್‌ನಲ್ಲಿ ಇನ್ನೇನು ಜಾರಿಯಾಗಿಯೇ ಬಿಟ್ಟಿತು ಎನ್ನುವಂತಿದ್ದ ಮಸೂದೆಯೊಂದು ಹಾಗೆಯೇ ಹಿಂದೆ ಸರಿದು ಬಿಟ್ಟಿತು. ನಾನು ಯಾವುದರ ಬಗೆಗೆ ಮಾತನಾಡುತ್ತಿದ್ದೇನೆಂದು ನಿಮಗೆಲ್ಲರಿಗೂ ಅರ್ಥವಾಗಿದೆ. ಹೌದು, ಕನ್ನಡಿಗರಿಗೆ ಕನ್ನಡ ನಾಡಿನಲ್ಲಿ ಖಾಸಗಿ ವಲಯದಲ್ಲಿ ಉದ್ಯೋಗ ಮೀಸಲಿಡುವ ಮಸೂದೆಯನ್ನು ನಮ್ಮ ಮುಖ್ಯಮಂತ್ರಿಗಳು ಉತ್ಸಾಹದಿಂದ ಜಾರಿ ಮಾಡುವ ನಿರ್ಧಾರದಲ್ಲಿದ್ದರು. ಆದರೆ ಮಸೂದೆಗೆ ವ್ಯಾಪಕ ವಿರೋಧ ವ್ಯಕ್ತವಾಗಿದ್ದರಿಂದ, ಅತ್ಯಂತ ಖೇದದೊಂದಿಗೆ ಸಮಯ ಕೇಳಿ ಮುಂದೂಡಿದರು. ವಿರೋಧ ಉಂಟಾದುದು ದೊಡ್ಡ ದೊಡ್ಡ ಉದ್ಯೋಗಪತಿಗಳಿಂದ ಮಾತ್ರವಲ್ಲ ಕನ್ನಡಿಗರಿಂದ ಕೂಡಾ! ಪುಟ್ಟ, ಮಧ್ಯಮ ಮತ್ತು ಬೃಹತ್ ಉದ್ಯಮ ನಡೆಸುವವರಿಂದ ಹಿಡಿದು ನಮ್ಮ–ನಿಮ್ಮಂತಹ ಸಾಮಾನ್ಯ ಜನರಿಂದಲೂ ವಿರೋಧ ಉಂಟಾಯಿತು ಎಂದರೆ ನಿಜಕ್ಕೂ ಆಘಾತಕಾರಿ ಸಂಗತಿ.

ಅಷ್ಟಕ್ಕೂ ಮಸೂದೆಯಲ್ಲಿ ಏನಿತ್ತು? ಖಾಸಗಿ ವಲಯದಲ್ಲಿ 50% ಆಡಳಿತಾತ್ಮಕ ಮತ್ತು ಆಡಳಿತಾತ್ಮಕವಲ್ಲದ 75% ಹುದ್ದೆಗಳಲ್ಲಿ ಕನ್ನಡಿಗರನ್ನು ನೇಮಿಸಬೇಕು. ಗ್ರೂಪ್ ಸಿ ಮತ್ತು ಡಿ ವಲಯದ ಹುದ್ದೆಗಳಲ್ಲಿ 100% ಮೀಸಲಾತಿ ಕನ್ನಡಿಗರಿಗೇ. ಈ ಮಸೂದೆಯ ಫಲಾನುಭವಿಯಾಗಲು ಇಲ್ಲಿಯೇ ಹುಟ್ಟಿ 10ನೆಯ ತರಗತಿಯವರೆಗೆ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಕನ್ನಡ ಕಲಿತಿರಬೇಕು. ಅಥವಾ 15 ವರ್ಷಗಳ ಕಾಲ ಕರ್ನಾಟಕದಲ್ಲಿ ನೆಲೆಸಿ ಕನ್ನಡವನ್ನು ಓದಲು ಬರೆಯಲು ಮಾತನಾಡಲು ಸಮರ್ಥರಾಗಿರಬೇಕು. ಅರ್ಹ ಸ್ಥಳೀಯ ಅಭ್ಯರ್ಥಿಗಳಿಲ್ಲದಿದ್ದಲ್ಲಿ 3 ವರ್ಷಗಳಲ್ಲಿ ತರಬೇತಿ ನೀಡಿ ಅರ್ಹರನ್ನಾಗಿಸಬೇಕು, ಅಷ್ಟೇ!

ಅಷ್ಟೇ ಎನಿಸುತ್ತಿಲ್ಲವೇ? ಹೌದು. ಸರ್ಕಾರದ ಆಶಯ ಏನಿತ್ತು? ಕನ್ನಡ ನಾಡು ಎಂದೆನಿಸಿರುವ ನಮ್ಮೀ ಕರುನಾಡಿನಲ್ಲಿ ಕೆಲಸ ಮಾಡುವವರಿಗೆ ಕನ್ನಡ ಬರಬೇಕು ಅಥವಾ ಹೀಗೆ ಹೇಳೋಣವೇ? ಕನ್ನಡ ಬರುವವರಿಗೆ ಇಲ್ಲಿ ಕೆಲಸ ದೊರೆಯಬೇಕು. ಅಷ್ಟೇ ಅಲ್ಲವೇ? ಇದಕ್ಕೆ ಈ ಮಟ್ಟಿಗಿನ ವಿರೋಧ ಎದ್ದಿತು ಎಂದಾದರೆ, ಕನ್ನಡಿಗರಾದ ನಮಗೆ ಅವಮಾನ ಎಂದು ಯಾರಿಗೂ ಏಕೆ ಅನಿಸುತ್ತಿಲ್ಲ? ಎರಡೂವರೆ ಸಾವಿರ ವರುಷಗಳ ಭವ್ಯ ಇತಿಹಾಸ ಹೊಂದಿರುವ ಕನ್ನಡ ಭಾಷೆಗೆ ಎಂತಹ ಅಪಚಾರ ಎಸಗುತ್ತಿದ್ದೇವೆ ಎಂಬ ಸಣ್ಣ ಅಪರಾಧೀ ಪ್ರಜ್ಞೆಯೂ ನಮ್ಮೆಲ್ಲರನ್ನು ಕಾಡುತ್ತಿಲ್ಲವೇಕೆ?

ಇದು ಹೊಸ ವಿಷಯವಲ್ಲ. 1986ರಲ್ಲಿ ಸಲ್ಲಿಕೆಯಾದ ಸರೋಜಿನಿ ಮಹಿಷಿ ವರದಿಯಲ್ಲಿ ಕೂಡಾ ಬಹುತೇಕ ಇವೇ ಅಂಶಗಳಿದ್ದವು. ಸರೋಜಿನಿ ಮಹಿಷಿ ವರದಿಯಲ್ಲಿ, ರಾಜ್ಯ ಸರ್ಕಾರದ ನೌಕರಿಗಳಲ್ಲಿ ಕನ್ನಡಿಗರಿಗೆ 100% ಮೀಸಲಾತಿಯಲ್ಲದೆ, ಕರ್ನಾಟಕದಲ್ಲಿ ಕಾರ್ಯನಿರ್ವಹಿಸುತ್ತಿರುವ ಕೇಂದ್ರ ಸರ್ಕಾರದ ಇಲಾಖೆಗಳಲ್ಲೂ ವಿವಿಧ ವಲಯಗಳ ನೌಕರಿಗಳಲ್ಲಿ 60–100% ಮೀಸಲಾತಿ ಇರಬೇಕೆಂದು ವರದಿ ಶಿಫಾರಸು ಮಾಡಿತ್ತು. ಆ ವರದಿ ಇನ್ನೂ ಜಾರಿಯಾಗಿಲ್ಲ! ಈಗ ಅದು ಅಪ್ರಸ್ತುತ ಎನ್ನುತ್ತ ಇಡೀ ವರದಿಯನ್ನೇ ಶಾಶ್ವತವಾಗಿ ಮೂಲೆಗೆ ಸರಿಸುವ ಹುನ್ನಾರವೂ ವ್ಯವಸ್ಥಿತವಾಗಿ ನಡೆದಿದೆ.

ಈ ಅನುಷ್ಠಾನ, ರದ್ದು, ಮುಂದೂಡಿಕೆ, ಮಂಡನೆ ಇತ್ಯಾದಿಗಳಲ್ಲಿ ಇರುವ ರಾಜಕೀಯವನ್ನಾಗಲೀ, ಸ್ವಹಿತಾಸಕ್ತಿಗಳನ್ನಾಗಲೀ, ಸ್ವಾರ್ಥಗಳನ್ನಾಗಲೀ, ನಾವು ಚರ್ಚಿಸುವುದು ಬೇಡ. ನೈತಿಕ ಮಟ್ಟದಲ್ಲಿ, ಪ್ರಾಮಾಣಿಕವಾಗಿ, ನಮಗೆ ನೆಲ–ಜಲ ಅನ್ನವನ್ನು ನೀಡಿರುವ ನಾಡಿನೆಡೆಗೆ ನಮ್ಮ ಕರ್ತವ್ಯಪರತೆಯ ಹಿನ್ನೆಲೆಯಲ್ಲಿ ಈ ವಿಷಯವನ್ನು ಒಮ್ಮೆ ಅವಲೋಕಿಸುವ ಇಚ್ಛೆಯಷ್ಟೇ.

ಭಾಷೆ ಎಂದರೆ ಏನು? ಕೇವಲ ಸಂವಹನ ಸಾಧನ ಅಷ್ಟೆಯೇ? ಪ್ರಪಂಚದೊಂದಿಗೆ ನಮ್ಮನ್ನು ಬೆಸೆಯುವ ಸಾಧನದ ಬಗೆಗೆ ನಮಗೆ ಅಭಿಮಾನ ಬೇಡವೇ? ಹುಟ್ಟಿನಿಂದ ನಮ್ಮ ಮಿದುಳಿನ ಕೋಶದಲ್ಲಿ ಜಾಗ ಪಡೆದು, ನಮ್ಮನ್ನು ಸಮಾಜದ ಭಾಗವಾಗುವಂತೆ ಮಾಡುವ ಭಾಷೆಗೆ ನಮ್ಮ ಭಾವಕೋಶದಲ್ಲಿಯೂ ಜಾಗ ಬೇಡವೇ? ನಮ್ಮ ಮಾತೃಭಾಷೆ, ಅದು ಯಾವುದೇ ಆಗಿರಲಿ, ಕಾಲಾಂತರದಲ್ಲಿ ಬೆಳೆದು ಬಂದ ಸಂಸ್ಕೃತಿಯ ಉನ್ನತಫಲವಾಗಿರುತ್ತದೆ. ಅದನ್ನು ಉಳಿಸಿ ಬೆಳೆಸುವುದು ಪ್ರತಿಯೊಬ್ಬನ ನೈತಿಕ ಕರ್ತವ್ಯವಾಗಿರುತ್ತದೆ. ನಮ್ಮ ಕನ್ನಡಕ್ಕೆ ಎರಡೂವರೆ ಸಾವಿರ ವರ್ಷಗಳ ಇತಿಹಾಸವಿದೆ. 800ವರ್ಷಗಳ ಹಿಂದೆಯೇ ಕನ್ನಡದಲ್ಲಿ ಮಹಾಕಾವ್ಯದ ರಚನೆಯಾಗಿತ್ತು. ಕಸ್ತೂರಿ ಎಂದು ಕರೆಯಲ್ಪಡುವ ಕನ್ನಡ ಕಿವಿಗೆ ಇಂಪು. ಅಕ್ಷರಗಳು ಮುತ್ತಿನ ಮಣಿಗಳು. ಇಂತಹ ಕನ್ನಡ ಭಾಷೆಯ ಬಗೆಗೆ ಏಕಿಷ್ಟು ತಾತ್ಸಾರ?

> ❝ ಶಾಸ್ತ್ರೀಯ ಭಾಷೆಯ ಸ್ಥಾನಮಾನವನ್ನು ಅರ್ಹವಾಗಿ ದಕ್ಕಿಸಿಕೊಂಡ ಭಾಷೆಯ ಸ್ಥಿತಿ ಇಂದು ಶೋಚನೀಯ ಎನ್ನಲು ನಾಚಿಕೆಯೆನಿಸುತ್ತದೆ. ಬೇರೆ ದೇಶಗಳಿಗೆ ಹೋಗಲು ಅಲ್ಲಿನ ಭಾಷೆಗಳ ಕಲಿಕೆಯ ಕೋರ್ಸ್‌ಗಳನ್ನು ಕಡ್ಡಾಯವಾಗಿ ಮಾಡಲೇಬೇಕು. ಇಂಗ್ಲಿಷ್ ಬರದವರಿಗೆ ಇಂಗ್ಲೆಂಡ್ ಅಮೆರಿಕಗಳಿಗೆ ಪ್ರವೇಶವುಂಟೇ? ಹಾಗೆಯೇ ಇಟಲಿ, ಫ್ರಾನ್ಸ್, ಜರ್ಮನಿಗಳು. ಅಲ್ಲಿ ಅವರು ಹೇಳುವ ನಿಯಮಗಳನ್ನು ಭಯ ಭಕ್ತಿಯಿಂದ ಪಾಲಿಸುವ ನಮಗೆ, ಕನ್ನಡ ಕಲಿಯಬೇಕೆಂದರೆ, ಅದೂ ಕನ್ನಡ ನಾಡಿನಲ್ಲಿ, ಸ್ವಾತಂತ್ರ್ಯಹರಣವೆನಿಸುವುದು ಹಾಸ್ಯಾಸ್ಪದ ಎನಿಸುವುದಿಲ್ಲವೇ? ❞

ಭಾರತದ ಹಲವು ರಾಜ್ಯಗಳಲ್ಲಿ ಹಲವು ಭಾಷೆಗಳಿವೆ. ಒಟ್ಟಾರೆ ಎಲ್ಲ ಭಾಷೆಗಳು ಇಂಗ್ಲಿಷಿನಿಂದ ತೊಂದರೆಗೀಡಾಗಿರತಕ್ಕಂಥವೇ. ಅದು ಬಿಟ್ಟು, ಉತ್ತರ ಭಾರತದಲ್ಲಿ ಅತಿಯಾದ ಹಿಂದಿ ಭಾಷೆಯ ಪ್ರಭಾವದಿಂದ ಉತ್ತರದ ಗುಜರಾತೀ, ರಾಜಸ್ತಾನೀ, ಹರಿಯಾಣ್ವೀ, ಬೆಂಗಾಲೀ, ಮರಾಠಿ, ಭೋಜ್ಪುರೀ, ಅಸ್ಸಾಮಿ ಮತ್ತಿತರ ಭಾಷೆಗಳು ಸಾಕಷ್ಟು ಸಂಕಷ್ಟಕ್ಕೆ ಒಳಗಾಗಿವೆ. ಇದರ ಬಗ್ಗೆ ನಾವು ಕೇಳುತ್ತಲೇ ಇರುತ್ತೇವೆ. ಉತ್ತರದ ಯಾವುದೇ ರಾಜ್ಯಕ್ಕೆ ಹೋದರೂ, ಹಿಂದಿಯೊಂದು ತಿಳಿದಿದ್ದರೆ ನೀವು ಆರಾಮವಾಗಿ ನಿಭಾಯಿಸಬಹುದು.

ಆದರೆ ದಕ್ಷಿಣದ ಕಡೆ ಬಂದರೆ ಚಿತ್ರಣ ಸ್ವಲ್ಪ ಬೇರೆಯೇ ಇದೆ. ಆಂಧ್ರಕ್ಕೆ (ತೆಲಂಗಾಣವೂ ಸೇರಿ) ಹೋದರೆ ನಿಮಗೆ ತೆಲುಗು ಬಂದರೆ ಸುಲಭ. ಕೇರಳದಲ್ಲಿಯೂ ಅಷ್ಟೇ. ಮಲಯಾಳೀ ಭಾಷೆ ತಿಳಿದಿಲ್ಲದಿದ್ದರೆ ಕಷ್ಟ. ಅಷ್ಟೇ ಅಲ್ಲ, ಪ್ರವಾಸ ಮಾಡುವುದೂ ಕಷ್ಟವಾಗುತ್ತದೆ. ಇಲ್ಲೊಂದು ವಿಷಯ ನೆನಪಾಗುತ್ತಿದೆ. ಶಿಕ್ಷಣಕ್ಕಾಗಿ ಕರ್ನಾಟಕಕ್ಕೆ ಬರುವ ಮಲಯಾಳೀ ಯುವಜನರ ಸಂಖ್ಯೆ ಅತಿಹೆಚ್ಚು. ನನ್ನ ಸ್ನೇಹಿತೆಯೊಬ್ಬಳ ತಮ್ಮ ಬೆಂಗಳೂರಿನ ಒಂದು ಕಾಲೇಜಿನಲ್ಲಿ ಪದವಿ ಓದುತ್ತಿದ್ದ. ಅಲ್ಲಿ ಮಲೆಯಾಳೀ ವಿದ್ಯಾರ್ಥಿಗಳೇ ಹೆಚ್ಚಿದ್ದರಂತೆ. ಮೈಸೂರಿನ ಅಪ್ಪಟ ಕನ್ನಡಿಗ ಹುಡುಗ, ಪದವಿ ಮುಗಿಸುವಷ್ಟರಲ್ಲಿ ಮಲಯಾಳೀ ಭಾಷೆಯನ್ನು ಕಲಿತದ್ದಷ್ಟೇ ಅಲ್ಲ, ಕನ್ನಡವನ್ನೂ ಮಲಯಾಳಿಗಳಂತೆ ಮಾತನಾಡಲು ಪ್ರಾರಂಭಿಸಿದ್ದ. ಇದು ಖಂಡಿತ ಕಾಲ್ಪನಿಕವಾಗಲೀ, ಉತ್ಪ್ರೇಕ್ಷೆಯಾಗಲೀ ಅಲ್ಲ. ಇನ್ನು ತಮಿಳು ಜನರ ಬಗೆಗೆ ಹೆಚ್ಚಿಗೆ ಹೇಳುವ ಅಗತ್ಯವೇ ಇಲ್ಲ. ಅವರ ಭಾಷಾಭಿಮಾನ ನಮ್ಮೆಲ್ಲರಿಗೂ ನಿಜಕ್ಕೂ ಆದರ್ಶಪ್ರಾಯ. ಬೇರೆ ಭಾಷೆ ತಿಳಿದಿದ್ದರೂ ಅವರು ಮಾತನಾಡಿ ಸಹಕರಿಸುವುದೇ ಇಲ್ಲ. ನಾವು ಪಾಂಡಿಚೇರಿಗೆ ಪ್ರವಾಸ ಹೋಗಿದ್ದಾಗ, ಅಲ್ಲಿ ಬಾಡಿಗೆಗೆ ತೆಗೆದುಕೊಂಡ ಕಾರಿನ ಡ್ರೈವರ್‌ಗೆ ಬೇರೆ ಭಾಷೆ ಅರ್ಥವಾಗುತ್ತಿತ್ತು. ಆದರೆ ಅವನು ನಮ್ಮ ಹಿಂದಿ–ಇಂಗ್ಲಿಷ್ ಅನ್ನು ಅರ್ಥ ಮಾಡಿಕೊಳ್ಳುವ ಗೋಜಿಗೇ ಹೋಗದೆ, ನಮ್ಮ ಇಡೀ ಪ್ರವಾಸವನ್ನೇ ಕೆಡಿಸಿಬಿಟ್ಟ. ಇನ್ನೊಮ್ಮೆ ಸ್ವಲ್ಪವಾದರೂ ತಮಿಳು ಕಲಿತು ಪ್ರವಾಸ ಬರಬೇಕು ಇಲ್ಲಿಗೆ ಎಂದುಕೊಂಡು ಹಿಂತಿರುಗಿದ್ದಷ್ಟೇ ನಮ್ಮ ಪಾಡಾಯಿತು.

ಇದೇ ಪರಿಸ್ಥಿತಿ ನಮ್ಮ ಕರ್ನಾಟಕದಲ್ಲಿ ಇದೆಯೇ ಎಂದು ಕೇಳುವ ಅಗತ್ಯವೇ ಇಲ್ಲ. ನಮ್ಮ ಅತಿಯಾದ ಬುದ್ಧಿವಂತಿಕೆಯೋ, ಹೊಂದಿಕೊಳ್ಳುವ ಗುಣವೋ, ಪರಭಾಷಾ ವ್ಯಾಮೋಹವೋ ನಮಗೆ ಎಲ್ಲ ಭಾಷೆಗಳನ್ನು ಕಲಿಸಿಬಿಟ್ಟಿದೆ. ವರ್ಷಗಟ್ಟಲೆಯಿಂದ ಇಲ್ಲಿರುವ ಪರಭಾಷಿಕರು ಹೌದು, ಇಲ್ಲ, ಬೇಕು, ಬೇಡ ಎನ್ನುವಷ್ಟೂ ಕನ್ನಡ ಕಲಿಯದೆಯೇ ಇಲ್ಲಿಯೇ ಮನೆಮಠ ಮಾಡಿಕೊಂಡು ಆರಾಮಾಗಿದ್ದಾರೆ. ಬೆಂಗಳೂರಿಗೆ ಹೋದರೆ ಕನ್ನಡ ಕೇಳುವುದೇ ಇಲ್ಲ ಎಂಬ ಉತ್ಪ್ರೇಕ್ಷೆಯ ಮಾತನ್ನು ನಾನಿಲ್ಲಿ ಹೇಳದೇ ಹೋದರೂ, ಎಷ್ಟರಮಟ್ಟಿಗೆ ಕನ್ನಡ ಕಿವಿಗೆ ಬೀಳುತ್ತದೆ ಎಂಬುದನ್ನು ನಾವು ಗಮನಿಸಬೇಕು. ಅದರಲ್ಲೂ ಶಾಲಾ ಕಾಲೇಜುಗಳಲ್ಲಿ ಓದುವ ಯುವ ಸಮೂಹವಂತೂ, ಕನ್ನಡ ಬಳಸುವುದೇ ಇಲ್ಲ! ಇಂಗ್ಲಿಷ್ ಮಾತನಾಡುವ ಮಕ್ಕಳನ್ನು ನೋಡಿ ಸಂತೋಷಪಡುವ ಪೋಷಕರ ಪಾಲೂ ಇದೆ ಇದರಲ್ಲಿ. ಹೊರಗೆ ಹೋಗುವ ಮಗು ಬೇರೆ ಭಾಷೆಯನ್ನು ಕಲಿತೇ ಕಲಿಯುತ್ತದೆ. ಮೊದಲು ನಾವು ನಮ್ಮ ಭಾಷೆಯನ್ನು ಮಗುವಿಗೆ ಕಲಿಸೋಣ ಎಂದು ಯೋಚನೆ ಮಾಡುವ ಜನರೆಷ್ಟಿದ್ದಾರೆ?

ಇದು ಈಗ್ಗೆ ಸ್ವಲ್ಪ ಹಿಂದಿನವರೆಗೂ ಬೆಂಗಳೂರಿನ ಕಥೆ ಮಾತ್ರ ಆಗಿತ್ತು. ಈಗ ಇಂಗ್ಲೀಷ್ ಆಡು ಮಾತಾಗಿ ಹಳ್ಳಿ ಹಳ್ಳಿಗಳನ್ನು ತನ್ನ ಕಬಂಧಬಾಹುವಿನೊಳಗೆ ಸೆಳೆದುಕೊಂಡುಬಿಟ್ಟಿದೆ. ಕನ್ನಡವನ್ನು ಕಾಟಾಚಾರಕ್ಕೆಂಬಂತೆ ಕಲಿಯುವ ಮಕ್ಕಳು, ಕೊಂಬು, ಏತ್ವ, ಇಳಿ, ವಟ್ರಸುಳಿ, ದೀರ್ಘಗಳಿಲ್ಲದ ಇಂಗ್ಲಿಷನ್ನೇ ಸುಲಭವೆನ್ನುತ್ತಾರೆ. ಹೈಸ್ಕೂಲಿಗೆ ಬಂದ ತಕ್ಷಣ ಕನ್ನಡವನ್ನು ತೃತೀಯ ಭಾಷೆಯನ್ನಾಗಿಸಿಕೊಳ್ಳುತ್ತಾರೆ. ಅಂತಾರಾಷ್ಟ್ರೀಯ ಪಠ್ಯದ ಶಾಲೆಗಳು ಮತ್ತು ಕೇಂದ್ರಿಯ ವಿದ್ಯಾಲಯದಂತಹ ಸರ್ಕಾರಿ ಶಾಲೆಗಳಲ್ಲಿ ಕನ್ನಡ ಕಲಿಸುವುದೇ ಇಲ್ಲ. ಅಲ್ಲಿ ಓದುವವರು ಕನ್ನಡದ ಮಕ್ಕಳೇ ಆದರೂ ಅವರು ಕನ್ನಡವನ್ನು ಮಾತನಾಡಬಲ್ಲರು. ಓದು–ಬರಹ ಶೂನ್ಯ? ಕೇಂದ್ರಿಯ ವಿದ್ಯಾಲಯಗಳಲ್ಲಿ ಜರ್ಮನ್ ಭಾಷೆಯನ್ನು ಕಲಿಸಲಾಗುತ್ತದೆ. ಅದನ್ನು ತೆಗೆದು ಹಾಕಬೇಕೆಂದು ಸರ್ಕಾರ ಈಗ್ಗೆ ಕೆಲವು ವರ್ಷಗಳ ಕೆಳಗೆ ನಿರ್ಧರಿಸಿದಾಗ, ಜರ್ಮನಿ ಸರ್ಕಾರವೇ ಮಧ್ಯ ಪ್ರವೇಶಿಸಿ ಹಾಗೆ ಮಾಡದಂತೆ ಭಾರತ ಸರ್ಕಾರಕ್ಕೆ ಮನವಿ ಮಾಡಿತು. ಆದರೆ ಅಲ್ಲಿ ಕನ್ನಡವನ್ನು ಕಲಿಸದ ಬಗ್ಗೆ ಯಾವುದೇ ಕನ್ನಡಿಗ ಪೋಷಕರಿಗೆ ತಕರಾರಿಲ್ಲ! ಕೆ ಡ್ರಾಮಾ ನೋಡಿ ಪ್ರಭಾವಿತರಾಗಿ ಕೊರಿಯನ್ ಕಲಿಯುವ ಮಕ್ಕಳ ಬಗ್ಗೆ ಅತೀವ ಹೆಮ್ಮೆಯಿದೆ! "ಅಯ್ಯೋ! ನಮ್ಮ ಮಕ್ಕಳಿಗೆ ಕನ್ನಡವೇ ಬರುವುದಿಲ್ಲ!" ಎನ್ನಲು ಅಪಾರ ಸಂತಸವಿದೆ.

ಶಾಸ್ತ್ರೀಯ ಭಾಷೆಯ ಸ್ಥಾನಮಾನವನ್ನು ಅರ್ಹವಾಗಿ ದಕ್ಕಿಸಿಕೊಂಡ ಭಾಷೆಯ ಸ್ಥಿತಿ ಇಂದು ಶೋಚನೀಯ ಎನ್ನಲು ನಾಚಿಕೆಯೆನಿಸುತ್ತದೆ. ಬೇರೆ ದೇಶಗಳಿಗೆ ಹೋಗಲು ಅಲ್ಲಿನ ಭಾಷೆಗಳ ಕಲಿಕೆಯ ಕೋರ್ಸ್‌ಗಳನ್ನು ಕಡ್ಡಾಯವಾಗಿ ಮಾಡಲೇಬೇಕು. ಇಂಗ್ಲಿಷ್ ಬಾರದವರಿಗೆ ಇಂಗ್ಲೆಂಡ್ ಅಮೆರಿಕೆಗಳಿಗೆ ಪ್ರವೇಶವುಂಟೇ? ಹಾಗೆಯೇ ಇಟಲಿ, ಫ್ರಾನ್ಸ್, ಜರ್ಮನಿಗಳು. ಅಲ್ಲಿ ಅವರು ಹೇಳುವ ನಿಯಮಗಳನ್ನು ಭಯ ಭಕ್ತಿಯಿಂದ ಪಾಲಿಸುವ ನಮಗೆ, ಕನ್ನಡ ಕಲಿಯಬೇಕೆಂದರೆ, ಅದೂ ಕನ್ನಡ ನಾಡಿನಲ್ಲಿ, ಸ್ವಾತಂತ್ರ್ಯಹರಣವೆನಿಸುವುದು ಹಾಸ್ಯಾಸ್ಪದ ಎನಿಸುವುದಿಲ್ಲವೇ?

ಪರಭಾಷೆಯವರಾಗಿ ಕನ್ನಡ ಕಲಿತು ಕನ್ನಡದ ಗರಿಮೆಯನ್ನು ಹೆಚ್ಚಿಸಿದ ಎಷ್ಟು ಜನ ಮಹನೀಯರಿಲ್ಲ ನಮಗೆ ಉದಾಹರಣೆಗಳಾಗಿ? ಒಮ್ಮೆ ಹಿಂತಿರುಗಿ ನೋಡಿದರೆ, ಮಾಸ್ತಿ, ಬೇಂದ್ರೆ, ಕಾರ್ನಾಡ್, ನಾ.ಕಸ್ತೂರಿ, ಡಿವಿಜಿ ಇವರೆಲ್ಲರ ಮಾತೃಭಾಷೆ ಕನ್ನಡವೇ? ಬೆಳಗಾದರೆ ನಾವು ಗುನುಗುವ ಸದಾ ಕೇಳಲು ಇಚ್ಛಿಸುವ ಹಳೆಯ ಕನ್ನಡ ಚಿತ್ರಗೀತೆಗಳನ್ನು ಹಾಡಿರುವ ಘಂಟಸಾಲ, ಪಿ.ಲೀಲ, ಪಿ.ಬಿ. ಶ್ರೀನಿವಾಸ್, ಎಸ್.ಜಾನಕಿ, ಪಿ.ಸುಶೀಲ, ಎಲ್.ಆರ್. ಈಶ್ವರಿ, ಎಸ್‌ಪಿಬಿ, ಚಿತ್ರಾ ಇವರೆಲ್ಲರೂ ಪರಭಾಷೆಯವರು ಎನ್ನುವುದು ನಮ್ಮ ಮೆದುಳಿಗೆ ಗೊತ್ತು ಮನಸ್ಸಿಗೆ ಎಂದಾದರೂ ಅನಿಸಿದ್ದುಂಟೇ?

ಆಯ್ತು ಆ ಕಾಲದ ಮಾತು ಬೇಡ. ನಮ್ಮ ಸುತ್ತಮುತ್ತಲೇ ಕಣ್ಣಾಡಿಸೋಣ. ಸಾಮಾಜಿಕ ಜಾಲತಾಣದಲ್ಲಿ ಜರ್ಮನ್ ಹುಡುಗಿ ಜೆನ್ನಿಫರ್ ಕನ್ನಡದಲ್ಲಿ ಮಾತನಾಡಿ ಎಲ್ಲರ ಮನ ಗೆದ್ದಿರುವ ಬಗ್ಗೆ ನೋಡಿಯೇ ಇರುತ್ತೀರಿ. ಪಂಜಾಬಿ ಮೂಲದ ಮಳೆ ಹುಡುಗಿ ಪೂಜಾ ಗಾಂಧಿ ಶಿಕ್ಷಕರನ್ನಿರಿಸಿಕೊಂಡು ಶ್ರದ್ಧೆ ಅಕ್ಕರೆಯಿಂದ ಕನ್ನಡ ಕಲಿತು ಈಗ ಇದೇ ಹೋರಾಟದಲ್ಲಿ ತೊಡಗಿಕೊಂಡಿರುವುದು, ತನಗೆ ಎಲ್ಲವನ್ನೂ ಕೊಟ್ಟ ಈ ಮಣ್ಣಿನ ಮೇಲಿನ ಕೃತಜ್ಞತೆಗಾಗಿ. ಕನ್ನಡದ ನಟಿ ಎಂದೇ ಎಷ್ಟೋ ಜನ ತಿಳಿದುಕೊಂಡಿರುವ ಸರಿತಾ, ಕನ್ನಡ ಕಲಿತು ತಮ್ಮ ಮೊದಲ ಚಿತ್ರಕ್ಕೆ ತಾವೇ ಡಬ್ ಮಾಡಿದ್ದು! ನಾ.ಕಸ್ತೂರಿ ಅವರಂತಹ ಉತ್ತಮ ಪ್ರಜ್ಞಾವಂತ ಕಾದಂಬರಿಕಾರ ಹಾಸ್ಯ ಬರಹಗಾರರು ಕನ್ನಡದಲ್ಲಿ ಮತ್ತೊಬ್ಬರಿಲ್ಲ. ಮಲೆಯಾಳದ ಅವರು ಕನ್ನಡವನ್ನು ತಮ್ಮ ಮಧ್ಯವಯಸ್ಸಿನಲ್ಲಿ ಕಲಿತದ್ದು! ನಿವೃತ್ತ ಪೊಲೀಸ್ ಅಧಿಕಾರಿ ಚಿರಂಜೀವಿಸಿಂಗ್ ಎಂತಹ ಶುದ್ಧ ಕನ್ನಡ ಮಾತನಾಡುತ್ತಾರೆ! ಹೀಗೆ ಎಷ್ಟು ಜನ ಇಲ್ಲ?. ಕಮಲಹಾಸನ್ ಒಮ್ಮೆ ಹೇಳಿದ್ದರು, "ನಾನು ಕನ್ನಡ ಚೆನ್ನಾಗಿಯೇ ಮಾತನಾಡುತ್ತಿದ್ದೆ. ಆದರೆ ಇಲ್ಲಿಗೆ ಬಂದಾಗಲ್ಲೆಲ್ಲಾ ನನ್ನ ಜೊತೆ ಎಲ್ಲರೂ ತಮಿಳು ಅಥವಾ ತೆಲುಗಿನಲ್ಲೇ ಮಾತನಾಡುತ್ತಾರೆ. ಹಾಗಾಗಿ ನನಗೆ ಅಭ್ಯಾಸ ತಪ್ಪಿ ಹೋಗಿದೆ. ಆದರೆ ಮರೆತಿಲ್ಲ... "ಎಂದು. ತಪ್ಪು ಯಾರದು?

ಯುವ ದಸರೆಯಲ್ಲಿ ಒಂಚೂರೂ ತಪ್ಪಿಲ್ಲದೆ, ಅಕ್ಕರೆಯಿಂದ ಕನ್ನಡ ಮಾತನಾಡಿದ ಇಳಯರಾಜ, ಅಪ್ಪುವನ್ನು ನೆನೆದು ಹನಿಗಣ್ಣಾಗಿ ಕನ್ನಡದಲ್ಲಿಯೇ ಮಾತನಾಡಿ, ಶ್ರದ್ಧಾಂಜಲಿ ಅರ್ಪಿಸಿದ ಬಾದಷಾ ಅವರ ಮಾತುಗಳಲ್ಲಿ ಸ್ವಲ್ಪವಾದರೂ ಕೃತ್ರಿಮತೆಯಿತ್ತೇ? ಶ್ರೇಯಾ ಘೋಷಾಲ್ ಹಾಡುತ್ತಿದ್ದರೆ ಅವರ ಬೆಂಗಾಲಿ ಮೂಲ ನಮಗೆಲ್ಲಿ ನೆನಪಿತ್ತು? ಆ ಭಾಷಾ ಶುದ್ಧತೆಗೆ ಪರಾಕ್ ಹೇಳಲೇಬೇಕು. ಇದೆಲ್ಲಾ ಅವರಿಗೆ ಸಾಧ್ಯವಾದುದು ಹೇಗೆ? ಪ್ರೀತಿ, ಯಶಸ್ಸು, ಹೆಸರು ತಂದುಕೊಟ್ಟ ನೆಲದೆಡೆಗಿನ ಕೃತಜ್ಞತೆ. ಅಷ್ಟೇ. ಇದೇಕೆ ನಮಗೆ ಸಾಧ್ಯವಾಗುತ್ತಿಲ್ಲ? ಕನ್ನಡ ಕಲಿಯಲು ಮಾತನಾಡಲು ಧಿಮಾಕು ತೋರುವುದು ಕೃತಘ್ನತೆಯ ಪರಮಾವಧಿ ಅಷ್ಟೇ. ನೀವೂ ಇದನ್ನು ಒಪ್ಪುತ್ತೀರಿ. ಇದೇ ದಾರ್ಷ್ಟ್ಯದಿಂದ ಮಾತನಾಡಿದ ಟೆಕ್ಕಿಯ ಕತೆ ಏನಾಯಿತೆಂದು ನೀವೂ ಇತ್ತೀಚೆಗೆ ನೋಡಿರುತ್ತೀರಿ.

ಎಲ್ಲವೂ ಯಾವ ಮಟ್ಟಿಗೆ ಇಂಗ್ಲಿಷ್‌ಮಯವಾಗಿದೆ ಎಂದರೆ, ಈಗೀಗ ಮೈಸೂರಿನಲ್ಲೂ ಕೆಫೆ ಸಂಸ್ಕೃತಿ ನಾಗಾಲೋಟದಲ್ಲಿ ಬೆಳೆಯುತ್ತಿದೆ. ಅಲ್ಲಿಗೆ ಭೇಟಿ ಕೊಟ್ಟಾಗ ನೀವು ಗಮನಿಸಿ; ಮುಂದೆ ನಾಮಫಲಕ ಮಾತ್ರ ಕನ್ನಡದಲ್ಲಿ ಇರುತ್ತದೆ. ಒಳಗೆ ಹೋದರೆ ಎಲ್ಲವೂ ಇಂಗ್ಲಿಷ್‌ಮಯ. ನೀವು ದುರ್ಬೀನು ಹಾಕಿ ಹುಡುಕಿದರೂ ಕನ್ನಡದ ಒಂದು ಅಕ್ಷರ ಕಾಣುವುದಿಲ್ಲ. ಅಸಹ್ಯವೆನಿಸುತ್ತದೆ. ನಾನೇ ಹಲವು ಕಡೆ ಕೇಳಿದ್ದೇನೆ, 'ಕನ್ನಡದ ಮೆನು ಇಲ್ಲವೇ?' ಎಂದು. 'ನೀವೊಬ್ಬರೇ ಮೇಡಂ ಕೇಳಿದ್ದು ಇಷ್ಟು ದಿನಗಳಲ್ಲಿ!' ಎಂದಿದ್ದಾರೆ. 90% ಇದೇ ಪರಿಸ್ಥಿತಿ. ಅದೂ ಜನನಿಬಿಡ, ಕನ್ನಡವನ್ನೇ ಮಾತನಾಡುವ ಅಚ್ಚ ಕನ್ನಡದ ಪ್ರದೇಶಗಳಲ್ಲಿಯೇ. ನಾವೂ ಕೇಳುವುದಿಲ್ಲ ಅವರೂ ತಲೆಕೆಡಿಸಿಕೊಳ್ಳುವುದಿಲ್ಲ. ಯಾರೂ ಇದರ ಬಗ್ಗೆ ತಲೆಕೆಡಿಸಿಕೊಂಡಂತಿಲ್ಲ.

ಈ ಸಮಸ್ಯೆಗೆ ಪರಿಹಾರ ಹೇಳಿ ಲೇಖನವನ್ನು ಉಪಸಂಹಾರ ಮಾಡಲಾಗುವುದಿಲ್ಲ. ನವೆಂಬರ್ ಎಂಬ ಕನ್ನಡ ಮುಹೂರ್ತ ಬಂತಲ್ಲವೇ? ಹಾಗಾಗಿ ಮನಸ್ಸನ್ನು ಕೊರೆಯುತ್ತಿದ್ದ ವಿಚಾರಗಳೆಲ್ಲಾ ಮುನ್ನೆಲೆಗೆ ಬಂದವು. ನಿಮಗೂ ಬಹುಶಃ! ಭಾಷೆ ಬೆಳೆಯಬೇಕು, ಉಳಿಯಬೇಕು ಎಂದರೆ ಅದನ್ನು ಬಳಸಬೇಕು. ಅದಷ್ಟೇ ಸುಲಭೋಪಾಯ.

ನಮಗೆ ಇಂಗ್ಲಿಷ್ ಗೊತ್ತಿರಲಿ, ಕನ್ನಡ ನಾಲಗೆ ತುದಿಯಲ್ಲಿರಲಿ.

ಸಿರಿಗನ್ನಡಂ ಗೆಲ್ಗೆ
ಸಿರಿಗನ್ನಡಂ ಗಲ್ಲಿ ಗಲ್ಲಿಗೆ

ಡಿಸಿಎಂ ಡಿಕೆಶಿ ಶಕ್ತಿ ಯೋಜನೆ ಸ್ಥಗಿತ ಇಲ್ಲವೇ, ಮರು ಪರಿಶೀಲನೆ ಪ್ರಸ್ತಾಪ

ಗ್ಯಾರಂಟಿ ನಿಲ್ಲಿಸುವ ಮೊದಲ ಹೆಜ್ಜೆ : ಕೇಂದ್ರ ಸಚಿವ ಕುಮಾರಸ್ವಾಮಿ ಆಕ್ರೋಶ

ಬೆಂಗಳೂರು,ಅ.31–(ಕೆಎಂಶಿ) ರಾಜ್ಯದ ಮಹಿಳೆಯರಿಗೆ ಉಚಿತ ಬಸ್ ಸಾರಿಗೆ ಸೌಲಭ್ಯ ಒದಗಿಸಲಾಗಿರುವ ಶಕ್ತಿ ಯೋಜನೆಯನ್ನು ಸ್ಥಗಿತಗೊಳಿಸುವ ಇಲ್ಲವೇ ಮರು ಪರಿಶೀಲಿಸುವ ಹೇಳಿಕೆ ನೀಡಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಡಿಕೆಶಿ ಅವರಿಗೆ ಮಹಿಳೆಯರು ಕನಸಿನಲ್ಲಿ ಬಂದು ಶಕ್ತಿ ಯೋಜನೆಯನ್ನು ನಿಲ್ಲಿಸಿ ಎಂದು ಕೇಳಿದ್ದಾರೆಯೇ? ಅಥವಾ ದೇವರು ಬಂದು ಹೇಳಿದ್ದಾರೆಯೇ? ಒಂದೊಂದಾಗಿ 5 ಗ್ಯಾರಂಟಿಗಳನ್ನು ನಿಲ್ಲಿಸಲು ಇದೊಂದು ಮೊದಲ ಹೆಜ್ಜೆ ಅಷ್ಟೇ. ಇನ್ನು ಕೆಲವೇ ದಿನಗಳಲ್ಲಿ ಅನ್ನಭಾಗ್ಯ, ಗೃಹ ಜ್ಯೋತಿ, ಗೃಹಲಕ್ಷ್ಮಿ, ಯುವ ನಿಧಿ ಕಾರ್ಯಕ್ರಮಗಳನ್ನು ನಿಲ್ಲಿಸಲಿದ್ದಾರೆ. ಅದಕ್ಕೆ ಇವರು ಮರು ಪರಿಶೀಲನೆ ಎಂಬ ಪೀಠಿಕೆ ಹಾಕಿಕೊಂಡಿದ್ದಾರೆ ಎಂದು ಕಿಡಿಕಾರಿದರು.



ಟ್ವೀಟ್ ಮೂಲಕ ಮಹಿಳೆಯರು ಶಕ್ತಿ ಯೋಜನೆಯನ್ನು ನಿಲ್ಲಿಸಿ ಎಂದು ಒತ್ತಾಯ ಮಾಡುತ್ತಿದ್ದಾರೆ. ಯಾರು ಟ್ವೀಟ್ ಮಾಡಿದ್ದಾರೆ ಅಥವಾ ಮಹಿಳೆಯರು ಆರ್ಥಿಕವಾಗಿ ಬಲಾಢ್ಯರಾಗಿದ್ದಾರೆ ಎಂದು ಇವರಿಗೆ ಹೊಸ ಜ್ಞಾನೋದಯ ಆಗಿದೆಯಾ, ಕೇವಲ ಒಂದೂವರೆ ವರ್ಷದಲ್ಲಿ ಇವರು ಆರ್ಥಿಕವಾಗಿ ಬಲಾಢ್ಯರಾಗಿದ್ದಾರೆಯೇ ಎಂದು ಕುಮಾರಸ್ವಾಮಿ ಪ್ರಶ್ನಿಸಿದರು.

ಗ್ಯಾರಂಟಿ ನಿಲ್ಲಿಸುವ ಮೊದಲ ಹಂತದ ಕ್ರಮ: ಶಕ್ತಿ ಯೋಜನೆ ಮರು ಪರಿಶೀಲನೆ ನಾಟಕ ಗ್ಯಾರಂಟಿಗಳನ್ನು ಒಂದೊಂದಾಗಿಯೇ ತೆಗೆಯಲು ಮೊದಲ ಹಂತದ ಪ್ರಕ್ರಿಯೆ ಎಂದೇ ಭಾವಿಸಬೇಕಾಗುತ್ತದೆ. ಇದು ಗ್ಯಾರಂಟಿ ನಿಲ್ಲಿಸಲು ಒಂದು ಪೀಠಿಕೆ ಮಾತ್ರ. ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಗ್ಯಾರಂಟಿಗಳನ್ನೇ ಪ್ರಮುಖವಾಗಿ ಇವರು ಹೇಳುತ್ತಿದ್ದರು. ನುಡಿದಂತೆ ನಡೆದಿದ್ದೇವೆ ಎಂದು ಜನರ ಬ್ರೈನ್‌ವಾಷ್ ಮಾಡುತ್ತಿದ್ದರು. ಇದರಿಂದ ಅಭಿವೃದ್ಧಿ ಕೆಲಸಗಳನ್ನು ಸಂಪೂರ್ಣವಾಗಿ ನಿಲ್ಲಿಸಿದ್ದರು. ತೆರಿಗೆ ಅಧಿಕಾರಿಗಳ ಸಭೆ ಮಾಡಿ ಇನ್ನೂ ಹೆಚ್ಚುವರಿಯಾಗಿ 10,000 ಕೋಟಿ ರೂ. ವಸೂಲಿ ಮಾಡುವಂತೆ ಮುಖ್ಯಮಂತ್ರಿ ಸೂಚನೆ ನೀಡಿದ್ದಾರೆ. ಅಂದರೆ, ಇನ್ನಷ್ಟು ಸುಲಿಗೆ ಮಾಡಿ ಅಂತ ಅರ್ಥ ಅಲ್ಲವೇ ಇದು ಯಾವ ಪುರುಷಾರ್ಥಕ್ಕೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಗ್ಯಾರಂಟಿ ಹೆಸರು ಹೇಳಿ ಜನರಿಗೆ ಹೊರೆ ಹೊರಿಸಿ, ಅವರ ಹಣವನ್ನೇ ಕಿತ್ತು ಅವರಿಗೆ ಚೂರುಪಾರು ಹಂಚುವ ಗ್ಯಾರಂಟಿಗಳಿಗೆ ಅರ್ಥ ಇದೆಯಾ,ಚುನಾವಣೆ ಗೆಲ್ಲುವ ದುರಾಸೆಯಿಂದ ಇಂಥ ಅವಾಸ್ತವಿಕ ಭರವಸೆಗಳನ್ನು ಕೊಟ್ಟು ರಾಜ್ಯವನ್ನು ಹಾಳು ಮಾಡಿದ್ದಾರೆ. ಜನರನ್ನು ರಣಹದ್ದುಗಳ ರೀತಿಯಲ್ಲಿ ಸರ್ಕಾರ ಕಿತ್ತು ತಿನ್ನುತ್ತಿದೆ ಎಂದರು.

ಗ್ಯಾರಂಟಿಯಿಂದ ಆರ್ಥಿಕ ಪರಿಸ್ಥಿತಿ ಹಾಳು: ಗ್ಯಾರಂಟಿಗಳಿಂದ ಕ್ಯಾಪಿಟಲ್ ಅಸೆಟ್ ಆಗುತ್ತಿಲ್ಲ. ಬರೀ ಖರ್ಚಾಗುತ್ತಿದೆ. ನಾನು ಗ್ಯಾರಂಟಿ ಕೊಡುವುದನ್ನು ವಿರೋಧಿಸುತ್ತಿಲ್ಲ. ಗ್ಯಾರಂಟಿ ಕೊಡಿ, ಗ್ಯಾರಂಟಿ ಹೆಸರಲ್ಲಿ ಆರ್ಥಿಕ ಪರಿಸ್ಥಿತಿ ಹಾಳು ಮಾಡಬೇಡಿ. ಮುಂದಿನ ಅಧಿಕಾರ ನಡೆಸುವ ಪೀಳಿಗೆಯ ಭವಿಷ್ಯ ಹಾಳು ಮಾಡಬೇಡಿ. ಅನ್ನಭಾಗ್ಯಕ್ಕೂ ಷರತ್ತುಗಳನ್ನು ವಿಧಿಸಿದ್ದಾರೆ. ಗೃಹಲಕ್ಷ್ಮಿಗೂ ಷರತ್ತುಗಳನ್ನು ಹಾಕಿದ್ದಾರೆ. ಅಕ್ಕಿ ಕೊಡುವುದನ್ನು ಕಡಿತಗೊಳಿಸಿದ್ದಾರೆ. ಇದು ಮುಂದೆ ಯಾವ ಹಂತಕ್ಕೆ ಹೋಗುತ್ತದೆ. ನಮಗೆ ಗ್ಯಾರಂಟಿ ಬಗ್ಗೆ ಯಾವುದೇ ಹೊಟ್ಟೆ ಉರಿ ಇಲ್ಲ. ಗ್ಯಾರಂಟಿ ಬೇಕಾದರೆ ಡಬಲ್ ಮಾಡಿಕೊಳ್ಳಿ. ಆದರೆ ರಾಜ್ಯವನ್ನು ದಿವಾಳಿ ಮಾಡಬೇಡಿ. ಸರ್ಕಾರ ಅಭಿವೃದ್ಧಿ ಶೂನ್ಯ ಆಗಿದೆ. ಬೇರೆ ದೇಶಗಳಲ್ಲಿ ಉಂಟಾಗಿರುವ ಆರ್ಥಿಕ ಅರಾಜಕತೆ ನಮ್ಮ ರಾಜ್ಯಕ್ಕೆ ಬರಬಾರದು ಎಂಬುದು ನಮ್ಮ ಕಳಕಳಿ ಎಂದು ಕುಮಾರಸ್ವಾಮಿ ಹೇಳಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581/1980 E-mail address: mysoorumithra@gmail.com For advertisements: mysoorumithra@gmail.com

ಮೂರನೇ ಪುಟದಿಂದ

ಗ್ಯಾರಂಟಿ' ನಿಲ್ಲಿಸುವ ಪ್ರಶ್ನೆಯೇ ಇಲ್ಲ

ಅವರ ಸಂಖ್ಯೆ ಶೇಕಡಾ 7–8 ರಷ್ಟು ಇರಬಹುದು. ಹಿಂದೆ ಅಡುಗೆ ಅನಿಲಕ್ಕೆ ನೀಡಲಾಗುತ್ತಿದ್ದ ಸಬ್ಸಿಡಿ ವಿಚಾರದಲ್ಲಿ ಪ್ರಧಾನಿ ಮೋದಿ ಅವರು ಸ್ವಇಚ್ಛೆಯಿಂದ ಸಬ್ಸಿಡಿ ತ್ಯಜಿಸುವವರಿಗೆ ಅವಕಾಶ ನೀಡಿದರು. ಆ ರೀತಿ ಆಲೋಚನೆ ಮಾಡುವುದಾಗಿ ಹೇಳಿದ್ದೇನೆ. ಕಾಂಗ್ರೆಸ್ ಅಧ್ಯಕ್ಷನಾಗಿ ಹಾಗೂ ಉಪಮುಖ್ಯ ಮಂತ್ರಿಯಾಗಿ ಮತ್ತೊಮ್ಮೆ ಸ್ಪಷ್ಟ ಪಡಿಸುತ್ತೇನೆ; ಐದೂ ಗ್ಯಾರಂಟಿ ಯೋಜನೆ ಮುಂದುವರಿಯುತ್ತವೆ.

ಎಂಟೂವರೆ ವರ್ಷ ಗ್ಯಾರಂಟಿ ಮುಂದುವರಿಕೆ: ಜನರಿಗೆ ಈ ಸೌಲಭ್ಯ ಮುಂದುವರಿಯಲಿದೆ. ಬೆಲೆ ಏರಿಕೆ ಸಮಸ್ಯೆ ನಿವಾರಿಸಿ ಜನರ ಬದುಕಿನಲ್ಲಿ ಬದಲಾವಣೆ ತರಲು ಮುಂದಾಗಿದ್ದು, ಜನ ನಮಗೆ ಆಶೀರ್ವಾದ ಮಾಡುತ್ತಾರೆ. ಈಗಿನ ಅವಧಿ ಜತೆಗೆ ಮುಂದಿನ ಐದು ವರ್ಷದ ಅವಧಿಯೂ ಸೇರಿ ಒಟ್ಟು ಎಂಟೂವರೆ ವರ್ಷ ಈ ಯೋಜನೆ ಮುಂದುವರಿಯಲಿದೆ ಎಂದು ತಿಳಿಸಿದರು.

ಯಾರಿಗೆ ಬೇಕೋ ಅವರು ಟಿಕೆಟ್ ಖರೀದಿ ಮಾಡಿ ಪ್ರಯಾಣ ಮಾಡಬಹುದಲ್ಲವೇ? ಪರಿಷ್ಕರಣೆ ಯಾಕೆ ಎಂದು ಕೇಳಿದಾಗ, ಆ ರೀತಿ ಮಾಡಲು ಸಾರಿಗೆ ಸಿಬ್ಬಂದಿಗಳಿಗೆ ಸರ್ಕಾರ ಅನುಮತಿ ನೀಡಬೇಕಲ್ಲವೇ? ಇಲ್ಲದಿದ್ದರೆ ಕಂಡಕ್ಟರ್‌ಗಳು ಮಹಿಳೆಯರಿಂದ ಹಣ ಪಡೆಯಲು ಹಿಂಜರಿಯುತ್ತಾರೆ. ನಾಳೆ ನೀವೇ ಹೇಳಬಹುದು, ಮಹಿಳೆಯರಿಂದ ಬಲವಂತವಾಗಿ ಹಣ ಕೀಳುತ್ತಿದ್ದಾರೆ ಎಂದು. ಹೀಗಾಗಿ ಕೆಲವು ಮಹಿಳಾ ಪ್ರಯಾಣಿಕರು ನೀಡಿರುವ ಸಲಹೆ ಬಗ್ಗೆ ನಾವು ಚರ್ಚೆ ಮಾಡಬೇಕಿದೆ. ಈ ವಿಚಾರದಲ್ಲಿ ಯಾವುದೇ ಆತುರವಿಲ್ಲ ಎಂದು ಸ್ಪಷ್ಟನೆ ನೀಡಿದರು.

ಕುಮಾರಸ್ವಾಮಿಗೆ ಸಹಿಸಲಾಗುತ್ತಿಲ್ಲ: ಗ್ಯಾರಂಟಿ ಯೋಜನೆಗಳಿಂದಲೇ ಸರ್ಕಾರ ಪತನವಾಗಲಿದೆ ಎಂಬ ಕುಮಾರಸ್ವಾಮಿ ಅವರ ಆರೋಪದ ಬಗ್ಗೆ ಕೇಳಿದಾಗ, ಈ ಗ್ಯಾರಂಟಿ ಯೋಜನೆಗಳನ್ನು ಕಂಡು ಕುಮಾರಸ್ವಾಮಿಗೆ ಸಹಿಸಿಕೊಳ್ಳಲು ಆಗುತ್ತಿಲ್ಲ. ಕಾಂಗ್ರೆಸ್‌ನವರು 5 ಗ್ಯಾರಂಟಿ ಯೋಜನೆಗಳನ್ನು ಕೊಡುತ್ತಿದ್ದಾರೆ. ನಿಮ್ಮ ಅಧಿಕಾರ ಅವಧಿಯಲ್ಲಿ ಇಂತಹ ಒಂದು ಯೋಜನೆ ಕೊಟ್ಟಿಲ್ಲ, ಬಡವರಿಗೆ ನಿವೇಶನ ಕೊಟ್ಟಿಲ್ಲ, ಊರು ಅಭಿವೃದ್ಧಿ ಮಾಡಿಲ್ಲ. ಹೀಗಾಗಿ ಯಾಕೆ ಮತ ಕೇಳುತ್ತೀರಿ ಎಂದು ಜನ ಅವರನ್ನು ಧಿಕ್ಕರಿಸುತ್ತಿದ್ದಾರೆ. ಅದನ್ನು ಸಹಿಸಲಾಗದೆ ನನಗೆ ಈ ಅವಕಾಶ ಸಿಗಲಿಲ್ಲವಲ್ಲ ಎಂದು ಕುಮಾರಸ್ವಾಮಿ ಅಸೂಯೆಯಿಂದ ತಮ್ಮ ಕೈ ಹಿಸುಕಿಕೊಳ್ಳುತ್ತಿದ್ದಾರೆ ಎಂದು ತಿಳಿಸಿದರು. ಆರು ತಿಂಗಳ ಒಳಗಾಗಿ ರಾಜ್ಯಪಾಲರ ಆಡಳಿತ ಬರಲಿದೆ ಎಂಬ ಕುಮಾರಸ್ವಾಮಿ ಹೇಳಿಕೆ ಬಗ್ಗೆ ಕೇಳಿದಾಗ, ನಮ್ಮ ಸರ್ಕಾರ ಬೀಳಿಸಲು ಷಡ್ಯಂತ್ರ ರೂಪಿಸುತ್ತಿದ್ದಾರೆ. ಆದರೆ ಅದು ಅವರ ಹಣೆಯಲ್ಲಿ ಬರೆದಿಲ್ಲ. ಈ ವಿಶೇಷವಾದ ದಿನ ನೀವು ಬರೆದಿಟ್ಟುಕೊಳ್ಳಿ, ಮುಂದಿನ ಎಂಟೂವರೆ ವರ್ಷಗಳ ಕಾಲ ಕಾಂಗ್ರೆಸ್ ಪಕ್ಷ ರಾಜ್ಯದಲ್ಲಿ ಅಧಿಕಾರ ನಡೆಸಲಿದೆ ಎಂದು ಸ್ಪಷ್ಟಪಡಿಸಿದರು. ಚನ್ನಪಟ್ಟಣದಲ್ಲಿ ಚುನಾವಣಾ ಪ್ರಚಾರದಲ್ಲಿ ಯಾವಾಗ ಭಾಗವಹಿಸುತ್ತೀರಿ ಎಂದು ಕೇಳಿದಾಗ, ನಾನು ಹಾಗೂ ರಾಮಲಿಂಗಾರೆಡ್ಡಿ ಅವರು ಈಗಾಗಲೇ 25 ಬಾರಿ ಹೋಗಿ ಬಂದಿದ್ದೇವೆ. ನಾವು ಒಂದೊಂದು ದಿನ ಮಾತ್ರ ಜಂಟಿ ಪ್ರಚಾರ ಮಾಡುತ್ತೇವೆ. ಇತರ ದಿನಗಳಲ್ಲಿ ನಮ್ಮ ನಾಯಕರು ಪ್ರಚಾರ ಮಾಡುತ್ತಾರೆ ಎಂದು ತಿಳಿಸಿದರು.

ದೇಶ, ರಾಜ್ಯ ಒಡೆಯುವ ಉದ್ದೇಶ: ಸರ್ಕಾರದ ಸ್ಪಷ್ಟನೆ ಹೊರತಾಗಿಯೂ ಬಿಜೆಪಿ ವಕ್ಫ್ ವಿಚಾರದಲ್ಲಿ ಪ್ರತಿಭಟನೆಗೆ ಮುಂದಾಗಿರುವ ಬಗ್ಗೆ ಕೇಳಿದಾಗ, ನಮ್ಮ ಸರ್ಕಾರದ ವಿರುದ್ಧ ಟೀಕೆ ಮಾಡಲು ಬಿಜೆಪಿಯವರ ಬಳಿ ವಿಚಾರಗಳಿಲ್ಲ. ಹೀಗಾಗಿ ಈ ವಿಚಾರದಲ್ಲಿ ರಾಜಕೀಯ ಮಾಡುತ್ತಿದ್ದಾರೆ. ಅವರ ಕಾಲದಲ್ಲೇ ಮೊದಲು ನೋಟೀಸ್ ನೀಡಲಾಗಿದೆ. ಕೋಮು ಗಲಭೆ ಸೃಷ್ಟಿಸಿ, ದೇಶ ಹಾಗೂ ರಾಜ್ಯ ಒಡೆಯಬೇಕು ಎಂಬುದು ಅವರ ಉದ್ದೇಶ ಎಂದು ತಿಳಿಸಿದರು. ಪ್ರಿಯಾಂಕಾ ಗಾಂಧಿ ಕೂಡ ವಯನಾಡಿಗೆ ವಲಸಿಗರು ಎಂಬ ಕುಮಾರ ಸ್ವಾಮಿ ಅವರ ಆರೋಪದ ಬಗ್ಗೆ ಕೇಳಿ ದಾಗ, ಕುಮಾರಸ್ವಾಮಿ ಅವರಾಗಲೀ, ಅವರ ಗೌಡರ ಕುಟುಂಬದವರಾಗಲೀ ಗಾಂಧಿ ಕುಟುಂಬದ ಬಗ್ಗೆ ಮಾತ ನಾಡುವ ನೈತಿಕತೆ ಹೊಂದಿಲ್ಲ. ಗಾಂಧಿ ಕುಟುಂಬ ದೇಶವನ್ನು ಒಂದಾಗಿ ಇಟ್ಟಿದೆ. ಆ ಕುಟುಂಬದ ಕೊಡುಗೆಯನ್ನು ಸರಿದೂಗಿಸಲು ಯಾರಿಂದಲೂ ಸಾಧ್ಯವಿಲ್ಲ. ಈ ಹಿಂದೆ ಇಂದಿರಾ ಗಾಂಧಿ ಹಾಗೂ ಸೋನಿಯಾ ಗಾಂಧಿ ಅವರು ದಕ್ಷಿಣ ಭಾರತವನ್ನು ಪ್ರತಿನಿಧಿಸಿದ್ದರು ಎಂದು ತಿಳಿಸಿದರು.

ಪ್ರಸ್ತಾವನೆ ಸರ್ಕಾರದ ಮುಂದಿಲ್ಲ

ಈಗಾಗಲೇ ಹೇಳಿದ್ದೇವೆ. ಕೊಟ್ಟಿರುವ ನೋಟೀಸ್‌ಗಳನ್ನು ಹಿಂಪಡೆಯಲು ಈಗಾಗಲೇ ಸೂಚಿಸಲಾಗಿದೆ ಎಂದರು. ನವೆಂಬರ್ 4ರ ಅವರ ಪ್ರತಿಭಟನೆ ಉಪ ಚುನಾವಣೆ ಹಿನ್ನೆಲೆಯಲ್ಲಿ ರಾಜಕೀಯ ಪ್ರೇರಿತವಾದದ್ದು, ಸಮಸ್ಯೆಗಳು ಇರದೆಡೆ ಸಮಸ್ಯೆಗಳನ್ನು ಸೃಷ್ಟಿಸುತ್ತಾರೆ. ಈಗ ಮುಡಾ ಪ್ರಕರಣದಲ್ಲಿ ಮಾಡಿಲ್ಲವೇ ಎಂದು ಅವರು ಪ್ರಶ್ನಿಸಿದರು.

ಶಿಗ್ಗಾಂವಿಯಲ್ಲಿ ಅಜ್ಜಂಪೀರ್ ಖಾದ್ರಿ ಅವರು ನಾಮಪತ್ರ ವಾಪಸ್ ಪಡೆದಿದ್ದು, ಉಪಚುನಾವಣೆಯಲ್ಲಿ ಪಕ್ಷದ ಗೆಲುವಿಗೆ ಶ್ರಮಿಸುತ್ತಾರೆ. ಶಿಗ್ಗಾಂವಿ, ಸಂಡೂರು ಹಾಗೂ ಚನ್ನಪಟ್ಟಣ ಮೂರೂ ಕ್ಷೇತ್ರಗಳಲ್ಲಿಯೂ ಗೆಲುವು ನಮ್ಮದೇ ಎಂದು ಹೇಳಿದರು.

ಇಲ್ಲೇನಿದ್ರೂ ನೀವೇ ಬಗೆಹರಿಸಿ

ಬೆಂಗಳೂರಿನಲ್ಲಿ ಬುಧವಾರ ಮಾತನಾಡಿದ್ದ ಡಿಸಿಎಂ ಡಿಕೆ ಶಿವಕುಮಾರ್ ಅವರು ಗ್ಯಾರಂಟಿ ಯೋಜನೆಗಳನ್ನು ಪರಿಷ್ಕರಣೆ ಮಾಡುವ ಬಗ್ಗೆ ಮಾತನಾಡಿದ್ದರು. ಇದರ ಕುರಿತಾದ ಪ್ರಶ್ನೆಗೆ ಉತ್ತರಿಸಿದ ಅವರು, 'ಗ್ಯಾರಂಟಿ ಬಗ್ಗೆ ನೀನೇನೋ ಹೇಳಿದ್ಯಲ್ಲಪ್ಪ' ಎಂದು ಪಕ್ಕದಲ್ಲಿದ್ದ ಡಿಕೆಶಿ ಕಡೆ ತಿರುಗಿ ಪ್ರಶ್ನಿಸಿದರು. ಈ ವೇಳೆ 'ನಾನು ಏನೂ ಹೇಳಿಲ್ಲ' ಎಂದು ಡಿಕೆಶಿ ಕೈಸನ್ನೆ ಮಾಡಿದರು. 'ನೀನು ಪೇಪರ್ ನೋಡಿಲ್ಲಪ್ಪ, ನಾನು ನೋಡ್ತೇನೆ. ಪೇಪರ್‌ನಲ್ಲಿ ನೀನು ಹೇಳಿದ್ಯಾ ಅಂತ ಬಂದಿದೆ' ಎಂದು ಡಿಕೆಶಿ ಕಡೆ ತಿರುಗಿ ಖರ್ಗೆ ಹೇಳಿದಾಗ, ಇಲ್ಲ ಪರಿಷ್ಕರಣೆ ಅಂತ ಬಂದಿದೆ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು. ಪರಿಷ್ಕರಣೆ ಮಾಡ್ತೇವೆ ಅಂದರೆ ಡೌಟ್ ಆಗಲ್ವ, ಅದನ್ನೇ ಹೇಳ್ತಿರೋದು ನಾನು, ಬಜೆಟ್‌ನಲ್ಲಿ ಏನಿದೆ ಅದರಂತೆ ಗ್ಯಾರಂಟಿ ಕೊಡಿ ಎಂದು ಸಿಎಂ, ಡಿಸಿಎಂಗೆ ಮಲ್ಲಿಕಾರ್ಜುನ ಖರ್ಗೆ ಸೂಚನೆ ನೀಡಿದರು.

ಒಂದು ಗತಿ ಕಾಣಿಸುವ ಎಚ್ಚರಿಕೆ

ಹಾಕಿದ್ದಾರೆ. ತಿಲಕ್ ಅಲಿಯಾಸ್ ಸುರೇಶ್ ಎಂಬಾತ ಪದೇ ಪದೆ ಕರೆ ಮಾಡಿ ಪ್ರಾಣ ಬೆದರಿಕೆ ಹಾಕುತ್ತಿದ್ದಾನೆ ಎಂದು ರಾಜೇಂದ್ರ ರಾವ್ ಅವರು ಹೆಬ್ಬಾಳ್ ಠಾಣೆಗೆ ಚಂದ್ರಶೇಖರ್, ಮಂಜೇಶ್, ಅನಿಲ್ ಮತ್ತು ತಿಲಕ್ ಅಲಿಯಾಸ್ ಸುರೇಶ್ ವಿರುದ್ಧ ಅ.28ರಂದು ರಾತ್ರಿ 9.30ರಲ್ಲಿ ದೂರು ದಾಖಲಿಸಿದ್ದಾರೆ.

ರೌಡಿಯೋರ್ವ ಜೈಲಿನಲ್ಲಿದ್ದುಕೊಂಡೇ ತನ್ನ ಸಹಚರರ ಮೂಲಕ ರಿಯಲ್ ಎಸ್ಟೇಟ್ ಉದ್ಯಮಿಗೆ ಹಣಕ್ಕಾಗಿ ಬೆದರಿಕೆ ಹಾಕುತ್ತಿದ್ದಾನೆ ಎಂಬುದು ಗಂಭೀರ ಪ್ರಕರಣವಾದರೂ, ಹೆಬ್ಬಾಳ ಠಾಣೆ ಪೊಲೀಸರು ಇದರ ಬಗ್ಗೆ ಅಷ್ಟೇನೂ ತಲೆ ಕೆಡಿಸಿಕೊಂಡಂತೆ ಕಾಣುತ್ತಿಲ್ಲ. ಹಣಕ್ಕಾಗಿ ರೌಡಿ ಮಂಜೇಶ್ ಹಾಗೂ ಆತನ ಸಹಚರರನ್ನು ಬಳಸಿಕೊಂಡು ರಾಜೇಂದ್ರ ರಾವ್ ಅವರಿಗೆ ಬೆದರಿಕೆ ಹಾಕಿರುವ ಚಂದ್ರಶೇಖರ್ ವಿರುದ್ಧವಾಗಲೀ, ರಿಯಲ್ ಎಸ್ಟೇಟ್ ಉದ್ಯಮಿ ಮನೆಗೇ ಬಂದು ಧಮ್ಕಿ ಹಾಕಿದ ರೌಡಿ ಮಂಜೇಶ್ ಸಹಚರರ ವಿರುದ್ಧವಾಗಲೀ ಪೊಲೀಸರು ಈವರೆವಿಗೂ ಯಾವುದೇ ಕ್ರಮ ಕೈಗೊಂಡಂತೆ ಕಾಣುತ್ತಿಲ್ಲ. ಅಲ್ಲದೇ ರೌಡಿ ಮಂಜೇಶ್ ಯಾರು? ಯಾವ ಜೈಲಿನಲ್ಲಿದ್ದಾನೆ ಎಂಬುದರ ಬಗ್ಗೆಯೂ ಪರಿಶೀಲನೆ ನಡೆಸಿದಂತಿಲ್ಲ. ಪೊಲೀಸರ ಇಂತಹ ವರ್ತನೆಯಿಂದ ಸಾಂಸ್ಕೃತಿಕ ನಗರಿ ಮೈಸೂರು ಭೂಗತ ಪಾತಕಿಗಳ ಕಾರ್ಯಸ್ಥಾನವಾಗಿ ಮಾರ್ಪಡಬಹುದು ಎಂಬ ಆತಂಕವನ್ನು ನಾಗರಿಕರು ವ್ಯಕ್ತಪಡಿಸಿದ್ದಾರೆ. ಈ ಮಧ್ಯೆ ಹೆಬ್ಬಾಳು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಭೂ ಮಾಫಿಯಾ ತಲೆ ಎತ್ತಿದ್ದು, ಖಾಲಿ ಜಾಗಗಳಿಗೆ ಬೇಲಿ, ಕಾಂಪೌಂಡ್ ಹಾಕುವ ಹಾವಳಿ ಆರಂಭವಾಗಿದೆ. ಇಂತಹ ಪ್ರಕರಣಗಳನ್ನು ಹತ್ತಿಕ್ಕಬೇಕಿದೆ ಎಂಬುದು ನೊಂದವರ ಅಳಲು.

ನ.4ರಿಂದ ಬಿಜೆಪಿ ಹೋರಾಟ

ಸರ್ಕಾರದಿಂದಲೇ ಒತ್ತುವರಿ: ಭೂಗಳ್ಳರು ಮಾತ್ರವಲ್ಲದೆ, ಸರ್ಕಾರವೇ ಅಧಿಕೃತವಾಗಿ ಒತ್ತುವರಿ ಆರಂಭ ಮಾಡಿದೆ. ಇದರ ವಿರುದ್ಧ ರೈತ ಸಂಘಟನೆಗಳು ತೀವ್ರವಾಗಿ ಪ್ರತಿಭಟಿಸಬೇಕು. ಹಿಂದೆ ಮುಸ್ಲಿಂ ರಾಜರು ದಾಳಿ ಮಾಡಿ, ಮತಾಂಧತೆ ಮೆರೆದಿದ್ದರು. ಟಿಪ್ಪು ಸುಲ್ತಾನ ಕೊಡಗಿನಲ್ಲಿ ಮತಾಂತರ ಮಾಡಿರುವುದು ಇದಕ್ಕೆ ಸಾಕ್ಷಿ. ಇದೇ ರೀತಿ ಈಗ ಜಮೀನಿನ ಕಬಳಿಕೆ ನಡೆಯುತ್ತಿದೆ. ಇಂತಹವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಓಲೈಸುತ್ತಿದ್ದಾರೆ ಎಂದು ದೂರಿದರು.

ಸಿಎಂ ವಿರುದ್ಧದ ಹೋರಾಟ ತಾರ್ಕಿಕ ಅಂತ್ಯಕ್ಕೆ : ಬಿಜೆಪಿ ಯಾವುದೇ ಸಮಸ್ಯೆಯನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುವುದಿಲ್ಲವೆಂದು ಸಿಎಂ ಸಿದ್ದರಾಮಯ್ಯ ಹೇಳಿದ್ದಾರೆ. ಆದರೆ ನಾವು ಹೋರಾಟ ಮಾಡಿದ್ದಕ್ಕೆ ಸಿಎಂ ವಿರುದ್ಧ ಪ್ರಕರಣ ದಾಖಲಾಗಿದೆ. ಲೋಕಾಯುಕ್ತ ಹಾಗೂ ಇಡಿ ತನಿಖೆ ಮಾಡುತ್ತಿದೆ. ಬೆಂಬಲಿಗರ ವಿರುದ್ಧವೂ ತನಿಖೆ ನಡೆದಿದೆ. ಈ ಹೋರಾಟ ತಾರ್ಕಿಕ ಅಂತ್ಯಕ್ಕೆ ಬಂದಿದ್ದು, ಇನ್ನು ನ್ಯಾಯಾಲಯದ ಮೂಲಕ ಹೋರಾಟ ಮಾಡುತ್ತೇವೆ ಎಂದರು.

ಸಿಎಂಗೆ ಧಮ್ ಇಲ್ಲ: ವಕ್ಫ್ ವಿರುದ್ಧ ರೈತರು ಹೋರಾಟ ಮಾಡುತ್ತಿದ್ದು, ಬಿಜೆಪಿ ಅವರಿಗೆ ಬೆಂಬಲ ನೀಡುತ್ತಿದೆ. ರೈತರಿಗೆ ನೋಟಿಸ್ ಕೊಟ್ಟ ಅಧಿಕಾರಿಯನ್ನು ಜೈಲಿಗೆ ಹಾಕಲು ಸಿಎಂಗೆ ಧಮ್ ಇಲ್ಲ. ಇಲ್ಲಿ ರಾಜಕಾರಣಕ್ಕಿಂತ ರೈತರಿಗೆ ಉತ್ತರ ನೀಡುವುದು ಮುಖ್ಯ ಎಂದು ಆಗ್ರಹಿಸಿದರು.

ಬಿಜೆಪಿ ರಾಷ್ಟ್ರೀಯ ಪಕ್ಷವಾಗಿದ್ದು, ನಾವು ಹಿಟ್ ಮಾಡಿದ ಕೂಡಲೇ ಕಾಂಗ್ರೆಸ್ ಓಡಿಹೋಗುತ್ತದೆ. ಈ ಸರ್ಕಾರ ತುಘಲಕ್ ಆಡಳಿತ ನೀಡಿ ನಗೆಪಾಟಲಿಗೀಡಾಗಿದೆ. ಗ್ಯಾರಂಟಿ ಯೋಜನೆಗಳ ಪೈಕಿ ಎರಡು ಯೋಜನೆಗಳು ಟುಸ್ ಪಟಾಕಿಯಾಗಲಿದೆ. ಡಿ.ಕೆ. ಶಿವಕುಮಾರ್ ಅವರಿಗೆ ಮಹಿಳೆಯರು ಫೋನ್ ಕರೆ ಮಾಡಿ ಯೋಜನೆ ಬೇಡವೆಂದು ತಿಳಿಸಿದ್ದಾರಂತೆ. ಕಳ್ಳನಿಗೆ ಪಿಳ್ಳೆ ನೆವ ಎಂಬಂತೆ, ಯೋಜನೆ ರದ್ದುಪಡಿಸಲು ಈ ರೀತಿ ಕಾರಣ ಹೇಳುತ್ತಿದ್ದಾರೆ. ಇದರ ಜೊತೆಗೆ ಪಡಿತರ ಚೀಟಿ ರದ್ದು ಮಾಡಲು ಎಲ್ಲ ಬಗೆಯ ಷರತ್ತುಗಳನ್ನು ವಿಧಿಸುತ್ತಿದ್ದಾರೆ ಎಂದು ವಿಪಕ್ಷ ನಾಯಕ ಅಶೋಕ್ ಹೇಳಿದರು.

ಮೈಸೂರು ಜಿಲ್ಲಾ ಕನ್ನಡ ರಾಜ್ಯೋತ್ಸವ ಪುರಸ್ಕಾರ ಆಯ್ಕೆಯಲ್ಲಿ ಎಡವಟ್ಟು!

ಈಗಾಗಲೇ ಪುರಸ್ಕರಿಸಿದವರ ಮತ್ತೊಮ್ಮೆ ಆಯ್ಕೆ; ಪ್ರಕ್ರಿಯೆಯೇ ನಗೆಪಾಟಲು...

ಮೈಸೂರು, ಅ.31(ಎಸ್‌ಬಿಡಿ)– ಈ ಹಿಂದೆಯೇ ಜಿಲ್ಲಾ ಮಟ್ಟದ ಕನ್ನಡ ರಾಜ್ಯೋತ್ಸವ ಪುರಸ್ಕಾರಕ್ಕೆ ಭಾಜನರಾಗಿರುವ ಕವಯತ್ರಿಯೊಬ್ಬರಿಗೆ ಮೈಸೂರು ಜಿಲ್ಲಾಡಳಿತ ಮತ್ತೆ ಪ್ರಶಸ್ತಿ ಪ್ರಕಟಿಸಿ, ಎಡವಟ್ಟು ಮಾಡಿಕೊಂಡಿದೆ.

ಈ ಬಾರಿ ವಿವಿಧ ಕ್ಷೇತ್ರದ ಒಟ್ಟು 69 ಮಂದಿಯನ್ನು ಪುರಸ್ಕಾರಕ್ಕೆ ಆಯ್ಕೆ ಮಾಡಲಾಗಿದೆ. ಸಾಹಿತ್ಯ ಕ್ಷೇತ್ರದ ಸೇವೆಗೆ 2021ರಲ್ಲಿ ಜಿಲ್ಲಾ ಮಟ್ಟದ ಕನ್ನಡ ರಾಜ್ಯೋತ್ಸವ ಪುರಸ್ಕಾರಕ್ಕೆ ಭಾಜನರಾಗಿರುವ ಕವಯತ್ರಿ ಡಾ.ಪುಷ್ಪಾ ಅಯ್ಯಂಗಾರ್ ಅವರನ್ನು ಪ್ರಸಕ್ತ ಸಾಲಿನಲ್ಲೂ ಸಾಹಿತ್ಯ ಹಾಗೂ ಸಮಾಜಸೇವೆ ಕ್ಷೇತ್ರದಿಂದ ಪರಿಗಣಿಸುವ ಮೂಲಕ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಧಿಕಾರಿಗಳು ಮುಜುಗರಕ್ಕೀಡಾಗಿದ್ದಾರೆ. ಆಯ್ಕೆ ವೇಳೆ ಹಿಂದಿನ ವರ್ಷಗಳ ಪುರಸ್ಕೃತರ ಪಟ್ಟಿಯನ್ನೂ ಗಮನಿಸುವುದಿಲ್ಲವೇ?

ನನಗೆ ಗೊತ್ತೇ ಇಲ್ಲ: ಜಿಲ್ಲಾ ಕನ್ನಡ ರಾಜ್ಯೋತ್ಸವ ಪುರಸ್ಕಾರಕ್ಕೆ ತಮ್ಮ ಹೆಸರನ್ನು ಘೋಷಿಸಿರುವುದು ಪುಷ್ಪಾ ಅಯ್ಯಂಗಾರ್ ಅವರಿಗೂ ತಿಳಿದಿಲ್ಲವಂತೆ. ಎರಡನೇ ಬಾರಿಗೆ ಪುರಸ್ಕಾರಕ್ಕೆ ಆಯ್ಕೆ ಆಗಿರುವ ಬಗ್ಗೆ ಪತ್ರಿಕೆಯವರು ಪ್ರತಿಕ್ರಿಯೆ ಕೇಳಿದಾಗ ಅವರೂ ಅಚ್ಚರಿ ವ್ಯಕ್ತಪಡಿಸಿದ್ದಾರೆ. ನಾನು ಜಿಲ್ಲಾ ಮಟ್ಟದ ರಾಜ್ಯೋತ್ಸವ ಪುರಸ್ಕಾರಕ್ಕೆ ಅರ್ಜಿ ಹಾಕಿಲ್ಲ. ಯಾರಿಗೂ ನನ್ನ ಹೆಸರು ಶಿಫಾರಸು ಮಾಡಲು ಕೇಳಿಲ್ಲ. ಈ ಬಗ್ಗೆ ನನ್ನನ್ನು ಯಾರೂ ಸಂಪರ್ಕಿಸಿಲ್ಲ. ಪಟ್ಟಿ ನೋಡಿ ದಾಗಲೇ ನನಗೂ ತಿಳಿದಿದ್ದು. ಈಗಾಗಲೇ ನನಗೆ ಸಿಕ್ಕಿರುವ ಪುರಸ್ಕಾರವನ್ನು ಮತ್ತೇಕೆ ಪಡೆಯಲಿ. ನಾನು ಕಾರ್ಯಕ್ರಮಕ್ಕೆ ಹೋಗುವುದಿಲ್ಲ ಎಂದು ಪುಷ್ಪಾ ಅಯ್ಯಂಗಾರ್ ಅವರು ಸ್ಪಷ್ಟಪಡಿಸಿದ್ದಾರೆ.

ಮತ್ತೊಬ್ಬರ ಆಯ್ಕೆ: ಅಧಿಕಾರಿಗಳ ಈ ಎಡವಟ್ಟಿನ ಬಗ್ಗೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ, ಈ ಹಿಂದೆ ಜಿಲ್ಲಾ ಕನ್ನಡ ರಾಜ್ಯೋತ್ಸವ ಪುರಸ್ಕಾರಕ್ಕೆ ಭಾಜನರಾದ ಒಬ್ಬರನ್ನು ಮತ್ತೆ ಪರಿಗಣಿಸಲಾಗಿದೆ. ಮತ್ತೆಂದೂ ಹೀಗಾಗದಂತೆ ನಿಗಾ ವಹಿಸುವಂತೆ ಸೂಚಿಸಲಾಗಿದೆ. ಪರ್ಯಾಯವಾಗಿ ಮತ್ತೋರ್ವ ಸಾಧಕರನ್ನು ಪುರಸ್ಕಾರಕ್ಕೆ ಆಯ್ಕೆ ಮಾಡಲಾಗುವುದು ಎಂದು ತಿಳಿಸಿದರು.



ಈ ಫಜೀತಿ ಏಕೆ?: ಸರ್ಕಾರದಿಂದ ಕೊಡಮಾಡುವ ಪ್ರಶಸ್ತಿ–ಪುರಸ್ಕಾರಕ್ಕೆ ಕೆಲವರು ಭಾರೀ ಪೈಪೋಟಿ ನಡೆಸುತ್ತಾರೆ. ಈ ನಡುವೆ ಎಲೆಮರೆ ಕಾಯಿಯಂತಿರುವ ಸಾಧಕರನ್ನೂ ಗುರುತಿಸಿ, ಗೌರವಿಸುತ್ತಿರುವುದು ಸಮಾಧಾನದ ಸಂಗತಿ. ಆದರೆ ಅಧಿಕಾರಿಗಳ ನಿರ್ಲಕ್ಷ್ಯ ಹಾಗೂ ಸಣ್ಣ ಎಡವಟ್ಟುಗಳಿಂದ ಇಡೀ ವ್ಯವಸ್ಥೆಯನ್ನೇ ಜನ ಅನುಮಾನಿಸುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಈ ಹಿಂದಿನ ಪುರಸ್ಕೃತರ ಪಟ್ಟಿಯ ಕಡತವನ್ನು ನಿರ್ವಹಣೆ ಮಾಡಿದ್ದಾರೋ ಇಲ್ಲವೋ ಸಂಶಯ ಶುರುವಾಗಿದೆ. ಈ ರೀತಿಯ ಬೆಳವಣಿಗೆಯಿಂದ ಪುರಸ್ಕಾರಕ್ಕೆ ಆಯ್ಕೆಯಾದವರಿಗೂ ಇರುಸು–ಮುರುಸಾಗುತ್ತದೆ. ಈ ಬಗ್ಗೆ ಜಿಲ್ಲಾಧಿಕಾರಿಗಳು ಗಂಭೀರವಾಗಿ ಪರಿಗಣಿಸಬೇಕಿದೆ.

ಹೀಗೂ ಆಗಿರಬಹುದು: ಪುಷ್ಪಾ ಅಯ್ಯಂಗಾರ್ ಅವರನ್ನು 2021ರಲ್ಲಿ ಜಿಲ್ಲಾ ಕನ್ನಡ ರಾಜ್ಯೋತ್ಸವ ಪುರಸ್ಕಾರ ನೀಡಿ, ಗೌರವಿಸಲಾಗಿದೆ. ಆದರೆ ಅವರಿಗೆ ತಿಳಿಯದಂತೆ ಬೇರೆ ಯಾರಾದರೂ ಇವರ ಹೆಸರನ್ನು ಶಿಫಾರಸು ಮಾಡಿರಬಹುದು. ಇಲ್ಲವೇ ಈ ಹಿಂದೆ ರಾಜ್ಯ ಮಟ್ಟದ ರಾಜ್ಯೋತ್ಸವ ಪ್ರಶಸ್ತಿಗೆ ಇವರ ಹೆಸರು ಶಿಫಾರಸು ಮಾಡಲಾಗಿತ್ತು. ರಾಜ್ಯ ಮಟ್ಟದ ಪುರಸ್ಕಾರ ಸಾಧ್ಯವಾಗದ ಕಾರಣದಿಂದ ಅಲ್ಲಿಂದಲೇ ಜಿಲ್ಲಾ ಮಟ್ಟದ ಪುರಸ್ಕಾರಕ್ಕೆ ಹೆಸರು ಕಳುಹಿಸಿರಬಹುದು. ಆದರೂ ಪ್ರಶಸ್ತಿ–ಪುರಸ್ಕಾರದ ವಿಚಾರದಲ್ಲಿ ಈ ರೀತಿಯ ಗೊಂದಲಗಳಿಗೆ ಆಸ್ಪದ ನೀಡಬಾರದು ಎಂದು ಹಿರಿಯರೊಬ್ಬರು ಬೇಸರ ವ್ಯಕ್ತಪಡಿಸಿದ್ದಾರೆ.

ಪುರಸ್ಕಾರ ಹಿಂಪಡೆದಿದ್ದ ಜಿಲ್ಲಾಡಳಿತ: ರಾಜ್ಯೋತ್ಸವ ಪುರಸ್ಕಾರ ನೀಡುವಲ್ಲಿ ಜಿಲ್ಲಾಡಳಿತ ಎಡವಟ್ಟು ಮಾಡಿಕೊಂಡಿರುವುದು ಇದು ಮೊದಲೇನಲ್ಲ. ಕಳೆದ ವರ್ಷವೂ ಕೂಡ ರೌಡಿಶೀಟರ್ ಎಂ.ಕೆ. ಅಶೋಕ್‌ಗೆ ಜಿಲ್ಲಾ ಕನ್ನಡ ರಾಜ್ಯೋತ್ಸವ ಪುರಸ್ಕಾರ ನೀಡಿ, ಗೌರವಿಸಲಾಗಿತ್ತು.

ಆ ಬಗ್ಗೆ ರಾಜ್ಯಾದ್ಯಂತ ಚರ್ಚೆಯಾಗಿತ್ತು. ಜಿಲ್ಲಾಡಳಿತದ ವಿರುದ್ಧ ಆಕ್ರೋಶ ವ್ಯಕ್ತವಾಗಿತ್ತು. ನಂತರ ಜಿಲ್ಲಾಡಳಿತ ಅಶೋಕ್ ಅವರಿಂದ ಪುರಸ್ಕಾರವನ್ನು ಹಿಂಪಡೆದಿತ್ತು.

ಶಿಕ್ಷಣ ಕ್ಷೇತ್ರದಿಂದ ಕು.ಸುಶೀಲ ಕೊರಗರಿಗೆ ಅವಕಾಶ

ಮೈಸೂರು, ಅ.31– ಪುಷ್ಪಾ ಅಯ್ಯಂಗಾರ್ ಅವರಿಗೆ ಎರಡನೇ ಬಾರಿ ಜಿಲ್ಲಾ ಮಟ್ಟದ ರಾಜ್ಯೋತ್ಸವ ಪುರಸ್ಕಾರ ಪ್ರಕಟಿಸಿ ಎಡವಟ್ಟು ಮಾಡಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಅವರ ಬದಲಿಗೆ ಮತ್ತೊಬ್ಬರನ್ನು ಆಯ್ಕೆ ಮಾಡಿದೆ. ಶಿಕ್ಷಣ ಕ್ಷೇತ್ರದಿಂದ ಕುಮಾರಿ ಸುಶೀಲ ಕೊರಗ ಅವರನ್ನು ರಾಜ್ಯೋತ್ಸವ ಪುರಸ್ಕಾರಕ್ಕಾಗಿ ಆಯ್ಕೆ ಮಾಡಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಕ್ಫ್ ವಿವಾದ: ಹಾವೇರಿ ಜಿಲ್ಲೆಯಲ್ಲಿ ಕಲ್ಲು ತೂರಾಟ, 32 ಮಂದಿ ಬಂಧನ

ಹಾವೇರಿ, ಅ.31– ವಕ್ಫ್ ಮಂಡಳಿಯಿಂದ ತಮ್ಮ ಭೂಮಿ ಕಳೆದುಕೊಳ್ಳುವ ಭಯದಲ್ಲಿ ರೈತರ ಗುಂಪೊಂದು ಮುಸ್ಲಿಂ ಮುಖಂಡರ ನಿವಾಸಗಳ ಮೇಲೆ ಕಲ್ಲು ತೂರಾಟ ನಡೆಸಿರುವ ಘಟನೆ ಹಾವೇರಿ ಜಿಲ್ಲೆಯಲ್ಲಿ ನಡೆದಿದೆ. ಇದರೊಂದಿಗೆ ವಕ್ಫ್ ವಿವಾದ ಹಿಂಸಾತ್ಮಕ ಸ್ವರೂಪ ಪಡೆದುಕೊಂಡಿದ್ದು, ಐವರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.



ಕಡಕೋಳ ಗ್ರಾಮದಲ್ಲಿ ಬುಧವಾರ ರಾತ್ರಿ ಈ ಘಟನೆ ನಡೆದಿದೆ. ಸ್ಥಳೀಯ ಮುಖಂಡ ಮೊಹಮ್ಮದ್ ರಫಿ ಅವರ ಮೇಲೆ ಗುಂಪೊಂದು ಕಲ್ಲು ತೂರಾಟ ನಡೆಸಿ ಬೈಕ್ ಹಾನಿಗೊಳಿಸಿದೆ. ಅಲ್ಪಸಂಖ್ಯಾತ ಸಮುದಾಯದ ಇತರ ಹಲವು ನಾಯಕರನ್ನು ಗುರಿಯಾಗಿಸಲಾಗಿದೆ.

ಜಿಲ್ಲಾಧಿಕಾರಿ ವಿಜಯ್ ಮಹಾಂತೇಶ್, ಎಸ್ಪಿ ಅಂಶುಕುಮಾರ್ ಶ್ರೀವಾಸ್ತವ ಮತ್ತಿತರರು ಸ್ಥಳಕ್ಕೆ ಧಾವಿಸಿ ಪರಿಸ್ಥಿತಿಯನ್ನು ಪರಿಶೀಲಿಸಿದರು. ಕಲ್ಲು ತೂರಾಟ ನಡೆಸಿದವರನ್ನು ಪೊಲೀಸರು ಗುರುತಿಸಿ ಬಂಧಿಸಿದ್ದು, ಗ್ರಾಮಸ್ಥರೊಂದಿಗೆ ಮಾತನಾಡಿದ್ದಾರೆ ಮತ್ತು ಜನರನ್ನು ಪ್ರಚೋದಿಸುವವರನ್ನು ಪತ್ತೆ ಹಚ್ಚಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಘಟನೆಯಲ್ಲಿ ಕಲ್ಲು ತೂರಾಟ ನಡೆದಿದ್ದು, ಐವರು ಗಾಯಗೊಂಡಿದ್ದಾರೆ ಎಂದು ಎಸ್ಪಿ ತಿಳಿಸಿದ್ದಾರೆ. ಪ್ರಕರಣ ದಾಖಲಿಸಲು ಯಾರೂ ಮುಂದೆ ಬರುತ್ತಿಲ್ಲ, ಘಟನೆಗೆ ಸಂಬಂಧಿಸಿದಂತೆ ಪೊಲೀಸರು ಸ್ವಯಂ ಪ್ರೇರಿತ ಪ್ರಕರಣಗಳನ್ನು ಕೈಗೆತ್ತಿಕೊಳ್ಳುತ್ತಿದ್ದಾರೆ. ಘಟನೆಗೆ ಸಂಬಂಧಿಸಿದಂತೆ 32 ಮಂದಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದು, ಯಾವುದೇ ಅಹಿತಕರ ಘಟನೆ ನಡೆಯದಂತೆ ಹೆಚ್ಚುವರಿ ಭದ್ರತಾ ಕ್ರಮಗಳನ್ನು ಕೈಗೊಂಡಿದ್ದಾರೆ.

ಕೆಎಸ್‌ಆರ್‌ಪಿ ನಾಲ್ಕು ತುಕಡಿಗಳು ಮತ್ತು 200ಕ್ಕೂ ಹೆಚ್ಚು ಪೊಲೀಸರನ್ನು ಗ್ರಾಮದಲ್ಲಿ ನಿಯೋಜಿಸಲಾಗಿದೆ. ಪೊಲೀಸರು ಪಥ ಸಂಚಲನ ಕೂಡಾ ನಡೆಸಿದ್ದಾರೆ. 'ಗರಡಿ ಮನೆ' ಆಸ್ತಿಗೆ ಸಂಬಂಧಿಸಿದಂತೆ ಗೊಂದಲವಿತ್ತು. ಕೆಲವು ಸ್ಥಳೀಯರು ಈ ವಿಷಯವನ್ನು ಪತ್ರಿಕೆಗಳಲ್ಲಿ ಓದಿ, ಈ ಆಸ್ತಿಯನ್ನು ವಕ್ಫ್ ಆಸ್ತಿ ಎಂದು ಗುರುತಿಸಬಹುದೆಂಬ ಭೀತಿಯಿಂದ ನಂತರ ತೂರಾಟ ನಡೆಸಿದ್ದಾರೆ. ಗ್ರಾಮದಲ್ಲಿ ಮೂರು ಆಸ್ತಿಗಳು ವಕ್ಫ್ ಮಂಡಳಿ ಅಧೀನದಲ್ಲಿವೆ. ವಕ್ಫ್ ಮಂಡಳಿ ಪಟ್ಟಿ ಕುರಿತು ಜಿಲ್ಲಾಡಳಿತದಿಂದ ಯಾವುದೇ ನೋಟಿಸ್ ಜಾರಿಯಾಗಿಲ್ಲ. ಆದರೆ, ಜನರು ತಮ್ಮ ಆಸ್ತಿಯನ್ನು ವಕ್ಫ್ ಆಸ್ತಿ ಎಂದು ನಮೂದಿಸಿಬಹುದೆಂಬ ಭಯದಿಂದ ಹಿಂಸಾಚಾರದಲ್ಲಿ ತೊಡಗಿದ್ದಾರೆ. ಪರಿಸ್ಥಿತಿ ನಿಯಂತ್ರಣದಲ್ಲಿದೆ ಎಂದು ಮಹಾಂತೇಶ್ ಹೇಳಿದರು.

ಮುಂದುವರೆದ ಆನ್‌ಲೈನ್ ದೋಖಾ

ಮುಂಬೈ ಪೊಲೀಸರ ಹೆಸರಿನಲ್ಲಿ ವೃದ್ಧರ ಘಾಸಿಗೊಳಿಸಿ 1.06 ಕೋಟಿ ಸುಲಿಗೆ

ಮೈಸೂರು, ಅ.31(ಎಸ್‌ಬಿಡಿ)– ಮುಂಬೈ ಪೊಲೀಸ್ ಎಂದು ಮೈಸೂರಿನ ವೃದ್ಧರೊಬ್ಬರಿಗೆ ಕರೆ ಮಾಡಿ, ಪರಿಶೀಲನೆ ನೆಪದಲ್ಲಿ ಕೋಟಿ ರೂ.ಗೂ ಹೆಚ್ಚು ಹಣವನ್ನು ಲಪಟಾಯಿಸಿರುವ ಬಗ್ಗೆ ಮೈಸೂರಿನ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇಲ್ಲಿನ ಕುವೆಂಪುನಗರದಲ್ಲಿ ನೆಲೆಸಿರುವ 82 ವರ್ಷದ ನಿವೃತ್ತರೊಬ್ಬರಿಗೆ ಅ.8ರಂದು ಬೆಳಗ್ಗೆ ಕರೆ ಮಾಡಿದ ವ್ಯಕ್ತಿಯೊಬ್ಬ, ತಾನು ನೋಟಿಫಿಕೇಷನ್ ಯೂನಿಟ್ ಟ್ರೈ ಡಿಪಾರ್ಟ್‌ಮೆಂಟ್ ಟೆಲಿಕಾಂ ರಿಜಿಸ್ಟರಿಂಗ್ ಅಥಾರಿಟಿ ಆಫ್ ಇಂಡಿಯಾದ ಅಧಿಕಾರಿ ಎಂದು ಪರಿಚಯಿಸಿಕೊಂಡಿದ್ದಾನೆ. ಕರೆ ಮಾಡಿದ ಕಾರಣ ಕೇಳಿದಾಗ ನಿಮ್ಮ ನಂಬರ್‌ನಿಂದ ಅನೈತಿಕ ಜಾಹಿರಾತು ಮತ್ತು ಪತ್ಯ ಕಳುಹಿಸಿ ಕಿರುಕುಳ ನೀಡಿರುವ ಸಂಬಂಧ ಕೇಸ್ ಆಗಿದೆ. ಆದ್ದರಿಂದ ಮುಂಬೈ ಪೊಲೀಸ್ ಠಾಣೆಗೆ ಸಂಪರ್ಕಿಸಬೇಕು ಎಂದು ತಿಳಿಸಿದ್ದಾನೆ. ನಂತರ ಬೇರೆ ನಂಬರ್‌ಗಳಿಂದ ಕರೆ ಮಾಡಿದ ಮತ್ತೊಬ್ಬ ಮುಂಬೈ ಪೊಲೀಸ್ ಠಾಣೆಯಿಂದ ಮಾತನಾಡುತ್ತಿದ್ದೇನೆ, ಮನಿ ಲಾಂಡರಿಂಗ್ ಕೇಸ್‌ನಲ್ಲಿ ನಿಮ್ಮ ಮೇಲೆ ಸಂಶಯವಿದೆ ಎಂದು ವಾಟ್ಸಾಪ್‌ನಲ್ಲಿ ದಾಖಲೆಗಳನ್ನು ಕಳುಹಿಸಿದ್ದಾನೆ. ಅಲ್ಲದೆ ನಿಮ್ಮ ಬ್ಯಾಂಕ್ ಖಾತೆಗಳಲ್ಲಿರುವ ಹಣವನ್ನು ಪರಿಶೀಲಿಸಬೇಕಿರುವುದರಿಂದ ನಾವು ತಿಳಿಸಿದ ಖಾತೆಗೆ ಹಣ ಸಂದಾಯ ಮಾಡಿ, ಪರಿಶೀಲನೆ ಬಳಿಕ ವಾಪಸ್ ಕಳುಹಿಸುತ್ತೇವೆ ಎಂದು ಹೇಳಿದ್ದಾನೆ. ಇದನ್ನು ನಂಬಿ ಹಂತ ಹಂತವಾಗಿ 1,06,50,000 ರೂ. ಕಳುಹಿಸಿ, ವಂಚನೆಗೆ ಒಳಗಾಗಿದ್ದಾರೆ.

ಕೆಲಸದ ಆಮಿಷ ತೋರಿ ವೈದ್ಯರಿಗೆ 12.11 ಲಕ್ಷ ವಂಚನೆ

ಮೈಸೂರು, ಅ.31(ಎಸ್‌ಬಿಡಿ)– ಕತಾರ್‌ನಲ್ಲಿ ಉದ್ಯೋಗ ಕೊಡಿಸುವುದಾಗಿ ಮೈಸೂರಿನ ವೈದ್ಯರೊಬ್ಬರಿಂದ ಲಕ್ಷಾಂತರ ರೂ. ಪಡೆದು ವಂಚಿಸಿರುವ ಬಗ್ಗೆ ನಜರ್‌ಬಾದ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೈಸೂರಿನಲ್ಲಿ ಡೆಂಟಲ್ ಕ್ಲಿನಿಕ್ ನಡೆಸುತ್ತಿರುವ ವೈದ್ಯರೊಬ್ಬರು, ಎಂಡೋಡಾಂಟಿಸ್ಟ್ ತಜ್ಞರಾಗಿರುವುದರಿಂದ ಕತಾರ್‌ನಲ್ಲಿ ಉದ್ಯೋಗ ಮಾಡುವ ಆಸೆ ಹೊಂದಿದ್ದರು. ಅದೇ ವೇಳೆ ಜಾಹಿರಾತಿನಲ್ಲಿ ಪ್ರಕಟವಾಗಿದ್ದ ದೂರವಾಣಿ ಸಂಖ್ಯೆಗೆ ಕರೆ ಮಾಡಿದಾಗ ಮುಂಬೈ ಮೂಲದ ಕಂಪನಿಯೊಂದರ ಪ್ರತಿನಿಧಿ ಎಂದು ಮಾತನಾಡಿ, ಕತಾರ್‌ನಲ್ಲಿ ಉದ್ಯೋಗ ಹಾಗೂ ಅಗತ್ಯ ಲೈಸನ್ಸ್ ಕೊಡಿಸುವುದಾಗಿ ನಂಬಿಸಿ 12.11 ಲಕ್ಷ ರೂ. ಪಡೆದು ವಂಚಿಸಿರುವುದಾಗಿ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಪಿ.ಆರ್. ಶಾಂತಾಗೆ ಪಿಎಚ್.ಡಿ ಪದವಿ



ಮೈಸೂರು, ಅ. 31– ಡಾ. ಜಿ.ಹೆಚ್. ನಾಗರಾಜ ಅವರ ಮಾರ್ಗದರ್ಶನದಲ್ಲಿ ಪಿ.ಆರ್. ಶಾಂತಾ ಅವರು ರಾಜ್ಯಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಆರ್. ಶಿರಾಜ್ ಭಾಷಾಗೆ ಪಿಎಚ್.ಡಿ ಪದವಿ



ಮೈಸೂರು, ಅ. 31– ಡಾ. ಆರ್.ಮಹೇಶ್ ಅವರ ಮಾರ್ಗದರ್ಶನದಲ್ಲಿ ಆರ್. ಶಿರಾಜ್ ಭಾಷಾ ಅವರು ನಿರ್ವಹಣೆ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ನ.5ರಂದು ಮಹಿಳಾ, ಮಕ್ಕಳ ಕಲಾಕೃತಿ ವಿಭಾಗ ಉದ್ಘಾಟನೆ, ಮಹಿಳೆಯರಿಗೆ ವಿವಿಧ ಆಟೋಟ ಸ್ಪರ್ಧೆ

ಮೈಸೂರು,ಅ.31(ಪಿಎಂ)– ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ 2024ರ ದಸರಾ ಮಹೋತ್ಸವದ ಮಹಿಳಾ ಮತ್ತು ಮಕ್ಕಳ ಉಪಸಮಿತಿ ವತಿಯಿಂದ ನ.5ರಂದು ಮೈಸೂರಿನ ದಸರಾ ವಸ್ತು ಪ್ರದರ್ಶನ ಆವರಣದ ಕನ್ನಡ ಕಾರಂಜಿ ಕಟ್ಟಡದಲ್ಲಿ ಮಹಿಳಾ ಮತ್ತು ಮಕ್ಕಳ ಕಲಾಕೃತಿ ವಿಭಾಗದ ಉದ್ಘಾಟನೆ ಮತ್ತು ಮಹಿಳೆಯರಿಗೆ ವಿವಿಧ ಆಟೋಟ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ.

ಅಂದು ಮಧ್ಯಾಹ್ನ 2ರಿಂದ 3.30ರ ವರೆಗೆ ಮಹಿಳೆಯರಿಗಾಗಿ ರಂಗೋಲಿ ಸ್ಪರ್ಧೆ ಏರ್ಪಡಿಸಿದ್ದು, ಆಸಕ್ತ ಮಹಿಳೆಯರು ಭಾಗವಹಿಸುವಂತೆ ಕೋರಲಾಗಿದೆ. ಅಲ್ಲದೆ, ಅಂದು ಸಂಜೆ 4ಕ್ಕೆ ಮಹಿಳಾ ಮತ್ತು ಮಕ್ಕಳ ಕಲಾಕೃತಿ ವಿಭಾಗದ ಉದ್ಘಾಟನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮದಲ್ಲಿ ಗ್ಯಾರಂಟಿ ಯೋಜನೆಗಳ ರಾಜ್ಯ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್, ರಾಜ್ಯ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಸೌಮ್ಯ ರೆಡ್ಡಿ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಜೊತೆಗೆ ಸಂಜೆ 5ಕ್ಕೆ ಮಹಿಳೆಯರಿಗೆ ಮ್ಯೂಸಿಕಲ್ ಚೇರ್ ಮತ್ತು ಕೆರೆ–ದಡ ಆಟೋಟ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ. ಈ ಸ್ಪರ್ಧೆಗಳ ಉದ್ಘಾಟನೆಯಲ್ಲಿ ಮುಖ್ಯ ಅತಿಥಿಯಾಗಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಪಾಲ್ಗೊಳ್ಳಲಿದ್ದಾರೆ. ಶಾಸಕರಾದ ತನ್ವೀರ್‌ಸೇಠ್, ಕೆ.ಹರೀಶ್‌ಗೌಡ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಆಟೋಟ ಸ್ಪರ್ಧೆಯಲ್ಲಿ ಭಾಗವಹಿಸಲಿಚ್ಛಿಸುವವರು ಹೆಚ್ಚಿನ ಮಾಹಿತಿಗಾಗಿ ಅನುಸೂಯ (96116 00103) ಅವರನ್ನು ಸಂಪರ್ಕಿಸಬಹುದು ಎಂದು ಉಪಸಮಿತಿ ಅಧ್ಯಕ್ಷೆ ಶಾರದಾ ಸಂಪತ್ ತಿಳಿಸಿದ್ದಾರೆ.

ಪರಿಸರ ಸ್ನೇಹಿ ದೀಪಾವಳಿ ಆಚರಿಸಲು ಪಾಲಿಕೆಯಿಂದ ಜಾಗೃತಿ ಅಭಿಯಾನ

ಪ್ರತ್ಯೇಕವಾಗಿ ಪಟಾಕಿ ತ್ಯಾಜ್ಯ ನೀಡಲು ಮನವಿ

ಮೈಸೂರು,ಅ.31(ಪಿಎಂ)– ಬೆಳಕಿನ ಹಬ್ಬ ದೀಪಾವಳಿಯನ್ನು ಪರಿಸರ ಸ್ನೇಹಿಯಾಗಿ ಆಚರಿಸುವಂತೆ ನಾಗರಿಕರಲ್ಲಿ ಜಾಗೃತಿ ಮೂಡಿಸಲು ಮೈಸೂರು ಮಹಾನಗರ ಪಾಲಿಕೆ ಮುಂದಾಗಿದೆ.

'ಸ್ವಚ್ಛ ದೀಪಾವಳಿ–ಶುಭ ದೀಪಾವಳಿ' ಶೀರ್ಷಿಕೆಯಡಿ ಜಾಗೃತಿ ಕಾರ್ಯಕ್ರಮಗಳನ್ನು ಪಾಲಿಕೆ ಈಗಾಗಲೇ ಪ್ರಾರಂಭಿಸಿದೆ. ನ.3ರವರೆಗೂ ಜಾಗೃತಿ ಕಾರ್ಯಕ್ರಮಗಳು ಮುಂದುವರೆಯಲಿವೆ.

ಪಾಲಿಕೆಯ ಎಲ್ಲಾ 9 ವಲಯಗಳ ವ್ಯಾಪ್ತಿಯಲ್ಲಿ ಪರಿಸರ ಸ್ನೇಹಿ ಹಸಿರು ಪಟಾಕಿ ಬಳಸಲು ಹಾಗೂ ಸುರಕ್ಷಿತ ಕ್ರಮಗಳ ವಹಿಸಲು ಪರಿಸರ ಇಂಜಿನಿಯರ್‌ಗಳು, ಆರೋಗ್ಯ ನಿರೀಕ್ಷಕರು ಮತ್ತು ಪೌರಕಾರ್ಮಿಕರು, ನಾಗರಿಕರಿಗೆ ಜಾಗೃತಿ ಮೂಡಿಸುತ್ತಿದ್ದಾರೆ. ಪರಿಸರ ಸ್ನೇಹಿ ಮತ್ತು ಮಾಲಿನ್ಯ ಮುಕ್ತ ದೀಪಾವಳಿ ಆಚರಿಸಲು ನಗರದ ಹಲವು ಶಾಲಾ–ಕಾಲೇಜುಗಳಲ್ಲಿ ಜಾಗೃತಿ ಅಭಿಯಾನ ಸಹ ನಡೆಸಲಾಗಿದೆ.

ಸುರಕ್ಷಿತ ವಿಲೇವಾರಿ ಮಾಡಿ: ಪಟಾಕಿ ತ್ಯಾಜ್ಯವನ್ನು ಸುರಕ್ಷಿತವಾಗಿ ವಿಲೇವಾರಿ ಮಾಡಲು ಆದ್ಯತೆ ನೀಡಬೇಕೆಂದು ಪಾಲಿಕೆ ಆಯುಕ್ತ ಆಶಾದ್ ಉರ್ ರೆಹಮಾನ್ ಷರೀಫ್ ಮನವಿ ಮಾಡಿದ್ದಾರೆ. ಪಟಾಕಿ ಸಿಡಿಸಿದ ನಂತರ ಅವುಗಳ ತ್ಯಾಜ್ಯವನ್ನು ಸಂಗ್ರಹಿಸಿ ದೈನಂದಿನ ತ್ಯಾಜ್ಯ ಸಂಗ್ರಹಣೆಗಾಗಿ ಬರುವ ಪೌರಕಾರ್ಮಿಕರಿಗೆ ಪ್ರತ್ಯೇಕವಾಗಿ ನೀಡುವಂತೆ ಅವರು ಕೋರಿದ್ದಾರೆ. ಕೇಂದ್ರ ವಸತಿ ಮತ್ತು ವ್ಯವಹಾರಗಳ ಸಚಿವಾಲಯವು ದೀಪಗಳ ಹಬ್ಬವಾದ ದೀಪಾವಳಿಯನ್ನು ಪರಿಸರ ಸ್ನೇಹಿಯಾಗಿ ಆಚರಿಸಲು ಅಭಿಯಾನದ ಮೂಲಕ ಜಾಗೃತಿ ಮೂಡಿಸುವಂತೆ ಸ್ಥಳೀಯ ಸಂಸ್ಥೆಗಳಿಗೆ ಸೂಚನೆ ನೀಡಿದ್ದು, ಅದರಂತೆ ಪಾಲಿಕೆ ಈ ಅಭಿಯಾನ ಕೈಗೆತ್ತುಕೊಂಡಿದೆ. ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿರುವ ಪಾಲಿಕೆ ಮುಖ್ಯ ಕಚೇರಿಯ ಮೊದಲನೆ ಅಂತಸ್ತಿನಲ್ಲಿ ಬುಧವಾರ ಅಭಿಯಾನದ ಪ್ರಯುಕ್ತ 'ಸ್ವಚ್ಛ ದೀಪಾವಳಿ–ಶುಭ ದೀಪಾವಳಿ' ಎಂಬ ವಾಕ್ಯವನ್ನು ರಂಗೋಲಿ ಹಾಗೂ ಮಾರುಕಟ್ಟೆಯಲ್ಲಿ ದೊರತ ತ್ಯಾಜ್ಯ ಹೂಗಳಿಂದ ರಚಿಸಿ ಪರಿಸರ ಸ್ನೇಹಿ ದೀಪಾವಳಿ ಆಚರಿಸಬೇಕೆಂಬ ಸಂದೇಶ ರವಾನಿಸಲಾಯಿತು.



ಮೈಸೂರು ಮಹಾನಗರ ಪಾಲಿಕೆ ಮುಖ್ಯ ಕಚೇರಿಯ ಮೊದಲನೆ ಅಂತಸ್ತಿನಲ್ಲಿ ಬುಧವಾರ ಅಭಿಯಾನದ ಪ್ರಯುಕ್ತ 'ಸ್ವಚ್ಛ ದೀಪಾವಳಿ–ಶುಭ ದೀಪಾವಳಿ' ಎಂಬ ವಾಕ್ಯವನ್ನು ರಂಗೋಲಿ, ಹೂಗಳಿಂದ ರಚಿಸಿ ಪರಿಸರ ಸ್ನೇಹಿ ದೀಪಾವಳಿ ಆಚರಿಸಬೇಕೆಂಬ ಸಂದೇಶ ರವಾನಿಸಲಾಯಿತು.

ಶ್ರೀ ಭಾರತೀ ತೀರ್ಥ ಸ್ವಾಮೀಜಿಯವರ ಸನ್ಯಾಸ ಸ್ವೀಕಾರ ಸುವರ್ಣ ಮಹೋತ್ಸವ ಪ್ರಯುಕ್ತ ಅನ್ನ ಸಂತರ್ಪಣೆ


ಮೈಸೂರಿನ ಅಗ್ರಹಾರದಲ್ಲಿ ಅನ್ನಸಂತರ್ಪಣೆ ಕಾರ್ಯಕ್ರಮ ನಡೆಯಿತು.

ಮೈಸೂರು,ಅ.31(ಪಿಎಂ)–ಶ್ರೀ ಭಾರತಿ ತೀರ್ಥ ಸ್ವಾಮೀಜಿಯವರ ಸನ್ಯಾಸ ಸ್ವೀಕಾರ ಸುವರ್ಣ ಮಹೋತ್ಸವದ ಪ್ರಯುಕ್ತ ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ವತಿಯಿಂದ ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ಕಾರ್ಯಕ್ರಮ ನಡೆಯಿತು.

ಮೈಸೂರಿನ ಅಗ್ರಹಾರದಲ್ಲಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಶಾಸಕ ಟಿ.ಎಸ್.ಶ್ರೀವತ್ಸ, ಸನಾತನ ಧರ್ಮ ಸಂಸ್ಕೃತಿಯಲ್ಲಿ ತಂದೆ–ತಾಯಿ ನಂತರದ ಸ್ಥಾನವನ್ನು ಗುರುವಿಗೆ ನೀಡಲಾಗಿದೆ. ಕೇವಲ ಶಿಕ್ಷಣ ನೀಡಿದ ಗುರುಗಳಲ್ಲದೆ ನಮಗೆ ಸನ್ಮಾರ್ಗ ತೋರಿದ ಪ್ರತಿಯೊಬ್ಬರೂ ಗುರುಗಳ ಸ್ಥಾನದಲ್ಲಿರುತ್ತಾರೆ. ಗುರು ತೋರಿದ ಮಾರ್ಗದಲ್ಲಿ ನಡೆದು ಸುಜ್ಞಾನ ಬೆಳೆಸಿಕೊಂಡರೆ ಜೀವನ ಪಾವನವಾಗುತ್ತದೆ ಎಂದರು.

ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ಮಾತನಾಡಿ, ಶೃಂಗೇರಿ ಮಠವು ಶ್ರೀ ಶಂಕರಾಚಾರ್ಯರಿಂದ ಸ್ಥಾಪಿಸಲ್ಪಟ್ಟ ನಾಡಿನ ಶ್ರೇಷ್ಠ ಆಧ್ಯಾತ್ಮಿಕ ಶಕ್ತಿ ಕೇಂದ್ರವಾಗಿದೆ. ಭಾರತೀಯ ಸನಾತನ ಧರ್ಮವನ್ನು ಉಳಿಸಿ ಬೆಳೆಸುವ ಶ್ರೇಷ್ಠ ಕಾರ್ಯವನ್ನು ಮಠವು ನಿತ್ಯ ನಿರಂತರವಾಗಿ 1,200ಕ್ಕೂ ಹೆಚ್ಚು ವರ್ಷಗಳಿಂದ ನೆರವೇರಿಸಿಕೊಂಡು ಬಂದಿದೆ. ಶ್ರೀ ಭಾರತಿ ತೀರ್ಥ ಸ್ವಾಮೀಜಿಯವರ ದಿವ್ಯ ಮಾರ್ಗದರ್ಶನದಲ್ಲಿ ಶೃಂಗೇರಿ ಮಠವು ವಿಶ್ವ ಮಟ್ಟದಲ್ಲಿ ಆಧ್ಯಾತ್ಮಿಕ ಶಕ್ತಿ ಕೇಂದ್ರವಾಗಿ ಹೊರಹೊಮ್ಮಿದ್ದು, ಕೋಟ್ಯಾಂತರ ಭಕ್ತರಿಗೆ ಸನ್ಮಾರ್ಗದಲ್ಲಿ ನಡೆಯಲು ಸ್ಫೂರ್ತಿ ಮತ್ತು ಶಕ್ತಿ ನೀಡುತ್ತಿದೆ ಎಂದು ಹೇಳಿದರು.

ಶಂಕರ ಮಠದ ಧರ್ಮಾಧಿಕಾರಿ ರಾಮಚಂದ್ರಾಚಾರ್ಯ, ವ್ಯಾಖ್ಯಾನಕಾರ ಕೇಶಾದ್ರಿ ಭಟ್, ಕಲ್ಪನಾ ರಾಮಚಂದ್ರ, ಗ್ರಾಮಾಂತರ ಅಧ್ಯಕ್ಷ ಗೋಪಾಲ್ ರಾವ್, ಶಂಕರ ಮಠದ ಸೇವಾ ಕತೃಗಳಾದ ಎಸ್.ರಂಗನಾಥ, ಹರೀಶ್, ಎಂ.ಆರ್.ಬಾಲಕೃಷ್ಣ, ರಾಮಕುಮಾರ್, ನಾಗಭೂಷಣ್, ಬಾಬಣ್ಣ, ಸುಚೀಂದ್ರ, ಚಕ್ರಪಾಣಿ, ನಾಗಶ್ರೀ, ಜ್ಯೋತಿ, ಮೀನಾಕ್ಷಿ, ಸಹನಾ, ಪಂತ್ತು ಮತ್ತಿತರರು ಹಾಜರಿದ್ದರು.

ಮೈಸೂರಿಂದ ಹೈದರಾಬಾದ್, ಚೆನ್ನೈಗೆ ನೂತನ ವೋಲ್ವೊ ಬಸ್‌ಗಳ ಸಂಚಾರ

ಐರಾವತ 2.0 ಕ್ಲಬ್ ಕ್ಲಾಸ್ ವೋಲ್ವೊ ಬಸ್‌ಗೆ ಹೊಸ ವಿನ್ಯಾಸದ ಮೆರುಗು



ಮೈಸೂರು, ಅ.31(ಬಿಎಲ್‌ಯು)– ಆಕರ್ಷಕ ಹಾಗೂ ಹೊಸ ವಿನ್ಯಾಸದ ಕೆಎಸ್‌ಆರ್‌ಟಿಸಿ ಐರಾವತ 2.0 ಕ್ಲಬ್ ಕ್ಲಾಸ್ ನೂತನ ವೋಲ್ವೊ ಬಸ್‌ಗಳು ಮೈಸೂರಿನಿಂದ ಹೈದರಾಬಾದ್ ಹಾಗೂ ಚೆನ್ನೈ ನಡುವೆ ಸಂಚರಿಸಲಿವೆ.

ಮೈಸೂರಿನಿಂದ ಹೈದರಾಬಾದ್‌ಗೆ ಹಾಗೂ ಚೆನ್ನೈಗೆ ತಲಾ ಎರಡು ವೋಲ್ವೊ ಬಸ್‌ಗಳು ಸಂಚರಿಸಲಿವೆ. ಈಗ ಸಂಚರಿಸುತ್ತಿರುವ ಬಸ್‌ಗಳಲ್ಲಿ ಆಸನಗಳು ಭರ್ತಿಯಾಗಿ ಬಹಳಷ್ಟು ಜನರಿಗೆ ಬಸ್ ಸಿಗುತ್ತಿರಲಿಲ್ಲ. ಇದರಿಂದ ಮೈಸೂರಿನಿಂದ ಹೈದರಾಬಾದ್ ಹಾಗೂ ಚೆನ್ನೈಗೆ ಸಂಚರಿಸಲು ಪ್ರಯಾಣಿಕರಿಂದ ಹೆಚ್ಚು ಬೇಡಿಕೆ ಇತ್ತು. ಹಾಗಾಗಿ ಎರಡು ನಗರಗಳ ನಡುವೆ ತಲಾ ಎರಡು ಬಸ್‌ಗಳ ಸಂಚಾರ ಆರಂಭಿಸಲಾಗಿದೆ.

ಮೈಸೂರು ಸೇರಿದಂತೆ ವಿವಿಧೆಡೆಗೆ 20 ನೂತನ ವೋಲ್ವೊ ಬಸ್‌ಗಳ ಸಂಚಾರಕ್ಕೆ ನಿನ್ನೆ ಬೆಂಗಳೂರಿನ ವಿಧಾನ ಸೌಧದ ಮುಂದೆ ಹಸಿರು ನಿಶಾನೆ ತೋರಲಾಗಿತ್ತು. ಏರೋಡೈನಾಮಿಕ್ ವಿನ್ಯಾಸದ ಈ ವೋಲ್ವೊ ಬಸ್‌ನಲ್ಲಿ ಫೈರ್ ಅಲರಾಂ ಮತ್ತು ಪ್ರೊಟೆಕ್ಷನ್ ಸಿಸ್ಟಂ (ಎಫ್‌ಎಪಿಎಸ್) ಅಳವಡಿಸಿದ್ದು, ತುರ್ತು ಸಂದರ್ಭದಲ್ಲಿ ಪ್ರಯಾಣಿಕರಿಗೆ ಹೆಚ್ಚಿನ ಸುರಕ್ಷತೆ ಇರುತ್ತದೆ. ನೂತನ ಬಸ್‌ನಲ್ಲಿ ಸಿ ಟೈಪ್ ನಂತಹ ಹೊಸ ಜನರೇಷನ್ ಮೊಬೈಲ್ ಚಾರ್ಜಿಂಗ್ ಪಾಯಿಂಟ್‌ಗಳಿವೆ.

ಈ ಬಸ್ ಬೆಲೆ 1.78 ಕೋಟಿ ರೂಪಾಯಿಗಳಾಗಿದೆ. ಮೈಸೂರಿನಿಂದ ಹೈದರಾಬಾದ್‌ಗೆ 723 ಕಿಲೋ ಮೀಟರ್ ಅಂತರವಿದ್ದರೆ, ಮೈಸೂರಿನಿಂದ ಚೆನ್ನೈಗೆ 482 ಕಿಲೋಮೀಟರ್ ಅಂತರವಿದೆ. ಮೈಸೂರಿನಿಂದ ಈ ಎರಡು ನಗರಗಳು ಹೆಚ್ಚು ದೂರವಿರುವ ಕಾರಣ ಕ್ಲಬ್ ಕ್ಲಾಸ್ ವೋಲ್ವೊ ಬಸ್‌ನಲ್ಲಿ ಆರಾಮದಾಯಕ ಪ್ರಯಾಣದ ಅನುಭವವಾಗಲಿದೆ.

ಮೈಸೂರಿನಿಂದ ತಿರುಪತಿ, ಮಂತ್ರಾಲಯ ಹಾಗೂ ಚೆನ್ನೈಗೆ ಸ್ಲೀಪರ್ ಬಸ್‌ಗಳಿಗೆ ಬಹಳ ಬೇಡಿಕೆ ಇದೆ. ಈ ಹಿನ್ನೆಲೆಯಲ್ಲಿ ಆರು ಸ್ಲೀಪರ್ ಬಸ್‌ಗಳ ಅವಶ್ಯವಿದೆ ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಪ್ರಧಾನ ಕಚೇರಿಗೆ ಬೇಡಿಕೆ ಇಟ್ಟಿದ್ದೇವೆ ಎಂದು ಮೈಸೂರಿನ ಕೆಎಸ್‌ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿ ಶ್ರೀನಿವಾಸ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಮೈಸೂರು ಗ್ರಾಮಾಂತರ ವಿಭಾಗದಲ್ಲಿ ಸದ್ಯ 14 ಎಲೆಕ್ಟ್ರಿಕ್ ಬಸ್‌ಗಳು ಸಂಚರಿಸುತ್ತಿವೆ. ಮತ್ತಷ್ಟು ಎಲೆಕ್ಟ್ರಿಕ್ ಬಸ್‌ಗಳು ಬೇಕೆಂದು ಸದ್ಯಕ್ಕೆ ನಿಗಮಕ್ಕೆ ಯಾವುದೇ ಪ್ರಸ್ತಾವನೆ ಸಲ್ಲಿಸಿಲ್ಲ ಎಂದು ಹೇಳಿದರು.

ಮೈಸೂರಿಂದ ಮಹದೇಶ್ವರ ಬೆಟ್ಟಕ್ಕೆ ಹೆಚ್ಚುವರಿ 300 ಬಸ್ ಸಂಚಾರ



ದೀಪಾವಳಿ ಸಂದರ್ಭದಲ್ಲಿ ಮೈಸೂರಿನಿಂದ ಮಲೆ ಮಹದೇಶ್ವರ ಬೆಟ್ಟಕ್ಕೆ 300 ಹೆಚ್ಚುವರಿ ಬಸ್‌ಗಳ ಸಂಚಾರ ಆರಂಭಿಸಲಾಗಿದೆ ಎಂದು ಕೆಎಸ್‌ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿ ಶ್ರೀನಿವಾಸ್ ತಿಳಿಸಿದರು. ದೀಪಾವಳಿ ಸಂದರ್ಭದಲ್ಲಿ ಮಲೆ ಮಹದೇಶ್ವರ ಬೆಟ್ಟಕ್ಕೆ ಹೋಗುವವರ ಸಂಖ್ಯೆ ಹೆಚ್ಚಿರುವ ಕಾರಣ ಪ್ರಯಾಣಿಕರ ಅನುಕೂಲಕ್ಕಾಗಿ ಹೆಚ್ಚುವರಿ ಬಸ್‌ಗಳ ಸಂಚಾರ ಆರಂಭಿಸಲಾಗಿದೆ ಎಂದು ಸ್ಪಷ್ಟಪಡಿಸಿದರು. ಇದಲ್ಲದೆ ಮೈಸೂರಿನಿಂದ ಬೆಂಗಳೂರಿಗೆ ಹೆಚ್ಚುವರಿ 70 ಬಸ್, ಹಾಸನಾಂಬ ದರ್ಶನಕ್ಕೆ ಮೈಸೂರಿನಿಂದ ಹಾಸನಕ್ಕೆ ಹೆಚ್ಚುವರಿ 20 ಬಸ್ ಹಾಗೂ ಮೈಸೂರಿನಿಂದ ಸ್ಥಳೀಯವಾಗಿ ಬೇರೆ ಬೇರೆ ಸ್ಥಳಗಳಿಗೆ ಹೆಚ್ಚುವರಿ 70 ಬಸ್‌ಗಳ ಸಂಚಾರ ಆರಂಭಿಸಲಾಗಿದೆ. ಮಂಗಳವಾರದ ತನಕ ಹೆಚ್ಚುವರಿ ಬಸ್‌ಗಳ ಸೌಲಭ್ಯವಿರುತ್ತದೆ ಎಂದು ಶ್ರೀನಿವಾಸ್ ಹೇಳಿದರು.

ಕನ್ನಡ ಪದ ಬಳಕೆ ಬಗ್ಗೆ ಅಭಿಯಾನ



ಕರ್ನಾಟಕ ಹಿತರಕ್ಷಣಾ ವೇದಿಕೆ ಸದಸ್ಯರು ಮೈಸೂರಿನ ಪ್ರಮುಖ ರಸ್ತೆಗಳ ಅಂಗಡಿ ಮುಂಗಟ್ಟುಗಳಲ್ಲಿ ಕನ್ನಡ ಪದಗಳನ್ನು ಬಳಸುವಂತೆ ಅಭಿಯಾನ ನಡೆಸಿದರು.

ಮೈಸೂರು, ಅ.31(ಜಿಎ)–ಕನ್ನಡ ರಾಜ್ಯೋತ್ಸವ ಹಾಗೂ ದೀಪಾವಳಿ ಅಂಗವಾಗಿ ಕರ್ನಾಟಕ ಹಿತರಕ್ಷಣಾ ವೇದಿಕೆ ವತಿಯಿಂದ ಡಿ.ದೇವರಾಜ ಅರಸು ರಸ್ತೆ, ವಿನೋಬ ರಸ್ತೆ, ಶಿವರಾಂಪೇಟೆ ಸುತ್ತಮುತ್ತಲ ಅಂಗಡಿ ಮುಂಗಟ್ಟುಗಳಿಗೆ ತೆರಳಿ ಗುಲಾಬಿ ಹೂವನ್ನು ನೀಡಿ ಕನ್ನಡ ಪದಗಳನ್ನು ಸರಿಯಾದ ರೀತಿಯಲ್ಲಿ ಬಳಸುವಂತೆ ಅಭಿಯಾನ ನಡೆಸಲಾಯಿತು.

ದೀಪಾವಳಿಯನ್ನು ದಿವಾಳಿ ಎಂದು ಶುಭ ಕೋರುವುದು. ಹಾಗೆಯೇ ದಸರಾವನ್ನು ದುಸ್ಸೆರಾ ಎಂದು ತಪ್ಪಾಗಿ ಶುಭ ಕೋರಲಾಗುತ್ತಿದೆ. ಅನ್ಯ ಭಾಷೆ ಶೈಲಿಯಲ್ಲಿ ಪದಬಳಕೆ ಮಾಡಿ ಶುಭ ಕೋರುವುದು ಖಂಡನೀಯ. ಅದರ ಅರ್ಥವೇ ಬೇರೆಯಿರುತ್ತದೆ. ಹಾಗಾಗಿ ಕರ್ನಾಟಕ ಹಿತರಕ್ಷಣಾ ವೇದಿಕೆ ವತಿಯಿಂದ ಎಲ್ಲಾ ಅಂಗಡಿ ಮುಂಗಟ್ಟುಗಳಿಗೆ ತೆರಳಿ ಗುಲಾಬಿ ನೀಡಿ ಈ ಮನವಿ ಮಾಡಿಕೊಳ್ಳಲಾಯಿತು.

ಕೆಲವು ಅಂಗಡಿಗಳ ಮುಂಭಾಗದ ಜಾಹೀರಾತಿನಲ್ಲಿ ದೀಪಾವಳಿಯನ್ನು ದಿವಾಳಿಯೆಂದು ಬರೆದು ಶುಭಕೋರುತ್ತಿರುವುದನ್ನು ಖಂಡಿಸಿ, ಅವರಿಗೆ ತಿಳಿಹೇಳಿ ದಯಮಾಡಿ ಕನ್ನಡವನ್ನು ಸರಿಯಾಗಿ ಪ್ರಯೋಗಿಸಿ ಎಂದು ಮನವಿ ಮಾಡಿಕೊಂಡರು. ಈ ವೇಳೆ ಕರ್ನಾಟಕ ಹಿತರಕ್ಷಣಾ ವೇದಿಕೆ ಅಧ್ಯಕ್ಷ ವಿನಯ್‌ಕುಮಾರ್ ಮಾತನಾಡಿ, ದೀಪಾವಳಿ ದಿವಾಳಿಯಾಗದಿರಲಿ. ಹಬ್ಬದ ದಿನಗಳು ಹತ್ತಿರ ಬರುತ್ತಿದ್ದಂತೆ ಗ್ರಾಹಕರಿಗೆ ಶುಭಾಶಯ ತಿಳಿಸಲು ಹಲವಾರು ಉದ್ದಿಮೆಗಳು ಕನ್ನಡಿಗರಿಗೆ ಉತ್ತರ ಭಾರತದ ಭಾಷೆಯಲ್ಲೇ 'ದಿವಾಳಿ' ಹಬ್ಬದ ಶುಭಾಶಯಗಳನ್ನು ತಿಳಿಸುತ್ತವೆ. ಕರ್ನಾಟಕದಲ್ಲಿಯೇ ಹುಟ್ಟಿ ಬೆಳೆದ ಬ್ಯಾಂಕ್‌ಗಳು ದಿವಾಳಿ ಹಬ್ಬದ ಶುಭಾಶಯಗಳು ಎಂದು ಗ್ರಾಹಕರಿಗೆ ತಿಳಿಸುತ್ತಿರುವುದು ನೋಡಿದರೆ. ಕನ್ನಡದ ಬಗ್ಗೆ ಇವರಿಗೆಷ್ಟು ಅಭಿಮಾನವಿದೆ ಎಂಬುದು ತಿಳಿಯುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಕನ್ನಡದಲ್ಲಿ ದಿವಾಳಿ ಎಂದರೆ ಎಲ್ಲವನ್ನೂ ಕಳೆದುಕೊಳ್ಳುವುದು ಎಂದರ್ಥವಿದೆ. 'ದಿವಾಳಿ ಹಬ್ಬ' ಎಂದರೆ ಕನ್ನಡಿಗರು ಏನೆಂದು ತಿಳಿದುಕೊಳ್ಳಬೇಕು? ಅದರಲ್ಲೂ ಕನ್ನಡಿಗರು ಹಣ ಇಟ್ಟಿರುವ ಬ್ಯಾಂಕುಗಳೇ ಹೀಗೆ ಹಾರೈಸಿದರೆ! ಕನ್ನಡಿಗರಿಗೆ ಪರಿಚಯವಿರುವ ಪದಗಳನ್ನೇ ಬಳಸಲು ತೊಂದರೆ ಏನು? ಈ ಬಗ್ಗೆ ಕನ್ನಡ ಪ್ರಾಧಿಕಾರವು ಕ್ರಮ ಕೈಗೊಳ್ಳಲಿ ಎಂದು ಆಗ್ರಹಿಸಿದರು. ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಗುರುರಾಜ್ ಶೆಟ್ಟಿ, ಪ್ರಮೋದ್, ನಿತಿನ್, ರವಿಚಂದ್ರ ವರುಣ ಮಹಾದೇವ್, ಮಂಜುನಾಥ್, ವಿಶಾಲ್, ಮಂಜು, ಫಾಲ್ಕನ್ ಮಾದೇಗೌಡ, ಸೋಮಶೇಖರ್ ಆಚಾರ್ ಮತ್ತಿತರರು ಉಪಸ್ಥಿತರಿದ್ದರು.

ಸಹಕಾರ ಬ್ಯಾಂಕ್ ಚುನಾವಣೆಯಲ್ಲಿ ಜಿಟಿಡಿ ಬೆಂಬಲಕ್ಕೆ ಮನವಿ


ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ 2025–30ರ ಸಾಲಿನ ಚುನಾವಣೆಯ ಹಿನ್ನೆಲೆಯಲ್ಲಿ ಮಾಜಿ ಅಧ್ಯಕ್ಷ ಕೆ.ಉಮಾಶಂಕರ್, ಅಧ್ಯಕ್ಷೆ ಪಿ.ರಾಜೇಶ್ವರಿ, ಉಪಾಧ್ಯಕ್ಷೆ ಪಿ.ಸವಿತಾ, ನಿರ್ದೇಶಕರಾದ ಹೆಚ್.ಹರೀಶ್‌ಕುಮಾರ್, ಸಿ.ರೇವಣ್ಣ, ಎಸ್‌ಟಿ ವಿಭಾಗದ ಪಡುವಾರಹಳ್ಳಿ ಎಂ.ರಾಮಕೃಷ್ಣ, ಕೆ.ಗಿರೀಶ್ ಇತರರು ಚಾಮುಂಡೇಶ್ವರಿ ಕ್ಷೇತ್ರದ ಶಾಸಕರೂ ಆದ ಹಿರಿಯ ಸಹಕಾರಿ ಧುರೀಣ ಜಿ.ಟಿ.ದೇವೇಗೌಡರು ಹಾಗೂ ಶ್ರೀಮತಿ ಲಲಿತಾ ಜಿ.ಟಿ.ದೇವೇಗೌಡರ ಭೇಟಿಯಾಗಿ ಸಹಕಾರ ಕೋರಿ, ಆಶೀರ್ವಾದ ಪಡೆದರು.

ದಸರಾ ವಸ್ತುಪ್ರದರ್ಶನದ ಸಾಂಸ್ಕೃತಿಕ ಕಾರ್ಯಕ್ರಮ ಇಂದು ಉದ್ಘಾಟನೆ

ಮೈಸೂರು, ಅ.31(ಬಿಎಲ್‌ಯು)– ಮೈಸೂರು ದಸರಾ ವಸ್ತು ಪ್ರದರ್ಶನದ ಸಾಂಸ್ಕೃತಿಕ ಕಾರ್ಯಕ್ರಮದ ಉದ್ಘಾಟನಾ ಸಮಾರಂಭ ನಾಳೆ (ನ.1) ನಡೆಯಲಿದೆ.

ದಸರಾ ವಸ್ತುಪ್ರದರ್ಶನದ ಗಾನ ಕೋಗಿಲೆ ಪಿ.ಕಾಳಿಂಗರಾವ್ ರಂಗಮಂಟಪದಲ್ಲಿ ನಾಳೆ ಸಂಜೆ 6.30 ಗಂಟೆಗೆ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಲಿದ್ದಾರೆ.

ಶಾಸಕರಾದ ತನ್ವೀರ್ ಸೇಠ್, ಜಿ.ಟಿ.ದೇವೇಗೌಡ, ಕೆ.ಹರೀಶ್‌ಗೌಡ, ಟಿ.ಎಸ್.ಶ್ರೀವತ್ಸ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದು, ನಿವೃತ್ತ ಪ್ರಾಂಶುಪಾಲ ಪ್ರೊ.ಎಂ.ಕೃಷ್ಣೇಗೌಡ ಮುಖ್ಯ ಭಾಷಣ ಮಾಡಲಿದ್ದಾರೆ. ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಉಪಸ್ಥಿತರಿರುವರು. ಈ ವೇಳೆ ಗಾಂಧಿನಗರದ ಶಿವಯೋಗಿ ಮಠದ ಶ್ರೀ ಜ್ಞಾನಪ್ರಕಾಶ ಸ್ವಾಮಿ, ಕೃಷಿ ಪಂಡಿತ್ ರಾಜ್ಯ ಮತ್ತು ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಸಯ್ಯದ್ ಘನಿಖಾನ್ ಅವರನ್ನು ಸನ್ಮಾನಿಸಲಾಗುವುದು.

ಇಂದು 'ನಲಿಯಿತು ನವಿಲು' ಮಕ್ಕಳ ನಾಟಕ ಪ್ರದರ್ಶನ

ಮೈಸೂರು, ಅ.31– ಅದಮ್ಯ ರಂಗಶಾಲೆ ಮತ್ತು ಸ್ಪಂದನ ಸಾಂಸ್ಕೃತಿಕ ಪರಿಷತ್ತಿನ ಸಂಯುಕ್ತ ಆಶ್ರಯದಲ್ಲಿ 'ನಲಿಯಿತು ನವಿಲು' ಮಕ್ಕಳ ನಾಟಕ ಪ್ರದರ್ಶನ ಸಮಾರಂಭವು ನ.1 ರಂದು ಸಂಜೆ 6 ಗಂಟೆಗೆ ನಗರದ ಕಿರುರಂಗಮಂದಿರದಲ್ಲಿ ನಡೆಯಲಿದೆ ಎಂದು ರಂಗಶಾಲೆಯ ಕಾರ್ಯದರ್ಶಿ ಚಂದ್ರು ಮಂಡ್ಯ ತಿಳಿಸಿದ್ದಾರೆ.

ದೇವರಾಜ ಉಪವಿಭಾಗದ ಪೊಲೀಸ್ ಸಹಾಯಕ ಆಯುಕ್ತ ಶಾಂತಮಲ್ಲಪ್ಪ ಉದ್ಘಾಟಿಸಲಿದ್ದು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ ಅಧ್ಯಕ್ಷತೆ ವಹಿಸುವರು. ಸ್ಪಂದನ ಸಾಂಸ್ಕೃತಿಕ ಪರಿಷತ್ತಿನ ಅಧ್ಯಕ್ಷ ಟಿ.ಸತೀಶ್ ಜವರೇಗೌಡ ಆಶಯ ನುಡಿಗಳನ್ನಾಡುವರು. ಮುಖ್ಯ ಅತಿಥಿಯಾಗಿ ಜಯನಗರ ಕ್ಷೇಮಾಭಿವೃದ್ಧಿ ಸಂಘದ ನಿರ್ದೇಶಕ ಸಿ.ಜಿ. ಮೂರ್ತಿ ರಾವ್ ಭಾಗವಹಿಸುವರು.

ಗ.ಸು. ಭಟ್ಟ ರಚನೆಯ 'ನಲಿಯಿತು ನವಿಲು' ನಾಟಕವನ್ನು ವಿನೋದ ಸಿ. ಮೈಸೂರು ನಿರ್ದೇಶನ ಮಾಡಿದ್ದಾರೆ. ಬೆಳಕು ಮನೋಜ್ ಅದಮ್ಯ ಅವರದ್ದು. ಲೋಕನಾಥ್ ಸೋಗುಂ ಅವರ ಸಂಗೀತ ಸಂಯೋಜನೆಯಿದೆ. ಈ ನಾಟಕದ ಪ್ರೋತ್ಸಾಹಧನ ನೂರು ರೂಪಾಯಿ ಇದೆ. ರಂಗಾಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ನಾಟಕ ವೀಕ್ಷಿಸಬೇಕೆಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೋಹನ್‌ಕುಮಾರ್‌ಗೌಡರಿಗೆ ಹುಟ್ಟುಹಬ್ಬದ ಶುಭಾಶಯ


ಗುರುವಾರ ಹುಟ್ಟುಹಬ್ಬ ಆಚರಿಸಿಕೊಂಡ ಕರ್ನಾಟಕ ಕಾವಲುಪಡೆ ರಾಜ್ಯಾಧ್ಯಕ್ಷ ಎಂ.ಮೋಹನ್‌ಕುಮಾರ್‌ಗೌಡ ಅವರನ್ನು ರಾಜ್ಯ ಕಾರ್ಯದರ್ಶಿ ಟಿ.ರವೀಂದ್ರ ನೇತೃತ್ವದಲ್ಲಿ ಕೇಕ್ ಕತ್ತರಿಸಿ, ಸಿಹಿ ತಿನಿಸಿ ಆತ್ಮೀಯವಾಗಿ ಅಭಿನಂದಿಸಿದರು. ಈ ವೇಳೆ ರವಿ, ಮಂಚೇಗೌಡ, ಈಶ್ವರ್ ಮತ್ತು ಸ್ನೇಹಿತರು ಉಪಸ್ಥಿತರಿದ್ದರು.

ಆನೆಕಾಲು ರೋಗ ನಿರ್ಮೂಲನೆಗೆ ಆರೋಗ್ಯ ಇಲಾಖೆ ಕ್ರಮ; ರಕ್ತ ಪರೀಕ್ಷೆ ಮೂಲಕ ಸೋಂಕು ಪತ್ತೆ ಯತ್ನ


ಮೈಸೂರು ತಾಲೂಕಿನ ಶಂಕರಲಿಂಗೇಗೌಡ ಬಡಾವಣೆಯಲ್ಲಿ ಗುರುವಾರ ನಾಚನಹಳ್ಳಿ ಪಾಳ್ಯ ಪ್ರಾಥಮಿಕ ಆರೋಗ್ಯ ಕೇಂದ್ರದ ವತಿಯಿಂದ ಆನೆಕಾಲು ರೋಗ ಪತ್ತೆಗಾಗಿ ರಕ್ತದ ಮಾದರಿ ಸಂಗ್ರಹ ಕಾರ್ಯಾಚರಣೆ ನಡೆಸಲಾಯಿತು.

ಮೈಸೂರು,ಅ.31(ಎಂಟಿವೈ)–ಆನೆಕಾಲು ರೋಗ ನಿರ್ಮೂಲನೆಗೆ ಆರೋಗ್ಯ ಇಲಾಖೆ ಕಾರ್ಯಕ್ರಮ ರೂಪಿಸಿದ್ದು, ಸೊಳ್ಳೆ ಹಾವಳಿ ಹೆಚ್ಚಾಗಿರುವ ಪ್ರದೇಶಗಳಲ್ಲಿ ಜನರ ರಕ್ತ ಪರೀಕ್ಷೆ ಮಾಡುವ ಮೂಲಕ ರೋಗ ಸೋಂಕು ಇರುವಿಕೆ ಪತ್ತೆಗೆ ಮುಂದಾಗಿದೆ.

ಮೈಸೂರಿನ ನಾಚನಹಳ್ಳಿ ಪಾಳ್ಯದ ಪ್ರಾಥಮಿಕ ಆರೋಗ್ಯ ಕೇಂದ್ರದ ವತಿಯಿಂದ ಶ್ರೀರಾಂಪುರ ಸಮೀಪದ ಶಂಕರಲಿಂಗೇಗೌಡ ಬಡಾವಣೆಯಲ್ಲಿ ಕಳೆದ ರಾತ್ರಿ ಆನೆಕಾಲು ರೋಗ ಪತ್ತೆ ಮಾಡುವ ವಿಶೇಷ ಅಭಿಯಾನ ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿ 20 ವರ್ಷ ಮೇಲ್ಪಟ್ಟ 315 ಮಂದಿಯಿಂದ ರಕ್ತದ ಮಾದರಿ ಸಂಗ್ರಹಿಸಿ, ಪ್ರಯೋಗಾಲಯದಲ್ಲಿ ಪರೀಕ್ಷೆಗೆ ಒಳಪಡಿಸಿದ್ದಾರೆ.

ಇತ್ತೀಚಿನ ದಿನಗಳಲ್ಲಿ ವಿವಿಧೆಡೆ ಹಲವು ಮಂದಿಯಲ್ಲಿ ಆನೆಕಾಲು ರೋಗದ ಲಕ್ಷಣ ಪತ್ತೆಯಾಗಿರುವ ಹಿನ್ನೆಲೆಯಲ್ಲಿ ಆರಂಭಿಕ ಹಂತದಲ್ಲಿಯೇ ಆನೆಕಾಲು ರೋಗ ಪತ್ತೆಗೆ ವಿಶೇಷ ಅಭಿಯಾನ ಆರಂಭಿಸಿದ್ದು, ರಾತ್ರಿ 8 ಗಂಟೆಯಿಂದ ಮಧ್ಯರಾತ್ರಿ 11 ಗಂಟೆವರೆಗೆ ಸೊಳ್ಳೆಕಾಟ ಹೆಚ್ಚಾಗಿರುವ ಗುರುತಿಸಲ್ಪಟ್ಟ ಪ್ರದೇಶದಲ್ಲಿ 20 ವರ್ಷ ಮೇಲ್ಪಟ್ಟವರಿಂದ ಆನೆಕಾಲು ರೋಗ ತಪಾಸಣೆಗಾಗಿ ರಕ್ತದ ಕಣ ಸಂಗ್ರಹಿಸಲಾಗಿದೆ.

ನೀರಿನಲ್ಲಿ ಬೆಳೆಯುವ 'ಕ್ಯೂಲೆಕ್ಸ್' ಜಾತಿಯ ಸೊಳ್ಳೆ ಕಡಿತದಿಂದ ಆನೆಕಾಲು ರೋಗ ಉಂಟಾಗಲಿದ್ದು, ಕಾಲುಗಳು ಊದಿಕೊಳ್ಳಲಿವೆ. ಇದಕ್ಕೆ ಪರಿಣಾಮಕಾರಿಯಾದ ಚಿಕಿತ್ಸೆ ಇಲ್ಲದ ಕಾರಣ, ಆರಂಭದಲ್ಲಿಯೇ ಪತ್ತೆ ಹಚ್ಚಿ ಚಿಕಿತ್ಸೆ ನೀಡಿ ಗುಣಪಡಿಸಬಹುದಾಗಿದೆ. ಈ ನಿಟ್ಟಿನಲ್ಲಿ ವಿಶೇಷ ಅಭಿಯಾನ ಆರಂಭಿಸಿದ್ದು, ಸೊಳ್ಳೆ ಪೀಡಿತ ಪ್ರದೇಶಗಳನ್ನೇ ಗುರಿಯಾಗಿಸಿಕೊಂಡು ರಾತ್ರಿ ವೇಳೆ ವಿಶೇಷ ಅಭಿಯಾನ ನಡೆಸಿ, ನಿರ್ದಿಷ್ಟ ಪ್ರದೇಶದಲ್ಲಿ ವಾಸಿಸುವ ಜನರಿಂದ ರಕ್ತದ ಮಾದರಿಯನ್ನು ಸಂಗ್ರಹಿಸಲಾಗುತ್ತಿದೆ.

ಸಂಗ್ರಹವಾದ ರಕ್ತದ ಮಾದರಿಯನ್ನು ಪ್ರಯೋಗಾಲಯದಲ್ಲಿ ಪರೀಕ್ಷೆಗೆ ಒಳಪಡಿಸಿದಾಗ ವಾರದ ನಂತರ ಫಲಿತಾಂಶ ಹೊರಬೀಳಲಿದೆ. ಯಾರಲ್ಲಾದರೂ ಆನೆಕಾಲು ರೋಗದ ಲಕ್ಷಣ ಕಂಡು ಬಂದರೆ, ಅಂತಹವರಿಗೆ ಸೂಕ್ತ ಚಿಕಿತ್ಸೆ ನೀಡಿ, ರೋಗ ಉಲ್ಬಣಗೊಳ್ಳದಂತೆ ಕಟ್ಟೆಚ್ಚರ ವಹಿಸಲಾಗುತ್ತದೆ.

ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಕಚೇರಿ ಹಾಗೂ ನಾಚನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರ, ಶ್ರೀರಾಂಪುರ ಪಟ್ಟಣ ಪಂಚಾಯಿತಿ ಸಂಯುಕ್ತಾಶ್ರಯದಲ್ಲಿ ಶಂಕರಲಿಂಗೇಗೌಡ ಬಡಾವಣೆಯಲ್ಲಿ ನಡೆದ ರಕ್ತ ಮಾದರಿ ಸಂಗ್ರಹ ಕಾರ್ಯಾಚರಣೆಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಸೌಮ್ಯ, ಶ್ರೀರಾಂಪುರ ಪಪಂ ಮುಖ್ಯಾಧಿಕಾರಿ ಸುರೇಶ್, ವಿಭಾಗೀಯ ಆಶ್ರಿತ ರೋಗಗಳ ನಿಯಂತ್ರಣ ಕಚೇರಿಯ ಧನಂಜಯ, ಅರುಣ್‌ಮೂರ್ತಿ, ಕರುಣ್, ವಿವಿಧ ಪ್ರಾಥಮಿಕ ಆರೋಗ್ಯ ಇಲಾಖೆ ಆರೋಗ್ಯಾಧಿಕಾರಿಗಳು, ಆರೋಗ್ಯ ಶಿಕ್ಷಣಾಧಿಕಾರಿಗಳು, ಪ್ರಯೋಗಾಲಯದ ಸಿಬ್ಬಂದಿ, ಆಶಾ ಕಾರ್ಯಕರ್ತೆಯರು ಸೇರಿದಂತೆ ಇನ್ನಿತರ ಸಿಬ್ಬಂದಿ ಉಪಸ್ಥಿತರಿದ್ದರು.

ನಾಗೇಗೌಡರಿಗೆ ಅಭಿನಂದನೆ


ನಿವೃತ್ತಿ ಹೊಂದಿದ ಕೆ.ಆರ್. ಪೊಲೀಸ್ ಠಾಣೆ ಸರ್ಕಲ್ ಇನ್ಸ್‌ಪೆಕ್ಟರ್ ನಾಗೇಗೌಡರನ್ನು ಬಡವರ ಬಂಧು ಅಭಿಮಾನಿಗಳ ಸಂಘದಿಂದ ಆತ್ಮೀಯವಾಗಿ ಅಭಿನಂದಿಸಲಾಯಿತು. ಈ ವೇಳೆ ಸಂಘದ ಅಧ್ಯಕ್ಷ ಪಡುವಾರಹಳ್ಳಿ ಪಾಪಣ್ಣ, ಸುಣ್ಣದಕೇರಿ ರಮೇಶ್ ಕೃಷ್ಣ, ಚಾಮುಂಡಿಬೆಟ್ಟದ ತಾವರೆಕಟ್ಟೆ ರಮೇಶ್‌ಬಾಬು, ಉತ್ತನಹಳ್ಳಿ ಮಹದೇವು, ಯೋಗಾನರಸಿಂಹ ಇನ್ನಿತರರು ಹಾಜರಿದ್ದರು.

ಮೈಸೂರು ವಿವಿ ಕ್ಲರ್ಕ್ ಆತ್ಮಹತ್ಯೆ

ಕೊಳೆತ ಸ್ಥಿತಿಯಲ್ಲಿ ದೇಹ ಪತ್ತೆ

ಮೈಸೂರು, ಅ.31(ಬಿಎಲ್‌ಯು)– ಮೈಸೂರು ವಿಶ್ವವಿದ್ಯಾನಿಲಯದ ಕ್ಲರ್ಕ್ ಆತ್ಮಹತ್ಯೆ ಮಾಡಿಕೊಂಡಿದ್ದು, ಕೊಳೆತ ಸ್ಥಿತಿಯಲ್ಲಿ ದೇಹ ಪತ್ತೆಯಾಗಿದೆ.

ಮೈಸೂರು ವಿವಿಯಲ್ಲಿ ಗುಮಾಸ್ತನಾಗಿ ಕೆಲಸ ಮಾಡುತ್ತಿದ್ದ ಶಿವಕುಮಾರ್ (35) ಆತ್ಮಹತ್ಯೆ ಮಾಡಿಕೊಂಡ ವ್ಯಕ್ತಿ. ಮೈಸೂರಿನ ಆದಿಚುಂಚನಗಿರಿ ರಸ್ತೆಯ ಮಹದೇಶ್ವರ ದೇವಸ್ಥಾನದ ಬಳಿ ನಿಂತಿದ್ದ ಕಾರಿನಲ್ಲಿ ದುರ್ವಾಸನೆ ಬರುತ್ತಿದ್ದ ಕಾರಣ ಸ್ಥಳೀಯರು ಪೊಲೀಸರಿಗೆ ವಿಷಯ ತಿಳಿಸಿದರು. ಸ್ಥಳಕ್ಕೆ ಬಂದ ಅಶೋಕಪುರಂ ಪೊಲೀಸರು ಕಾರಿನ ಬಾಗಿಲು ತೆರೆದು ನೋಡಿದಾಗ ಮೃತದೇಹ ಕೊಳೆತ ಸ್ಥಿತಿಯಲ್ಲಿತ್ತು. ಆತನ ಗುರುತು ಸಹ ಕೆಲವೇ ಗಂಟೆಯಲ್ಲಿ ಪತ್ತೆಯಾಯಿತು. ಮೃತ ವ್ಯಕ್ತಿ ವಿಷ ಸೇವಿಸಿದ್ದಾನೋ ಇಲ್ಲ ಅನ್ಯ ಕಾರಣವಿದೆಯೋ ಎಂಬುವುದು ಮರಣೋತ್ತರ ಪರೀಕ್ಷೆಯಿಂದ ತಿಳಿದು ಬರಬೇಕಿದೆ. ವೈಯಕ್ತಿಕ ಸಮಸ್ಯೆಯಿಂದ ಶಿವಕುಮಾರ್ ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿದೆ ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ನಿಧನ



ಎಸ್.ಹೇಮಲತಾ

ಮೈಸೂರು, ಅ.31– ಮೈಸೂರು ವಿವಿ ಉದ್ಯೋಗಿ ಎಸ್.ಹೇಮಲತಾ (40) ಹೃದಯಾಘಾತದಿಂದ ಖಾಸಗಿ ಆಸ್ಪತ್ರೆಯಲ್ಲಿ ಗುರುವಾರ ಸಂಜೆ ನಿಧನರಾದರು. ಮೃತರು ಪತಿ ಲಕ್ಷ್ಮಣ್, ಪುತ್ರಿ ಮೇಘನಾ, ಪುತ್ರ ಮನೋಜ್ ಯಾದವ್ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಚಾಮುಂಡಿಬೆಟ್ಟದ ತಪ್ಪಲಿನ ಸ್ಮಶಾನದಲ್ಲಿ ಶುಕ್ರವಾರ ಮಧ್ಯಾಹ್ನ 12ಕ್ಕೆ ಮೃತರ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಮೃತರ ಕುಟುಂಬದ ಮೂಲಗಳು ತಿಳಿಸಿವೆ.

ನಾಗರಾಜು



ಮೈಸೂರು,ಅ.31– ವಿನಾಯಕನಗರ (ಪಡುವಾರಹಳ್ಳಿ) 1ನೇ ಕ್ರಾಸ್ ನಿವಾಸಿ ನಾಗರಾಜು (58) ಗುರುವಾರ ನಿಧನರಾದರು. ಮೃತರು ಪುತ್ರ ದರ್ಶನ್, ಪುತ್ರಿ ಸ್ಫೂರ್ತಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ನ.1ರ ಶುಕ್ರವಾರ ಮಧ್ಯಾಹ್ನ 3ಕ್ಕೆ ಗೋಕುಲಂ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಮೃತರ ಕುಟುಂಬದ ಮೂಲಗಳು ತಿಳಿಸಿವೆ.

ದೇಶ – ವಿದೇಶ

ಅಮೆರಿಕದಲ್ಲಿ 4 ಪೆಪ್ಸಿಕೋ ಫ್ಯಾಕ್ಟರಿ ಬಂದ್



ನ್ಯೂಯಾರ್ಕ್: ವಿಶ್ವದ ಪ್ರಮುಖ ಪಾನೀಯ ಕಂಪನಿಗಳಲ್ಲಿ ಒಂದಾದ ಪೆಪ್ಸಿಕೋ ಅಮೆರಿಕದಲ್ಲಿರುವ ತನ್ನ ಕೆಲ ಬಾಟ್ಲಿಂಗ್ ಘಟಕಗಳನ್ನು ಮುಚ್ಚಲು ನಿರ್ಧರಿಸಿದೆ. ವೆಚ್ಚ ಕಡಿತ ಹಾಗೂ ಆಡಳಿತಾತ್ಮಕ ದೃಷ್ಟಿಯಿಂದ ನಾಲ್ಕು ಫ್ಯಾಕ್ಟರಿಗಳನ್ನು ಬಂದ್ ಮಾಡುತ್ತಿದೆ. ಸುಮಾರು 400 ಮಂದಿ ಉದ್ಯೋಗಿಗಳು ಕೆಲಸ ಕಳೆದುಕೊಳ್ಳಲಿದ್ದಾರೆ. ಷೇರು ವಿನಿಮಯ ಕೇಂದ್ರಕ್ಕೆ ಪೆಪ್ಸಿಕೋ ನೀಡಿದ ಮಾಹಿತಿ ಪ್ರಕಾರ ಅಮೆರಿಕದ ಸಿನ್ಸಿನಾಟಿ, ಚಿಕಾಗೋ, ಪೆನ್‌ಸಿಲ್ವೇನಿಯಾ ಮತ್ತು ಅಟ್ಲಾಂಟಾದ ಬಾಟ್ಲಿಂಗ್ ಯೂನಿಟ್‌ಗಳು ಮುಚ್ಚಲ್ಪಡುತ್ತಿವೆ. ಮುಚ್ಚಲಾಗುತ್ತಿರುವ ನಾಲ್ಕು ಘಟಕಗಳ ಪೈಕಿ ಚಿಕಾಗೋ ಯೂನಿಟ್ ಪೂರ್ಣವಾಗಿ ಬಂದ್ ಆಗುತ್ತದೆ. ಇನ್ನುಳಿದ 3 ಘಟಕಗಳಲ್ಲಿ ಬಾಟ್ಲಿಂಗ್ ಯೂನಿಟ್ ಮಾತ್ರವೇ ಮುಚ್ಚಲಾಗುತ್ತದೆ. ವೇರ್‌ಹೌಸ್, ಸೇಲ್ಸ್, ಡೆಲಿವರಿ ಸೇವೆಗಳು ಈ ಮೂರು ಕಡೆ ಮುಂದುವರಿಯಲಿವೆ ಎನ್ನಲಾಗಿದೆ.

ಅಮೆರಿಕದ ನ್ಯೂಯಾರ್ಕ್ ಮೂಲದ ಪೆಪ್ಸಿಕೋ ಸಂಸ್ಥೆ ಅಮೆರಿಕದಲ್ಲಿ 75ಕ್ಕೂ ಹೆಚ್ಚು ಬಾಟ್ಲಿಂಗ್ ಘಟಕಗಳನ್ನು ಹೊಂದಿದೆ. ಹೀಗಾಗಿ, ನಾಲ್ಕು ಘಟಕಗಳನ್ನು ಮುಚ್ಚುತ್ತಿರುವುದು ಕಂಪನಿಗೆ ಆಘಾತಕಾರಿ ಸಂಗತಿಯಲ್ಲ. ಅದರ ಬಿಸಿನೆಸ್ ಕಡಿಮೆ ಆಗುತ್ತಿರುವ ಕಾರಣ, ಅದನ್ನು ಸರಿ ಹೊಂದಿಸಲು ಹಾಗೂ ಅನಗತ್ಯ ವೆಚ್ಚ ಕಡಿಮೆ ಮಾಡಲು ಬಾಟ್ಲಿಂಗ್ ಪ್ಲಾಂಟ್ಸ್ ಮುಚ್ಚುತ್ತಿದೆ.

ಕಚ್‌ನಲ್ಲಿ ಯೋಧರ ಜೊತೆ ಮೋದಿ ದೀಪಾವಳಿ ಆಚರಣೆ



ಕಚ್: ಪ್ರತಿವರ್ಷದಂತೆ ಈ ವರ್ಷವೂ ದೀಪಾವಳಿ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ, ಸೇನಾ ಸಿಬ್ಬಂದಿ ಜೊತೆ ಗುಜರಾತ್‌ನ ಕಚ್‌ನಲ್ಲಿ ಇಂದು ಸಿಹಿ ವಿನಿಮಯ ಮಾಡಿಕೊಂಡು ಹಬ್ಬ ಆಚರಿಸಿದರು. ಸೇನಾ ಸಮವಸ್ತ್ರ ಧರಿಸಿ ಗುಜರಾತ್‌ನ ಕಚ್ ಪ್ರಾಂತ್ಯದಲ್ಲಿ ಬೀಡುಬಿಟ್ಟಿರುವ ಭದ್ರತಾ ಸಿಬ್ಬಂದಿಯನ್ನು ಭೇಟಿ ಮಾಡಿ, ಅವರಿಗೆ ಹಬ್ಬದ ಶುಭಾಶಯಗಳನ್ನು ಹೇಳುವ ಮೂಲಕ ಇಂದು ಸೈನಿಕರೊಂದಿಗೆ ದೀಪಾವಳಿ ಆಚರಿಸುವ ಸಂಪ್ರದಾಯವನ್ನು ಮುಂದುವರೆಸಿದರು. 2014ರಲ್ಲಿ ಪ್ರಧಾನಮಂತ್ರಿಗಳಾಗಿ ಅಧಿಕಾರ ವಹಿಸಿಕೊಂಡ ನಂತರ, ಪ್ರಧಾನಿಯವರು ಪ್ರತಿವರ್ಷ ವಿವಿಧ ಸ್ಥಳಗಳಲ್ಲಿ ಸೈನಿಕರೊಂದಿಗೆ ದೀಪಾವಳಿಯನ್ನು ಆಚರಿಸುತ್ತಾರೆ. 2014ರಲ್ಲಿ ಸಿಯಾಚಿನ್‌ನಿಂದ ಪ್ರಾರಂಭಿಸಿ, ಕಳೆದ ವರ್ಷ ಹಿಮಾಚಲದ ಲೆಪ್ಚಾದಲ್ಲಿ ಸೈನಿಕರೊಂದಿಗೆ ದೀಪಾವಳಿ ಸಮಯ ಕಳೆದಿದ್ದರು. ಇದೇ ವೇಳೆ ದೇಶವಾಸಿಗಳಿಗೆ ಶುಭ ಕೋರಿದ ಅವರು, ದೀಪಾವಳಿಯಂದು ದೇಶವಾಸಿಗಳಿಗೆ ಶುಭಾಶಯಗಳು. ಈ ದೈವಿಕ ಬೆಳಕಿನ ಹಬ್ಬದಲ್ಲಿ, ನಾನು ಎಲ್ಲರಿಗೂ ಆರೋಗ್ಯಕರ, ಸಂತೋಷ ಮತ್ತು ಸಮೃದ್ಧ ಜೀವನವನ್ನು ಬಯಸುತ್ತೇನೆ ಎಂದು ಎಕ್ಸ್ ಖಾತೆಯಲ್ಲಿ ಬರೆದಿದ್ದಾರೆ.

ಕೆನಡಾ ಸಂಸತ್ತಿನಲ್ಲಿ ದೀಪಾವಳಿ ಆಚರಣೆ ದಿಢೀರ್ ರದ್ದು!




ಕೆನಡಾ: ಕೆನಡಾ ಸಂಸತ್ತಿನಲ್ಲಿ ಭಾರತೀಯ–ಕೆನಡಿಯನ್ ಸಮುದಾಯದ ವಾರ್ಷಿಕ ದೀಪಾವಳಿ ಆಚರಣೆಯನ್ನು ಹಠಾತ್ ರದ್ದುಗೊಳಿಸಲಾಗಿದೆ. ಕೆನಡಾ ಮತ್ತು ಭಾರತದ ನಡುವೆ ಹೆಚ್ಚುತ್ತಿರುವ ರಾಜತಾಂತ್ರಿಕ ಉದ್ವಿಗ್ನತೆಯ ಮಧ್ಯೆ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಹೇಳಲಾಗುತ್ತಿದೆ. ಕಳೆದ ವರ್ಷ ಖಲಿಸ್ತಾನಿ ಭಯೋತ್ಪಾದಕ ಹರ್ದೀಪ್ ಸಿಂಗ್ ನಿಜ್ಜರ್ ಹತ್ಯೆಯ ನಂತರ ಭಾರತ ಮತ್ತು ಕೆನಡಾ ನಡುವಿನ ಸಂಬಂಧಗಳು ಹಳಸುತ್ತಿವೆ. ಭಾರತದೊಂದಿಗೆ ನಡೆಯುತ್ತಿರುವ ರಾಜತಾಂತ್ರಿಕ ಬಿಕ್ಕಟ್ಟಿನ ನಡುವೆ ಕೆನಡಾದ ವಿರೋಧ ಪಕ್ಷದ ನಾಯಕ ಪಿಯರೆ ಪೊಲಿಯೆವ್ರೆ ಅವರ ಕಚೇರಿಯು ಭಾರತೀಯ–ಕೆನಡಿಯನ್ ಸಮುದಾಯಕ್ಕಾಗಿ ಸಂಸತ್ತಿನ ಹಿಲ್‌ನಲ್ಲಿ ವಾರ್ಷಿಕ ದೀಪಾವಳಿ ಕಾರ್ಯಕ್ರಮವನ್ನು ರದ್ದುಗೊಳಿಸಿದೆ. ಓವರ್‌ಸೀಸ್ ಫ್ರೆಂಡ್ಸ್ ಆಫ್ ಇಂಡಿಯಾ ಕೆನಡಾ ಸಂಘಟಕರ ಪ್ರಕಾರ, ಈ ವಿಷಯವನ್ನು ಹಠಾತ್ ಆಗಿ ತಿಳಿಸಲಾಗಿದ್ದು ಇದಕ್ಕೆ ಯಾವುದೇ ವಿವರಣೆಯನ್ನು ನೀಡಿಲ್ಲ. ಕಾರ್ಯಕ್ರಮವನ್ನು ದಿಢೀರ್ ರದ್ದು ಪಡಿಸುವ ಮೂಲಕ ಇದು ಹಿಂದೂಗಳ ಮೇಲಿನ 'ಜನಾಂಗೀಯ ಪಕ್ಷಪಾತ' ಎಂದು ಆರೋಪಿಸಿದರು.

ನಾಪತ್ತೆಯಾದ ಬ್ಯೂಟಿಶಿಯನ್ ಮೃತದೇಹ 6 ತುಂಡುಗಳಾಗಿ ಪತ್ತೆ

ಜೋಧಪುರ: ಕಳೆದೆರಡು ದಿನದಿಂದ ನಾಪತ್ತೆಯಾಗಿದ್ದ ಬ್ಯೂಟಿಶಿಯನ್ ಮೃತದೇಹ ಇದೀಗ ಪತ್ತೆಯಾಗಿದೆ. ಆದರೆ ಮಹಿಳೆ ಮೃತದೇಹವನ್ನು 6 ತುಂಡುಗಳಾಗಿ ಕತ್ತರಿಸಿರುವ ಘಟನೆ ರಾಜಸ್ಥಾನದ ಜೋಧಪುರದಲ್ಲಿ ನಡೆದಿದೆ. ಜೋಧಪುರ ನಿವಾಸಿ ಅನಿತಾ ದೇವಿ(50) ಪಟ್ಟಣದಲ್ಲಿ ಬ್ಯೂಟಿ ಪಾರ್ಲರ್ ನಡೆಸುತ್ತಿದ್ದರು. ಮದುವೆ, ಇತರ ಕಾರ್ಯಕ್ರಮಗಳಿಗೂ ಬ್ಯೂಟಿಶಿಯನ್ ಆಗಿ ಕೆಲಸ ಮಾಡುತ್ತಿದ್ದರು. ಅ.28 ರಂದು ಸಂಜೆ ಅನಿತಾ ದೇವಿ ಬ್ಯೂಟಿ ಪಾರ್ಲರ್ ಶಾಪ್ ಮುಚ್ಚಿದ್ದಾರೆ. ಬಳಿಕ ಮನೆಗೆ ಹೊರಟಿದ್ದಾರೆ. ಆದರೆ ಮನೆಗೆ ಮಾತ್ರ ತಲುಪಿಲ್ಲ.

ರಾತ್ರಿಯಾದರೂ ಪತ್ನಿ ಅನಿತಾ ದೇವಿ ಮನಗೆ ಆಗಮಿಸಿದ ಕಾರಣ ಅನುಮಾನಗೊಂಡ ಪತಿ ಮನ್‌ಮೋಹನ್ ಚೌಧರಿ ದೂರು ದಾಖಲಿಸಿದ್ದಾರೆ. ಅನಿತಾ ದೇವಿ ಬ್ಯೂಟಿ ಪಾರ್ಲರ್ ಶಾಪ್ ಇದ್ದ ಕಟ್ಟಡದಲ್ಲೇ ಅಂಗಡಿ ಇಟ್ಟಿದ್ದ ಮೊಹಮ್ಮದ್ ಗುಲಾಮುದ್ದೀನ್ ಅಲಿಯಾಸ್ ಗುಲ್ ಮೊಹಮ್ಮದ್ ಈ ಕೃತ್ಯ ಎಸಗಿದ್ದಾನೆ. ಮೊಹಮ್ಮದ್ ಕೃತ್ಯ ಕುರಿತು ಹಲವು ಸಾಕ್ಷ್ಯಗಳು ಲಭ್ಯವಾಗಿದೆ ಎಂದು ಪೊಲೀಸರು ಹೇಳಿದ್ದಾರೆ. ಮೊಹಮ್ಮದ್‌ನ ಅರೆಸ್ಟ್ ಮಾಡಿದ ಪೊಲೀಸರು ತನಿಖೆ ಆರಂಭಿಸಿದ್ದಾರೆ. ಈ ವೇಳೆ ಇತರ ಕೆಲ ಮಹಿಳೆಯರಿಗೂ ಮೋಸ ಮಾಡಿರುವ ಘಟನೆ ಬೆಳಕಿಗೆ ಬಂದಿದೆ.

ಟಿಟಿಡಿಗೆ ಹೊಸ ಆಡಳಿತ ಮಂಡಳಿ ನೇಮಕ; ಕರ್ನಾಟಕದ ಮೂವರಿಗೆ ಸ್ಥಾನ



ಅಮರಾವತಿ: ಮೊದಲ ಬಾರಿಗೆ ತಿರುಮಲ ತಿರುಪತಿ ದೇವಸ್ಥಾನಂ ಮಂಡಳಿಗೆ ಹೊಸದಾಗಿ ಅಧ್ಯಕ್ಷರು ಮತ್ತು ಸದಸ್ಯರನ್ನು ನೇಮಿಸಲಾಗಿದೆ. ಅ.30ಕ್ಕೆ ಜಾರಿಗೆ ಬರುವಂತೆ, 24 ಸದಸ್ಯರ ಮಂಡಳಿ ನೇಮಿಸಿ, ಚಂದ್ರಬಾಬು ನಾಯ್ಡು ಸರ್ಕಾರ ಆದೇಶ ಹೊರಡಿಸಿದೆ. ಹೊಸದಾಗಿ ನೇಮಕವಾಗಿರುವ ಸದಸ್ಯರ ಪೈಕಿ ಕರ್ನಾಟಕದ ಮೂವರು, ತೆಲಂಗಾಣದ ಐವರು, ತಮಿಳುನಾಡಿನ ಇಬ್ಬರು, ಗುಜರಾತ್ ಮತ್ತು ಮಹಾರಾಷ್ಟ್ರದ ತಲಾ ಒಬ್ಬರು ಸ್ಥಾನವನ್ನು ಪಡೆದಿದ್ದಾರೆ. ಉಳಿದವರು ಆಂಧ್ರಪ್ರದೇಶದವರಾಗಿದ್ದಾರೆ.

ತಿರುಪತಿ ಲಡ್ಡು ಅಪವಿತ್ರಗೊಂಡ ವಿದ್ಯಮಾನದ ನಂತರ, ಹಿಂದಿನ ವೈ.ಎಸ್.ಜಗನ್ಮೋಹನ್ ರೆಡ್ಡಿ ಸರ್ಕಾರದ ವೇಳೆಯ ಟಿಟಿಡಿ ಮಂಡಳಿಯನ್ನು ಬರ್ಖಾಸ್ತುಗೊಳಿಸಲಾಗಿತ್ತು. ಈ ಘಟನೆ ದೇಶಾದ್ಯಂತ ಭಾರಿ ಸಂಚಲನವನ್ನು ಮೂಡಿಸಿತ್ತು. ಹಾಗಾಗಿ, ಖುದ್ದು ಸಿಎಂ ಚಂದ್ರಬಾಬು ನಾಯ್ಡುವೇ ಮಂಡಳಿ ಸದಸ್ಯರ ಹೆಸರನ್ನು ಅಂತಿಮಗೊಳಿಸಿದ್ದಾರೆ. ಉದ್ಯಮಿ ಮತ್ತು ಟಿವಿ5 ಸುದ್ದಿ ವಾಹಿನಿಯ ಮಾಲೀಕ ಬೊಲ್ಲಿನೇನಿ ರಾಜಗೋಪಾಲ ನಾಯ್ಡು (ಬಿಆರ್ ನಾಯ್ಡು) ಅವರನ್ನು ಟಿಟಿಡಿ ಮಂಡಳಿಯ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಭಾರತ್ ಬಯೋಟೆಕ್ ಸಂಸ್ಥೆಯ ಎಂಡಿ ಸುಚಿತ್ರ ಎಲಾ ಕೂಡಾ, ಸದಸ್ಯರಲ್ಲಿ ಒಬ್ಬರಾಗಿದ್ದಾರೆ.

 ಮೈಸೂರು ಮಿತ್ರ

ಮಡಿಕೇರಿ ಕೋಟೆ ಪುನಶ್ಚೇತನ ಕಾಮಗಾರಿ ಪರಿಶೀಲನೆ

ಅಧಿಕಾರಿಗಳಿಂದ ಮಾಹಿತಿ ಪಡೆದ ಶಾಸಕ ಎ.ಎಸ್ ಪೊನ್ನಣ್ಣ

ಮಡಿಕೇರಿ, ಅ.31–ರಾಜರ ಕಾಲದ ಗತ ಇತಿಹಾಸ ಸಾರುವ ನಗರದ ಕೋಟೆ ಕಟ್ಟಡವನ್ನು ಪುನಶ್ಚೇತನಗೊಳಿಸಲಾಗುತ್ತಿದ್ದು, ವಿರಾಜಪೇಟೆ ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಗುರುವಾರ ಕೋಟೆಗೆ ಭೇಟಿ ನೀಡಿ, ಕಾಮಗಾರಿ ವೀಕ್ಷಿಸಿದರು.

ಶಿಥಿಲಾವಸ್ಥೆಗೆ ಹೋರಳಿದ್ದ ಕೋಟೆ ಕಟ್ಟಡವನ್ನು ಪುರಾತತ್ವ ಇಲಾಖೆ ನ್ಯಾಯಾಲಯದ ನಿರ್ದೇಶನದಂತೆ ಪುನಶ್ಚೇತನಗೊಳಿಸುತ್ತಿದ್ದು, ಸಂಪೂರ್ಣ ಕಟ್ಟಡವನ್ನು ಮೊದಲಿದ್ದ ಸ್ಥಿತಿಯಲ್ಲೇ ದುರಸ್ತಿ ಮಾಡುತ್ತಿದೆ. ಕೋಟೆ ಕಟ್ಟಡದ ಗೋಡೆಗಳು, ಅಮೂಲ್ಯ ಕಲಾಕೃತಿಗಳು, ಬಾಗಿಲುಗಳು, ಚಾವಣಿ, ನೆಲ ಹಾಸುಗಳನ್ನು ಸಂಪೂರ್ಣವಾಗಿ ಅರಸರ ಕಾಲದ ರೀತಿಯಲ್ಲೇ ಮರು ವಿನ್ಯಾಸ ಮಾಡಲಾಗುತ್ತಿದೆ.

ಕೋಟೆ ಕಟ್ಟಡ ಕಾಮಗಾರಿ ಸ್ಥಳದಲ್ಲಿ ಹಾಜರಿದ್ದ ಪುರಾತತ್ವ ಇಲಾಖೆ ಇಂಜಿನಿಯರ್‌ಗಳಿಂದ ಪೊನ್ನಣ್ಣ ಮಾಹಿತಿ ಪಡೆದರು. ಕಾಮಗಾರಿಗೆ ಸರ್ಕಾರ ಬಿಡುಗಡೆ ಮಾಡಿರುವ ಅನುದಾನ, ಕಾಮಗಾರಿ ಮುಕ್ತಾಯದ ಅವಧಿ, ದುರಸ್ತಿಗೆ ಬಳಸುತ್ತಿರುವ ವಿಧಾನ ಮತ್ತಿತರ ವಿಚಾರಗಳ ಕುರಿತು ಪೊನ್ನಣ್ಣ ಅಧಿಕಾರಿಗಳಿಂದ ಮಾಹಿತಿ ಪಡೆದರು.



ಮಡಿಕೇರಿ ಕೋಟೆ ಕಟ್ಟಡ ಪುನಶ್ಚೇತನ ಕಾಮಗಾರಿಯನ್ನು ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ವೀಕ್ಷಿಸಿ, ಅಧಿಕಾರಿಗಳಿಂದ ಮಾಹಿತಿ ಪಡೆದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಶಾಸಕ ಪೊನ್ನಣ್ಣ, ರಾಜರ ಕಾಲದ ಗತ ಇತಿಹಾಸವನ್ನು ಜನರಿಗೆ ತಿಳಿಸುವ ಉದ್ದೇಶದಿಂದ ರಾಜ್ಯ ಸರ್ಕಾರ ಕೋಟೆ ಕಟ್ಟಡವನ್ನು ದುರಸ್ತಿ ಮಾಡುತ್ತಿದೆ. ಮುಂದಿನ ಫೆಬ್ರವರಿ ಅಥವಾ ಮಾರ್ಚ್‌ನಲ್ಲಿ ದುರಸ್ತಿ ಕಾಮಗಾರಿ ಮುಕ್ತಾಯವಾಗುವ ನಿರೀಕ್ಷೆ ಇದೆ ಎಂದು ಹೇಳಿದರು.

ಹಿಂದೆ ಕೋಟೆ ಕಟ್ಟಡದಲ್ಲಿ ಜಿಲ್ಲಾಡಳಿತದ ಕಚೇರಿಗಳಿದ್ದವು. ಇದೀಗ ಕೋಟೆ ಮತ್ತೆ ತನ್ನ ಗತ ವೈಭವ ಪಡೆದುಕೊಳ್ಳುತ್ತಿದೆ. ಕೋಟೆ ಆವರಣದಲ್ಲಿರುವ ಹಳೇ ನ್ಯಾಯಾಲಯ ಸಂಕೀರ್ಣದ ಕುರಿತು ಪುರಾತತ್ವ ಇಲಾಖೆ ಮತ್ತು ಲೋಕೋಪಯೋಗಿ ಇಲಾಖೆಗಳೇ ನಿರ್ಧಾರ ತೆಗೆದುಕೊಳ್ಳಲಿವೆ ಎಂದರು.

ದೀಪಾವಳಿ ಸಂಭ್ರಮಕ್ಕೆ ತಣ್ಣೀರೆರಚಿದ ಪಟಾಕಿ ದರ

ಮಡಿಕೇರಿ, ಅ.31–ದೀಪಾವಳಿ ಹಬ್ಬದ ಸಂಭ್ರಮಕ್ಕೆ ಪಟಾಕಿ ದರ ತಣ್ಣೀರು ಎರಚಿದ್ದು, ಹಸಿರು ಪಟಾಕಿ ಸರ್ಕಾರದ ನಿಯಮ, ಪಟಾಕಿ ಸಿಡಿಸಲು ಸಮಯಾವಕಾಶ ನಿಗದಿ ಹಾಗೂ ತಯಾರಿಕಾ ಕಂಪನಿಗಳ ಮೇಲೂ ಪರಿಣಾಮ ಬೀರಿದೆ.

ನಗರದ ಗಾಂಧಿ ಮೈದಾನದಲ್ಲಿ 10ಕ್ಕೂ ಹೆಚ್ಚು ಪಟಾಕಿ ಮಳಿಗೆಗಳು ತೆರೆದಿವೆಯಾದರೂ ಗ್ರಾಹಕರ ತೀವ್ರ ಕೊರತೆ ಕಂಡು ಬಂದಿದೆ. ಪಟಾಕಿ ಮಳಿಗೆಗಳು ಗ್ರಾಹಕರಿಲ್ಲದೇ ಬಿಕೋ ಎನ್ನುತ್ತಿದ್ದು, ವ್ಯಾಪಾರಿಗಳು ಬಂಡವಾಳ ಹೂಡಿ ಗ್ರಾಹಕರ ಆಗಮನದ ಕಡೆ ತಮ್ಮ ಚಿತ್ತ ನೆಟ್ಟಿದ್ದಾರೆ.

ಈ ಬಾರಿ ಹೆಚ್ಚು ಮಳಿಗೆಗಳನ್ನು ತೆರೆಯಲಾಗಿದ್ದು, ಪಟಾಕಿ ದರ ಏರಿಕೆಯಾಗಿ ಗ್ರಾಹಕರ ಕೈ ಸುಡುತ್ತಿದೆ. ಇದೀಗ ತಯಾರಾಗುತ್ತಿರುವ ಪಟಾಕಿ ಪ್ಯಾಕೆಟ್‌ಗಳ ಮೇಲೆ 'ಕ್ಯೂ ಆರ್ ಕೋಡ್' ಕೂಡ ಅಳವಡಿಸಲಾಗುತ್ತಿದ್ದು, ಪಟಾಕಿ ತಯಾರಿಕಾ ಸಂಸ್ಥೆ, ಹೊರಸೂಸುವ ಶಬ್ದ, ಮಾಲಿನ್ಯ ಪ್ರಮಾಣ, ಹಸಿರು ಪಟಾಕಿ ಪ್ರಮಾಣೀಕರಣ ಸಹಿತ ಎಲ್ಲಾ ಮಾಹಿತಿಗಳು ಗ್ರಾಹಕರಿಗೆ ಲಭ್ಯವಿದ್ದು, ಇದು ಸರ್ಕಾರದ ನೀತಿಗೆ ಅನುಗುಣವಾಗಿದೆ. ಮಾಲಿನ್ಯ ನಿಯಂತ್ರಣ ಮಂಡಳಿ, ಪೊಲೀಸ್ ಇಲಾಖೆ, ನಗರಸಭೆ, ಅಗ್ನಿಶಾಮಕ ಇಲಾಖೆ ಸಹಿತ ವಿವಿಧ ಇಲಾಖೆಗಳಿಂದ ನಿರಾಪೇಕ್ಷಣಾ ಪತ್ರ ಪಡೆದು ವ್ಯಾಪಾರ ನಡೆಸಲಾಗುತ್ತಿದೆ.



ಮಡಿಕೇರಿ ಗಾಂಧಿ ಮೈದಾನದ ಪಟಾಕಿ ಮಳಿಗೆಗಳು ಗ್ರಾಹಕರಿಲ್ಲದೆ ಬಿಕೋ ಎನ್ನುತ್ತಿರುವುದು.

ಇದೀಗ ಪಟಾಕಿ ಕಡೆ ಗ್ರಾಹಕರ ಗಮನವೂ ಕಡಿಮೆಯಾಗುತ್ತಿದ್ದು, ಹಬ್ಬದ ಸಂದರ್ಭ ಪಟಾಕಿ ಸಿಡಿಸುವ ಕ್ರೇಝ್ ಉಳಿದಿಲ್ಲ ಎಂದು ಕಳೆದ 15 ವರ್ಷಗಳಿಂದ ಪಟಾಕಿ ವ್ಯಾಪಾರ ನಡೆಸುತ್ತಿರುವ ಹರೀಶ್ ಬೇಸರ ವ್ಯಕ್ತಪಡಿಸಿದರು.

ಬಿಡಿ ಪಟಾಕಿ, ಬಂಡಲ್ ಸಹಿತ ಗಿಫ್ಟ್ ಪ್ಯಾಕ್‌ಗಳು ಪಟಾಕಿ ಮಳಿಗೆಗಳಲ್ಲಿ ರಾರಾಜಿಸುತ್ತಿವೆಯಾದರೂ, ಬೆಲೆ ಏರಿಕೆ ಗ್ರಾಹಕರನ್ನು ಹೈರಾಣಾಗಿಸಿದೆ. ಇನ್ನು ಕೊಡಗು ಜಿಲ್ಲೆಯಲ್ಲಿ ದೀಪಾವಳಿಗಿಂತ ಹುತ್ತರಿ ಹಬ್ಬವನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸುತ್ತಾರೆ. ಹೀಗಾಗಿ ದೀಪಾವಳಿ ಹಬ್ಬಕ್ಕೆ ಪಟಾಕಿ ಖರೀದಿ ಕಡಿಮೆ ಪ್ರಮಾಣದಲ್ಲಿದೆ ಎಂದು ಎಂದು ಹರೀಶ್ ಮಾಹಿತಿ ನೀಡಿದರು.

ಜನವಾದಿ ಮಹಿಳಾ ಸಂಘಟನೆಯಿಂದ ಪ್ರತಿಭಟನೆ



ಬಿಪಿಎಲ್ ಕಾರ್ಡ್ ರದ್ದುಗೊಳಿಸಿರುವ ಆದೇಶವನ್ನು ಕೂಡಲೇ ಹಿಂಪಡೆಯಬೇಕು ಎಂದು ಆಗ್ರಹಿಸಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ವತಿಯಿಂದ ವಿರಾಜಪೇಟೆ ತಾಲೂಕು ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ವಿರಾಜಪೇಟೆ: ರಾಜ್ಯ ಸರ್ಕಾರ ಯಾವುದೇ ಪೂರ್ವ ಸೂಚನೆ ನೀಡದೆ, ದುಡಿದು ತಿನ್ನುವ ಕೂಲಿ ಕಾರ್ಮಿಕರ ಸಾವಿರಾರು ಬಿಪಿಎಲ್ ಪಡಿತರ ಚೀಟಿಗಳನ್ನು ರದ್ದುಗೊಳಿಸಿರುವ ಆದೇಶವನ್ನು ಕೂಡಲೇ ಹಿಂಪಡೆಯಬೇಕು ಎಂದು ಆಗ್ರಹಿಸಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ವತಿಯಿಂದ ಪಟ್ಟಣದ ತಾಲೂಕು ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ಜನವಾದಿ ಸಂಘಟನೆ ಜಿಲ್ಲಾ ಸಂಚಾಲಕಿ ಪದ್ಮಿನಿ ಮಾತನಾಡಿ, ಬಡ ಕಾರ್ಮಿಕರು, ಒಬ್ಬಂಟಿ ಮಹಿಳೆಯರು, ಹಿರಿಯ ನಾಗರಿಕರು ಪಡಿತರ ಚೀಟಿ ಇಲ್ಲದೆ ಸಮಾಜಿಕ ಸುರಕ್ಷ ಸೌಲಭ್ಯಗಳಿಂದ ವಂಚಿತರಾಗುತ್ತಾರೆ. ಆದ್ದರಿಂದ ಹೊಸ ಕಾರ್ಡ್‌ಗಳ ನೋಂದಣಿಗೆ ಅರ್ಜಿ ಸಲ್ಲಿಸಲು ಆದೇಶ ನೀಡಬೇಕು. ಜನರಿಗೆ ತಿಳುವಳಿಕೆ ನೀಡಬೇಕು ಮತ್ತು ಬಡ ಕಾರ್ಮಿಕರು ವಂಚಿತರಾಗದಂತೆ ಸರ್ಕಾರ ಜನಪರ ಯೋಜನೆ ನೀಡಲು ಮುಂದಾಗಬೇಕು ಎಂದು ಆಗ್ರಹಿಸಿದರು.

ಸಿಐಟಿಯು ಸಂಘಟನೆ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎ.ಸಿ.ಸಾಬು ಮಾತನಾಡಿ, ರಾಜ್ಯದಲ್ಲಿ ಬಿಪಿಎಲ್ ಪಡಿತರ ಚೀಟಿ ಕೇವಲ ಅಕ್ಕಿ ಪಡೆಯಲು ಮಾತ್ರವಲ್ಲದೆ, ಮಕ್ಕಳ ಶಿಕ್ಷಣ, ಆರೋಗ್ಯ ಸೌಲಭ್ಯ ಸೇರಿದಂತೆ ಇತರೆ ಸಾಮಾಜಿಕ ಸುರಕ್ಷೆಗಳಿಗೂ ಅಗತ್ಯ ದಾಖಲೆಯಾಗಿದೆ. ಈಗ ಕೊಡಗು ಜಿಲ್ಲೆಯಲ್ಲಿ ಸಾವಿರಕ್ಕೂ ಹೆಚ್ಚು ಪಡಿತರ ಚೀಟಿ ರದ್ದಾಗಿರುವುದರಿಂದ ಬಡ ಕಾರ್ಮಿಕರು ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಇದರಿಂದ ಬಡವರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಸರ್ಕಾರ ರದ್ದುಗೊಳಿಸಿರುವ ಬಿಪಿಎಲ್ ಮತ್ತು ಅಂತ್ಯೋದಯ ಕಾರ್ಡ್‌ಗಳನ್ನು ಕೂಡಲೇ ನೀಡಬೇಕು ಎಂದು ಒತ್ತಾಯಿಸಿದ್ದಾರೆ. ನಂತರ ತಹಸೀಲ್ದಾರ್ ರಾಮಚಂದ್ರ ಅವರಿಗೆ ಮನವಿ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ಸಂಘಟನೆ ಸದಸ್ಯರಾದ ಪ್ರೇಮಾ, ಸುನೀತಾ, ಪಾರ್ವತಿ, ರೂಪಾ, ಅನುಪಮಾ, ಮಂಗಳಾ, ಭಾಗ್ಯ ಮತ್ತಿತರರು ಭಾಗವಹಿಸಿದ್ದರು.

ಇಂದು ಜಿಲ್ಲಾಧಿಕಾರಿ ಕಚೇರಿ ಎದುರು ಸಿಎನ್‌ಸಿ ಧರಣಿ

ಮಡಿಕೇರಿ: ಭೂ ರಾಜಕೀಯ ಸ್ವಾಯತ್ತತೆಗಾಗಿ ಕೊಡವ ಕ್ವೆಸ್ಟ್‌ನ ಕಾನೂನು ಬದ್ಧ ಆಕಾಂಕ್ಷೆಗಳನ್ನು ಪರಿಹರಿಸಲು 2ನೇ ರಾಜ್ಯಗಳ ಮರು ಸಂಘಟನೆ ಆಯೋಗ ರಚಿಸಬೇಕೆಂದು ಆಗ್ರಹಿಸಿ ಕೊಡವ ನ್ಯಾಷನಲ್ ಕೌನ್ಸಿಲ್ ವತಿಯಿಂದ ನ.1ರಂದು ನಗರದ ಡಿಸಿ ಕಚೇರಿ ಎದುರು ಶಾಂತಿಯುತ ಧರಣಿ ಸತ್ಯಾಗ್ರಹ ನಡೆಸಲಾಗುವುದು ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ತಿಳಿಸಿದ್ದಾರೆ.



ಎನ್.ಯು.ನಾಚಪ್ಪ

ಶುಕ್ರವಾರ ಬೆಳಗ್ಗೆ 10.30 ರಿಂದ 11.30ರವರೆಗೆ ಧರಣಿ ನಡೆಸಿ ಹಿರಿಯ ಆರ್ಥಿಕ ತಜ್ಞ, ಕೇಂದ್ರದ ಮಾಜಿ ಕಾನೂನು ಸಚಿವ ಡಾ.ಸುಬ್ರಮಣಿಯನ್ ಸ್ವಾಮಿ ಪ್ರತಿಪಾದಿಸಿರುವ 2ನೇ ರಾಜ್ಯಗಳ ಮರು ಸಂಘಟನೆ ಆಯೋಗ ರಚನೆಗಾಗಿ ಆಗ್ರಹಿಸಿ, ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು. ಕೊಡವರು ಸ್ಥಳೀಯ ಬುಡಕಟ್ಟು ಜನರಾಗಿರುವುದರಿಂದ ಆಂತರಿಕ ರಾಜಕೀಯ ಸ್ವಯಂನಿರ್ಣಯ ಹಕ್ಕು, ಕೊಡವ ಲ್ಯಾಂಡ್ ಭೌಗೋಳಿಕ ರಾಜಕೀಯ ಸ್ವಾಯತ್ತತೆ, ಸ್ವ ಆಡಳಿತ ಮತ್ತು ಇತರೆ 9 ನ್ಯಾಯ ಸಮ್ಮತವಾದ ಜನಾಂಗೀಯ ಸಮಸ್ಯೆಗಳ ಪ್ರಮುಖ ಆಕಾಂಕ್ಷೆಗಳು ಮತ್ತು ಗೌರವಾನ್ವಿತ ಗುರಿಗಳನ್ನು ಪರಿಗಣಿಸಬೇಕು ಎಂದು ಒತ್ತಾಯಿಸಿ ಧರಣಿ ನಡೆಸಲಾಗುವುದು. ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಲಾಗುವುದು ಎಂದು ತಿಳಿಸಿದ್ದಾರೆ.

ಕಾಂಪೋಸ್ಟಿಂಗ್ ಕಿಟ್ ವಿತರಣೆ



ಮಹಿಳೆಯರಿಗೆ ಕಾಂಪೋಸ್ಟಿಂಗ್ ಕಿಟ್ ಅನ್ನು ವಿತರಣೆ ಮಾಡಿರುವುದು.

ಪಾಂಡವಪುರ,ಅ.31– ತಾಲೂಕಿನ ಕ್ಯಾತನಹಳ್ಳಿ ಗ್ರಾಮದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸ್ಕಂದ ಮಹಿಳಾ ಜ್ಞಾನವಿಕಾಶ ಕೇಂದ್ರದಲ್ಲಿ ಸೃಜನಶೀಲ ಕಾರ್ಯಕ್ರಮದಡಿ ಮನೆಯಲ್ಲಿ ತ್ಯಾಜ್ಯ ಸಂಗ್ರಹ, ಹಸಿರು ತರಕಾರಿಯನ್ನು ಗೊಬ್ಬರವಾಗಿ ಪರಿವರ್ತನೆ, ಮನೆ ಗಾರ್ಡನ್, ಕಿಚನ್ ಗಾರ್ಡನ್‌ಗಳಿಗೆ ಬಳಕೆ ಮಾಡಲು ಸಹಕಾರಿಯಾಗುವ ಕಾಂಪೋಸ್ಟಿಂಗ್ ಕಿಟ್ ವಿತರಣೆ ಮಾಡಲಾಯಿತು.

ಮಹಿಳೆಯರಿಗೆ ಕಾಂಪೋಸ್ಟಿಂಗ್ ಕಿಟ್ ವಿತರಣೆ ಮಾಡುವ ಮೂಲಕ ಯೋಜನಾಧಿಕಾರಿ ಯಶವಂತ್ ಅವರು ಚಾಲನೆ ನೀಡಿದರು. ತ್ಯಾಜ್ಯ ವಿಲೇವಾರಿ ತಜ್ಞ ಎಚ್.ಎಸ್.ಚಂದ್ರಶೇಖರ ಮಾತನಾಡಿ, ಮನೆಗಳಲ್ಲಿಯೇ ಹಸಿ ಕಸ ಮತ್ತು ಒಣ ಕಸಗಳ ವಿಲೇವಾರಿಯನ್ನು ಸಮರ್ಥವಾಗಿ ಮಾಡಿದರೆ ತ್ಯಾಜ್ಯದ ಸಮಸ್ಯೆಯನ್ನು ಸಾಧ್ಯವಾದಷ್ಟು ಕಡಿಮೆ ಮಾಡಬಹುದಾಗಿದೆ. ಹಸಿ ಮತ್ತು ಒಣ ಕಸವಿಲೇವಾರಿ, ಬೇರ್ಪಡಿಸುವ ಬಗ್ಗೆ ಮಹಿಳೆಯರು ವೈಜ್ಞಾನಿಕವಾಗಿ ಅರಿವು ಮೂಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಯೋಜನಾಧಿಕಾರಿ ಯಶವಂತ್ ಮಾತನಾಡಿ, ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಮಹಿಳಾ ಜ್ಞಾನ ವಿಕಾಸ ಕಾರ್ಯಕ್ರಮಗಳ ಮೂಲಕ ಮಹಿಳಾ ಸಬಲೀಕರಣ, ಮಹಿಳೆಯರಲ್ಲಿ ಆರ್ಥಿಕ ಶಿಸ್ತು, ಕಾನೂನು ಅರಿವು ನೆರವು, ಸ್ವ ಉದ್ಯೋಗದ ಒದಗಿಸಿಕೊಡುವ ಕುರಿತು ಅರಿವು ಮೂಡಿಸುತ್ತಿದೆ ಎಂದರು. ವಲಯದ ಮೇಲ್ವಿಚಾರಕ ಸಂತೋಷ್ ಕುಮಾರ್, ತೇಜಸ್ವಿ, ಸೇವಾಪ್ರತಿನಿಧಿ ಶೀಲಾ ಇತರಿದ್ದರು.

ಗ್ರಾಮದ ಅಭಿವೃದ್ಧಿಗೆ ಒಗ್ಗಟ್ಟು ಇರಲಿ

ಮಂಡ್ಯ,ಅ.31–ಒಗ್ಗಟ್ಟಿನಿಂದ ಗ್ರಾಮದ ಜನರು ಸೇರಿದರೆ ಗ್ರಾಮದ ಅಭಿವೃದ್ಧಿ ಸಾಧ್ಯವಾಗುತ್ತದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಹೇಳಿದರು.

ಮಳವಳ್ಳಿ ತಾಲೂಕಿನ ವೀರಾಜಿಪುರ ಗ್ರಾಮದಲ್ಲಿ ಶ್ರೀ ಬಸವೇಶ್ವರ ದೇವಾಲಯದ ವಿಶೇಷ ಪೂಜೆ ಹಾಗೂ ಧಾರ್ಮಿಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕೆಲವು ಹಳ್ಳಿಗಳಲ್ಲಿ ಎಲ್ಲ ಸಂಪನ್ಮೂಲಗಳಿದ್ದರು ಕೂಡ ಒಗ್ಗಟ್ಟಿಲ್ಲದೆ ಅಭಿವೃದ್ಧಿಯಲ್ಲಿ ಹಿನ್ನಡೆಯನ್ನು ಕಾಣುತ್ತಾರೆ ದಾನಿಗಳಿದ್ದರೂ ಕೂಡ ಶಾಲಾ ಕಾಲೇಜು ದೇವಾಲಯಗಳು ಇನ್ನಿತರ ಸೌಲಭ್ಯ ಪಡೆಯಲು ಆಗಿರುವುದಿಲ್ಲ ಎಲ್ಲಿ ಗ್ರಾಮದ ಜನರ ವಿಶ್ವಾಸದಿಂದ ಇರುತ್ತಾರೋ ಆ ಗ್ರಾಮ ಅಭಿವೃದ್ಧಿ ಹೊಂದುತ್ತದೆ ಎಂದರು. ನಿಮ್ಮ ಬೇಡಿಕೆಗಳಾದ ಬಸವ ಭವನ ಮತ್ತು ಪಶು ಆಸ್ಪತ್ರೆಗೆ ನಾನು ಮತ್ತು ನರೇಂದ್ರಸ್ವಾಮಿಯವರು ಪ್ರಾಮಾಣಿಕ ಪ್ರಯತ್ನ ಪಡುತ್ತೇವೆ ಗ್ರಾಮಾಂತರ ಅಭಿವೃದ್ಧಿಗೆ ನಮ್ಮ ಸರ್ಕಾರ ಬದ್ಧವಾಗಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಶಾಸಕ ಪಿ.ಎಂ.ನರೇಂದ್ರಸ್ವಾಮಿ ಮಾತನಾಡಿ, ಈ ಭಾಗದ ಮುಖ್ಯ ರಸ್ತೆಗೆ ಟೆಂಡರ್ ಆಗಿದೆ ಶೀಘ್ರದಲ್ಲೇ ಕಾಮಗಾರಿ ಆರಂಭವಾಗಲಿದೆ. ವಿದ್ಯುತ್ ಕುಡಿಯುವ ನೀರಿನ ಯೋಜನೆ ಕಾಮಗಾರಿಯು ಸಂಪೂರ್ಣವಾಗುತ್ತಾ ಬಂದಿದೆ 56 ಹಳ್ಳಿಗಳಿಗೆ ಕಾವೇರಿ ಕುಡಿಯುವ ನೀರಿನ ಸಂಪರ್ಕವನ್ನು ಪ್ರತಿ ಗ್ರಾಮಗಳಿಗೂ ಅತಿ ಶೀಘ್ರದಲ್ಲೇ ನೀಡುತ್ತೇವೆ ಎಂದು ಭರವಸೆ ನೀಡಿದರು.

ಗ್ರಾಮಸ್ಥರ ಸಂಕಲ್ಪದೊಂದಿಗೆ ಡಾ.ನಂದೀಶ್ ನೇತೃತ್ವದಲ್ಲಿ ಬಸವೇಶ್ವರ ದೇವಸ್ಥಾನ ನಿರ್ಮಿಸಿರುವುದು ಭಕ್ತಿಗೆ ಹಿಡಿದ ಕನ್ನಡಿಯಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



ವೀರಾಜಿಪುರ ಗ್ರಾಮದಲ್ಲಿ ಶ್ರೀ ಬಸವೇಶ್ವರ ದೇವಾಲಯದ ವಿಶೇಷ ಪೂಜೆ ಹಾಗೂ ಧಾರ್ಮಿಕ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಉದ್ಘಾಟಿಸಿದರು.

ಸಮಾರಂಭದಲ್ಲಿ ವೈದ್ಯನಾಥಪುರ ದೇವಸ್ಥಾನ ಟ್ರಸ್ಟ್‌ನ ಪೀಠಾಧ್ಯಕ್ಷರಾದ ರೇಣುಕಾ ಶಿವಚಾರ್ಯ ಮಹಾಸ್ವಾಮೀಜಿ, ಬಸವ ರಾಜೇಂದ್ರ ಶಿವಾಚಾರ್ಯ ಸ್ವಾಮೀಜಿ, ಉಪ ವಿಭಾಗಾಧಿಕಾರಿ ಎಂ.ಶಿವಮೂರ್ತಿ ಪ್ರಭಾರ ತಹಸೀಲ್ದಾರ್ ಬಿ.ವಿ.ಕುಮಾರ್, ಜಿಲ್ಲಾಪಂಚಾಯಿತಿ ಮಾಜಿ ಸದಸ್ಯ ಆರ್.ಎಂ.ವಿಶ್ವಾಸ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಪಿ.ರಾಜು ಕೊಳ್ಳೇಗಾಲ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ತೋಟೇಶ್ ಮತ್ತಿತರರು ಭಾಗವಹಿಸಿದ್ದರು.

ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ ಸೇರಿ 21 ಮಂದಿಗೆ ಜಿಲ್ಲಾ ರಾಜ್ಯೋತ್ಸವ ಪುರಸ್ಕಾರ

ಮಂಡ್ಯ,ಅ.31– ಶ್ರೀರಂಗಪಟ್ಟಣದ ಚಂದ್ರವನ ಆಶ್ರಮದ ಶ್ರೀ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ ಸೇರಿದಂತೆ ವಿವಿಧ ಕ್ಷೇತ್ರದ 21 ಸಾಧಕರಿಗೆ 2024ನೇ ಸಾಲಿನ ಜಿಲ್ಲಾ ಮಟ್ಟದ ರಾಜ್ಯೋತ್ಸವ ಪುರಸ್ಕಾರಕ್ಕೆ ಜಿಲ್ಲಾಡಳಿತ ಆಯ್ಕೆ ಮಾಡಿದೆ.



ಡಾ.ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ (ಶಿಕ್ಷಣ/ ಆರೋಗ್ಯ ಸೇವೆ), ಬೇಲೂರು ಸೋಮಶೇಖರ್ (ಸಹಕಾರ ಕ್ಷೇತ್ರ), ಡಾ.ಪಿ.ಸುಮಾರಾಣಿ (ಸಾಹಿತ್ಯ), ಬಸವರಾಜು ಹೆಗ್ಗಡೆ, ರಜನೀಶ್‌ಪಟೇಲ್ (ಮಾಧ್ಯಮ), ಕೃಷ್ಣೇಗೌಡ, ಕೆ.ಆರ್. ರಮೇಶ್ ಹಾಗೂ ಕೆ.ಜೆ.ಜ್ಞಾನೇಶ್ (ರಂಗಭೂಮಿ), ಪಾಪಯ್ಯ, ನಾಗರಾಜಯ್ಯ (ಸಂಘಟನೆ), ರಾಜಯೋಗಿನಿ ಬಿ.ಕೆ.ಶಾರದ (ಅಂತರಾಷ್ಟ್ರೀಯ ಶಾಂತಿ ಮತ್ತು ಮಾನವತೆ), ಸೈಯ್ಯದ್ ಘನಿ ಖಾನ್ (ಪ್ರಗತಿಪರ ಕೃಷಿ), ವೈ.ಥಾಮಸ್ ಬೆಂಜಿಮನ್, ಬಿ.ಎಂ.ಪ್ರಕಾಶ್ (ಸಮಾಜ ಸೇವೆ), ಜಗದೀಶ್ (ವೀರಘಾಸೆ–ಸಾಂಸ್ಕೃತಿಕ), ಡಾ.ಹೆಚ್.ಎಂ.ನಾಗೇಶ್ (ಸಾಹಿತ್ಯ/ ಶಿಕ್ಷಣ), ಎಚ್.ಎಂ.ಬಸವರಾಜು (ಯುವಜನ ಸೇವೆ), ಪದ್ಮಶ್ರೀನಿವಾಸ್ (ಸಂಕೀರ್ಣ), ಬಿ.ಡಿ.ಪುರುಷೋತ್ತಮ (ಸಹಕಾರ–ಸಂಘ ಕ್ಷೇತ್ರ), ಕೂಡಲಕುಪ್ಪೆ ಸೋಮಶೇಖರ್ (ಅರುಣೋದಯ ಕಲಾತಂಡ), ಕ್ಷೀರಸಾಗರ ಮಿತ್ರಕೂಟ, ಕಾಳಮ್ಮನ ನಾಗೇಶ್ (ಕೀಲಾರ) ಇವ ರನ್ನು 2024ನೇ ಸಾಲಿನ ಜಿಲ್ಲಾ ಮಟ್ಟದ ರಾಜ್ಯೋತ್ಸವ ಪುರಸ್ಕಾರಕ್ಕೆ ಆಯ್ಕೆ ಮಾಡಿದೆ.

ನ.1 ರಂದು ನಗರದ ಸರ್.ಎಂ.ವಿಶ್ವೇಶ್ವರಯ್ಯ ಕ್ರೀಡಾಂಗಣದಲ್ಲಿ ನಡೆಯುವ 69ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಸಾಧಕರಿಗೆ ಕನ್ನಡ ರಾಜ್ಯೋತ್ಸವ ಪುರಸ್ಕಾರ ನೀಡಿ ಗೌರವಿಸಲಾಗುವುದು ಪುರಸ್ಕೃತರು ಸಕಾಲಕ್ಕೆ ಆಗಮಿಸಿ ಪ್ರಶಸ್ತಿ ಸ್ವೀಕರಿಸ ಬೇಕು ಎಂದು ಅಪರ ಜಿಲ್ಲಾಧಿಕಾರಿ ಡಾ.ಎಚ್.ಎಲ್.ನಾಗರಾಜು ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಮಂಡ್ಯ,ಅ.31– ಕಾಲೇಜುಗಳ ಸ್ನಾತಕ ಪೂರ್ವ ಹಾಗೂ ಸ್ನಾತಕೋತ್ತರ ಕೋರ್ಸುಗಳ ತಾತ್ಕಾಲಿಕ ಸಂಯೋಜನೆ ನವೀಕರಿಸಲು/ಹೊಸ ಕೋರ್ಸ್/ವಿಷಯ/ಭಾಷೆಗಳು /ವಿದ್ಯಾರ್ಥಿಗಳ ಪ್ರವೇಶಾತಿ/ ಹೆಚ್ಚುವರಿ/ ಇಳಿಕೆ ಪ್ರವೇಶಾತಿ ಮಿತಿ, ತಾತ್ಕಾಲಿಕ ಸಂಯೋಜನೆಗೆ ಶಾಶ್ವತ ಸಂಯೋಜನೆ ಮಂಜೂರು ಮಾಡಲು/ ಹೊಸ ಕಾಲೇಜು ಆರಂಭಿಸಲು ಹಾಗೂ ಅಸ್ತಿತ್ವದಲ್ಲಿರುವ ಕಾಲೇಜುಗಳಲ್ಲಿ ಹೊಸ ಸ್ನಾತಕೋತ್ತರ ಕೋರ್ಸುಗಳಿಗೆ ಸಂಯೋಜನೆ ಕೋರಲು ಆನ್‌ಲೈನ್‌ನಲ್ಲಿ ಅರ್ಜಿ ಆಹ್ವಾನಿಸಲಾಗಿದೆ.

ಕುಂದೂರು ಜಗದೀಶ್‌ಗೆ ಜಿಲ್ಲಾ ರಾಜ್ಯೋತ್ಸವ ಪುರಸ್ಕಾರ

ಕಿಕ್ಕೇರಿ: ಸಮೀಪದ ಕುಂದೂರು ಗ್ರಾಮದ ವೀರಗಾಸೆ ಕಲಾವಿದ ಕುಂದೂರು ಜಗದೀಶ್ ಅವರಿಗೆ ಮಂಡ್ಯ ಜಿಲ್ಲಾ ರಾಜ್ಯೋತ್ಸವ ಪುರಸ್ಕಾರ ಲಭಿಸಿದೆ.



ಇವರು ಕುಂದೂರು ಗ್ರಾಮದ ವೀರಭದ್ರಸ್ವಾಮಿ ದೇವಾಲಯದ ಪ್ರಧಾನ ಅರ್ಚಕರಾದ ಪುಟ್ಟಸ್ವಾಮಪ್ಪ ಅವರ ಪುತ್ರರಾಗಿದ್ದು, 4 ದಶಕಗಳಿಂದಲೂ ರಾಜ್ಯದ ವಿವಿಧ ಮೂಲೆಗಳಲ್ಲಿ ನಡೆಯುವ ಪೂಜಾರಾಧನೆ, ಸಭೆ ಸಮಾರಂಭಗಳಲ್ಲಿ ವೀರಗಾಸೆ ನೃತ್ಯ ಪ್ರದರ್ಶನ ನೀಡುತ್ತ ಚಿರಪರಿಚಿತರಾಗಿದ್ದಾರೆ ತಮ್ಮ ಕೌಟುಂಬಿಕ ವಂಶಪಾರ್ಯವಾಗಿ ಕಲಾಸೇವೆ ಮಾಡುತ್ತಬಂದಿದ್ದು ಅದನ್ನು ಉಳಿಸಿ, ಬೆಳೆಸಬೇಕಿದೆ ತಮ್ಮ ಕಲಾಸೇವೆ ಪರಂಪರೆ ಕಿರಿಯರಲ್ಲಿ ಬೆಳೆಯಬೇಕು ಎಂಬ ಹಂಬಲದಿಂದ ಹಲವು ಶಿಷ್ಯರನ್ನು ಹುಟ್ಟುಹಾಕಿದ್ದಾರೆ. ಉದ್ಭವ ಪ್ರಳಯಕಾಲ ವೀರಭದ್ರಸ್ವಾಮಿ ಕೃಪೆ, ಗ್ರಾಮಸ್ಥರ ಆಶೀರ್ವಾದದಿಂದ ಪ್ರಶಸ್ತಿ ಲಭಿಸಿದೆ ಎನ್ನುತ್ತಾರೆ ಜಗದೀಶ್.

ಪಿಎಚ್.ಡಿ ಪದವಿ

ಮೈಸೂರು, ಅ.31– ಡಾ.ಟಿ.ಎಸ್. ಜಗದೀಶ್ ಕುಮಾರ್ ಅವರ ಮಾರ್ಗದರ್ಶನದಲ್ಲಿ ಎಸ್. ಚೈತ್ರಾ ಅವರು ರೇಷ್ಮೆ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.



ರಾಷ್ಟ್ರಮಟ್ಟಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಸನ್ಮಾನ



ಇತ್ತೀಚೆಗೆ ಚಿತ್ರದುರ್ಗದಲ್ಲಿ ನಡೆದ 17 ವರ್ಷದೊಳಗಿನ ಬಾಲಕರ ವಿಭಾಗದ ಜೂಡೋ ಪಂದ್ಯಾವಳಿಯಲ್ಲಿ ಭಾರತೀನಗರದ ಭಾರತೀ ಸ್ಕೂಲ್ ಆಫ್ ಎಕ್ಸಲೆನ್ಸ್‌ನ 10ನೇ ತರಗತಿ ವಿದ್ಯಾರ್ಥಿಗಳಾದ ಎ.ವಿ.ಸುದರ್ಶನ್ ಹಾಗೂ ಎನ್.ಎಸ್ ಹರ್ಷಿತ ಅವರು ಚಿನ್ನದ ಪದಕ ಗಳಿಸಿ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದು ಇವರನ್ನು ಸಂಸ್ಥೆ ವತಿಯಿಂದ ಅಭಿನಂದಿಸಲಾಯಿತು.

ನಾಗರಾಜಮೂರ್ತಿ ನಿಧನ

ಹಲಗೂರು: ಟಿ.ಕೆ.ಹಳ್ಳಿ ಹಾಲು ಉತ್ಪಾದಕರ ಸಂಘದ ಅಧ್ಯಕ್ಷ ಕೆ.ಜೆ.ನಾಗರಾಜಮೂರ್ತಿ(73) ನಿಧನರಾಗಿದ್ದಾರೆ. ಮೃತರು ಪತ್ನಿ ಶಿವಮ್ಮ, ಓರ್ವ ಪುತ್ರಿ ಮತ್ತು ಮೂವರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮೃತರ ಸ್ವಗ್ರಾಮವಾದ ತೊರೆಕಾಡನಹಳ್ಳಿಯಲ್ಲಿ ಗುರುವಾರ ನೆರವೇರಿತು.



21 ಸಾಧಕರಿಗೆ ಜಿಲ್ಲಾ ಮಟ್ಟದ ರಾಜ್ಯೋತ್ಸವ ಪುರಸ್ಕಾರ

ಚಾಮರಾಜನಗರ, ಅ.31– ಜಿಲ್ಲಾಡಳಿತದ ವತಿಯಿಂದ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಜಿಲ್ಲೆಯ 21 ಸಾಧಕರನ್ನು ಚೆಲುವ ಚಾಮರಾಜನಗರ ಜಿಲ್ಲಾ ಮಟ್ಟದ ಕನ್ನಡ ರಾಜ್ಯೋತ್ಸವ–2024ರ ಪುರಸ್ಕಾರಕ್ಕೆ ಆಯ್ಕೆ ಮಾಡಲಾಗಿದೆ.



ಜಾನಪದ, ರಂಗಭೂಮಿ, ಕಲೆ ಕ್ಷೇತ್ರದಿಂದ ಸಿ.ಎಂ.ನರಸಿಂಹಮೂರ್ತಿ, ಡಾ.ಶಿವರುದ್ರಸ್ವಾಮಿ, ಪಿ.ಮಹೇಶ್, ಎಂ.ಚೌಡಯ್ಯ, ಆರ್.ಸಿದ್ದರಾಜು, ವೆಂಕಟೇಶ್ ಮೂರ್ತಿ, ಕೈಲಾಸಮೂರ್ತಿ, ಪತ್ರಿಕೋದ್ಯಮ ಕ್ಷೇತ್ರದಿಂದ ಬಿಳಿಗಿರಿ ಶ್ರೀನಿವಾಸ್, ಆರ್.ಸಿ.ಪುಟ್ಟರಾಜು, ಎಂ.ರೇಣುಕೇಶ್, ಅಬ್ರಹಾಂ ಡಿ.ಸೆಲ್ವ, ಕ್ರೀಡಾ ಕ್ಷೇತ್ರದಿಂದ ಎಂ.ಪ್ರಭುಸ್ವಾಮಿ, ವಿಶ್ವೇಶ್ವರ ಆರಾಧ್ಯ, ಎಂ.ರೋಷಿಣಿ, ಚಿತ್ರಕಲೆ ಕ್ಷೇತ್ರದಿಂದ ಹೆಚ್.ಮಹದೇವ, ಜೆ.ಮೂರ್ತಿ ಮುಡಿಗುಂಡ, ವಿಜ್ಞಾನ ಕ್ಷೇತ್ರದಿಂದ ಎ.ಎಸ್.ಅಭಿಷೇಕ್, ಪರಿಸರ ಸಂರಕ್ಷಣೆ ಕ್ಷೇತ್ರದಿಂದ ಸಿ.ಎಂ. ವೆಂಕಟೇಶ್, ಕೃಷಿ ಆಧಾರಿತ ಕೈಗಾರಿಕೆ ಕ್ಷೇತ್ರದಿಂದ ವರ್ಷ, ಸೋಬಾನೆ ಜಾನಪದ ಕಲಾವಿದೆ ಮಲ್ಲಮ್ಮ ಹಾಗೂ ಸಾಮಾಜಿಕ ಸೇವೆ ಕ್ಷೇತ್ರದಿಂದ ಯಸ್ರಬ್ ಉಲ್ಲಾ ಖಾನ್ ಅವರನ್ನು ಜಿಲ್ಲಾ ರಾಜ್ಯೋತ್ಸವ ಪುರಸ್ಕಾರಕ್ಕೆ ಆಯ್ಕೆ ಮಾಡಲಾಗಿದೆ.

ಎನ್.ಕೃತಿಕಾಗೆ ಬೆಳ್ಳಿ ಪದಕ



ಚಾಮರಾಜನಗರ, ಅ.31–ಇತ್ತೀಚೆಗೆ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಕರ್ನಾಟಕ ಫೆನ್ಸಿಂಗ್ ಅಸೋಸಿಯೇಷನ್ ವತಿಯಿಂದ ಆಯೋಜಿಸಿದ್ದ ರಾಜ್ಯ ಮಟ್ಟದ ಫೆನ್ಸಿಂಗ್ ಚಾಂಪಿಯನ್ ಶಿಪ್‌ನ ಸಬ್ ಜೂನಿಯರ್ ವಿಭಾಗದಲ್ಲಿ ಸಂತೇಮರಹಳ್ಳಿಯ ಖೇಲೋ ಇಂಡಿಯಾ ಸಂಸ್ಥೆ ವಿದ್ಯಾರ್ಥಿ ಎನ್.ಕೃತಿಕಾ ಬೆಳ್ಳಿ ಪದಕ ಪಡೆದಿದ್ದಾರೆ.

ಸಂತೇಮರಹಳ್ಳಿಯ ಬಾಲು ಹೋಟೆಲ್‌ನ ಬಾಲು ಅವರ ಮೊಮ್ಮಗಳಾದ ಎನ್.ಕೃತಿಕಾ ಪದಕ ಪಡೆದಿದ್ದು, 2024ನೇ ಮೈಸೂರು ದಸರಾ ಕ್ರೀಡಾಕೂಟದಲ್ಲೂ ಕಂಚಿನ ಪದಕ ಪಡೆದಿದ್ದಾರೆ ಎಂದು ಸಂಸ್ಥೆ ತರಬೇತುದಾರರಾದ ಗಜಾನಂದ್ ಹಾಗೂ ಪವನ್ ತಿಳಿಸಿದ್ದಾರೆ.

ಪಿ.ಮಲ್ಲಪ್ಪ ನಿಧನ

ಆಲೂರು, ಅ.31–ಚಾಮರಾಜನಗರ ತಾಲೂಕಿನ ದೊಡ್ಡರಾಯಪೇಟೆ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಮಾಜಿ ಅಧ್ಯಕ್ಷ ಪಿ.ಮಲ್ಲಪ್ಪ (82) ಅನಾರೋಗ್ಯದಿಂದ ಗುರುವಾರ ನಿಧನರಾದರು.

ಮೃತರು ಪತ್ನಿ, ಇಬ್ಬರು ಪುತ್ರರು, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಗುರುವಾರ ದೊಡ್ಡರಾಯಪೇಟೆಯಲ್ಲಿ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.




ಚಾಮರಾಜನಗರ ಜಿಲ್ಲೆಯಲ್ಲಿ ಸಂಭ್ರಮದ ದೀಪಾವಳಿ

ಮನೆಗಳ ಮುಂದೆ ರಂಗೋಲಿ, ದೀಪ, ಪಂಜು ಹಚ್ಚಿ ಹಬ್ಬ ಆಚರಣೆ



ಮಹದೇಶ್ವಬೆಟ್ಟದಲ್ಲಿ ದೀಪಾವಳಿ ಹಬ್ಬದ ಪೂಜೆಗೆ ನೆರೆದಿರುವ ಅಪಾರ ಭಕ್ತರು.



ಮಕ್ಕಳು ಪೋಷಕರೊಂದಿಗೆ ಅಂಗಡಿಗಳಲ್ಲಿ ಪಟಾಕಿ ಖರೀದಿಸಿದರು.

ಚಾಮರಾಜನಗರ, ಅ.31–ಬೆಳಕಿನ ಹಬ್ಬ ದೀಪಾವಳಿಯನ್ನು ಜಿಲ್ಲಾದ್ಯಂತ ಸಡಗರ–ಸಂಭ್ರಮದಿಂದ ಆಚರಿಸಲಾಗುತ್ತಿದ್ದು, ನರಕಚತುರ್ಥಿ ದಿನವಾದ ಗುರುವಾರದಿಂದಲೇ ಹಬ್ಬದ ಸಂಭ್ರಮ ಎಲ್ಲೆಡೆ ಮನೆ ಮಾಡಿದೆ.

ಹಬ್ಬದ ಹಿನ್ನೆಲೆಯಲ್ಲಿ ಪ್ರತಿ ಮನೆಯಲ್ಲೂ ಬಾಗಿಲಿಗೆ ತಳಿರು ತೋರಣಗಳನ್ನು ಕಟ್ಟಿ, ಹೂವುಗಳಿಂದ ಅಲಂಕರಿಸಲಾಗಿದೆ. ಸಂಜೆ ಮನೆಗಳ ಮುಂದೆ ರಂಗೋಲಿ ಹಾಕಿ, ದೀಪ ಹಾಗೂ ಪಂಜು ಹಚ್ಚಲಾಗುತ್ತಿದೆ. ಜಿಲ್ಲಾ ಕೇಂದ್ರ ಚಾಮರಾಜನಗರ ಮಾತ್ರವಲ್ಲದೆ ಗುಂಡ್ಲುಪೇಟೆ, ಯಳಂದೂರು, ಕೊಳ್ಳೇಗಾಲ, ಹನೂರು ಸೇರಿದಂತೆ ಎಲ್ಲೆಡೆ ದೀಪಾವಳಿಯನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ.

ದೇವಾಲಯಗಳಲ್ಲಿ ವಿಶೇಷ ಪೂಜೆ: ಹಬ್ಬದ ಅಂಗವಾಗಿ ಜಿಲ್ಲೆಯ ಪ್ರಸಿದ್ಧ ಕ್ಷೇತ್ರ ಮಹದೇಶ್ವಬೆಟ್ಟ, ಬಿಳಿಗಿರಿರಂಗನಾಥಸ್ವಾಮಿ ಬೆಟ್ಟ, ಹಿಮವದ್ ಗೋಪಾಲಸ್ವಾಮಿ ಬೆಟ್ಟ ಸೇರಿದಂತೆ ಜಿಲ್ಲಾ ಕೇಂದ್ರದ ಚಾಮರಾಜೇಶ್ವರಸ್ವಾಮಿ, ಆಂಜನೇಯ, ಕೊಳದ ಗಣಪತಿ ದೇವಸ್ಥಾನಗಳಲ್ಲಿ ವಿಶೇಷ ಪೂಜೆ ಗುರುವಾರ ನೆರವೇರಿದ್ದು, ಶುಕ್ರವಾರ ಮತ್ತು ಶನಿವಾರವೂ ನಡೆಯಲಿದೆ.

ಪಟಾಕಿ ವ್ಯಾಪಾರ ಜೋರು: ನಗರದ ಮೇಘಾ ಕಾಂಪ್ಲೆಕ್ಸ್ ಬಳಿ 12 ಪಟಾಕಿ ಮಳಿಗೆಯನ್ನು ತೆರೆದಿದ್ದು, ಪಟಾಕಿಗಳನ್ನು ಖರೀದಿಸಲು ಜನರು ಉತ್ಸಾಹ ತೋರುತ್ತಿದ್ದಾರೆ. ಸಾಲು ಸಾಲು ರಜೆ ಇದ್ದ ಕಾರಣ ಮಕ್ಕಳು ತಮ್ಮ ಪೋಷಕರೊಂದಿಗೆ ಪಟಾಕಿ ಅಂಗಡಿಗಳಿಗೆ ತೆರಳಿ ಖರೀದಿಸುತ್ತಿರುವ ದೃಶ್ಯ ಸಾಮಾನ್ಯವಾಗಿದೆ. ಕಳೆದ ಬಾರಿಗೆ ಹೋಲಿಕೆ ಮಾಡಿದಾಗ ಈ ಬಾರಿ ಪಟಾಕಿ ವ್ಯಾಪಾರ ಉತ್ತಮವಾಗಿ ನಡೆಯುತ್ತಿದೆ ಎಂಬ ಆಶಭಾವನೆಯಲ್ಲಿ ವ್ಯಾಪಾರಿಗಳು ಇದ್ದಾರೆ. ಪಟಾಕಿ ಬಾಕ್ಸ್ ಒಂದಕ್ಕೆ 150 ರೂ.ನಿಂದ 2 ಸಾವಿರ ರೂ.ವರೆಗೂ ಧಾರಣೆಯಿದೆ. ಹೂಕುಂಡ, ಸುರ್ ಸುರ್ ಬತ್ತಿ, ಭೂಚಕ್ರ, ರಾಕೆಟ್, ತಂತಿಮತಾಪು, ಗನ್‌ಗಳು, ಹಾವಿನಗುಳಿಗೆ, ಸ್ಕೈಶಾಟ್, ಆಕಾಶದೀಪ, ಬಟರ್‌ಫ್ಲೈ ಸೇರಿದಂತೆ ವಿವಿಧ ರೀತಿಯ ಪಟಾಕಿಗಳ ಮಾರಾಟ ಜೋರಾಗಿದೆ.

ಹಸಿರು ಪಟಾಕಿ ಬಳಸಿ: ಪರಿಸರ ಸ್ನೇಹಿ ಸಂಬಂಧ ರಾತ್ರಿ 8 ರಿಂದ 10 ಗಂಟೆವರೆಗೆ ಮಾತ್ರ ಪಟಾಕಿಗಳನ್ನು ಸ್ಫೋಟಿಸಲು ಅವಕಾಶವಿದ್ದು, ಸಾರ್ವಜನಿಕರಿಗೆ ಪಟಾಕಿ ಬಳಕೆ ಕುರಿತು ಜಿಲ್ಲಾಧಿಕಾರಿ ಶಿಲ್ಪಾನಾಗ್ ನಿರ್ದೇಶನ ನೀಡಿದ್ದಾರೆ.

ಸರ್ವೋಚ್ಚ ನ್ಯಾಯಾಲಯ ನಿರ್ದೇಶನದಂತೆ ರಾತ್ರಿ 8 ರಿಂದ 10 ಗಂಟೆ ವರೆಗೆ ಮಾತ್ರ ಪಟಾಕಿ ಸ್ಫೋಟಿಸಲು ಅವಕಾಶ ಕಲ್ಪಿಸಲಾಗಿದೆ. ಹಸಿರು ಪಟಾಕಿ ಹೊರತುಪಡಿಸಿ, ಉಳಿದ ಯಾವುದೇ ಪಟಾಕಿ ಮಾರಾಟ ಹಾಗೂ ಬಳಕೆಯನ್ನು ನಿಷೇಧಿಸಲಾಗಿದೆ. ಪಟಾಕಿ ಮಾರುವವರು ಹಾಗೂ ಗೋದಾಮುಗಳ ಮಾಲೀಕರು ಸಂಬಂಧಪಟ್ಟ ಇಲಾಖೆ ಅನುಮತಿ ಪಡೆಯಬೇಕು ಎಂದು ಸೂಚಿಸಿದ್ದಾರೆ.

ರಿಷಬ್ ಶೆಟ್ಟಿ ಈಗ ಹನುಮಾನ್



ಕಾಂತಾರ ಚಿತ್ರದಲ್ಲಿ ತನ್ನ ಮನೋಜ್ಞ ಅಭಿನಯದಿಂದ ಸಿನಿ ಪ್ರೇಕ್ಷಕರ ಮನ ಸೂರೆಗೊಂಡಿದ್ದ ನಟ ರಿಷಬ್ ಶೆಟ್ಟಿ ಈಗ ರಾಮಭಕ್ತ ಆಂಜನೇಯನ ಅವತಾರ ಎತ್ತಿದ್ದಾರೆ. ಈ ವರ್ಷದ ಆರಂಭದಲ್ಲಿ ತೆರೆಕಂಡಿದ್ದ ಪ್ರಶಾಂತ್ ವರ್ಮ ನಿರ್ದೇಶನದ ಹನುಮಾನ್ ಚಿತ್ರ ತೆಲುಗು, ಕನ್ನಡ ಸೇರಿ ಹಲವು ಭಾಷೆಗಳಲ್ಲಿ ರಿಲೀಸಾಗಿ ಉತ್ತಮ ಪ್ರತಿಕ್ರಿಯೆ ಪಡೆದುಕೊಂಡಿತ್ತು. ಟಾಲಿವುಡ್ ನಟ ತೇಜ ಸಜ್ಜ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದ ಈ ಚಿತ್ರ ಯಶಸ್ವಿಯಾದ ಬೆನ್ನಲ್ಲೇ ಆ ಚಿತ್ರದ ಸೀಕ್ವೆಲ್ ನಿರ್ಮಾಣಕ್ಕೆ ತಯಾರಿ ನಡೆಸಲಾಗಿತ್ತು, ಹಿಂದಿನ ಚಿತ್ರದಲ್ಲಿ ಹನುಮಾನ್ ಪಾತ್ರವನ್ನು ಗ್ರಾಫಿಕ್ ಬಳಸಿ ಸೃಷ್ಟಿಸಲಾಗಿತ್ತು, ಆದರೆ ಅದರ ಸೀಕ್ವೆಲ್‌ನಲ್ಲಿ ಹನುಮಾನ್ ಆಗಿ ನಟ ರಿಷಬ್ ಶೆಟ್ಟಿ ಕಾಣಿಸಿಕೊಳ್ಳುತ್ತಿದ್ದಾರೆ. ಚಿತ್ರದ ತುಂಬಾ ಸೀನ್‌ಗಳಲ್ಲಿ ಹನುಮಾನ್ ಪಾತ್ರ ಬರುತ್ತದೆ, ಹಾಗಾಗಿ ಈ ಪಾತ್ರವನ್ನು ಅತ್ಯಂತ ಸೂಕ್ತ ವ್ಯಕ್ತಿಯ ಕೈಲೇ ಮಾಡಿಸಿದರೆ ಅದಕ್ಕೊಂದು ತೂಕ ಬರುತ್ತದೆ ಎಂದು ಅಳೆದೂತೂಗಿ, ಕೊನೆಗೆ ಕಾಂತಾರ ಚಿತ್ರದ ಮೂಲಕ ದೇಶಾದ್ಯಂತ ಅಭಿಮಾನಿ ಬಳಗವನ್ನು ಹೊಂದಿರುವ ರಿಷಬ್ ಶೆಟ್ಟಿ ಅವರೇ ಸೂಕ್ತ ಎಂದು ತೀರ್ಮಾನಿಸಿದ್ದಾರೆ. ಹಾಗೆ ಈ ಪ್ಯಾನ್ ಇಂಡಿಯಾ ಚಿತ್ರಕ್ಕೆ ಆಯ್ಕೆಯಾದ ರಿಷಬ್ ಶೆಟ್ಟಿ ಅವರ ಮೊದಲ ಲುಕ್ ಇದೀಗ ಬಿಡುಗಡೆಯಾಗಿದ್ದು, ಕೈಲಿ ಶ್ರೀರಾಮನ ವಿಗ್ರಹ ಹಿಡಿದು ನಿಂತಿರುವ ಆಂಜನೇಯನ ಲುಕ್ ಅಭಿಮಾನಿಗಳನ್ನು ಮಂತ್ರ ಮುಗ್ಧಗೊಳಿಸಿದೆ. ಜೈ ಹನುಮಾನ್ ಚಿತ್ರದ ಮೊದಲ ಪೋಸ್ಟರ್‌ನ್ನು ಮೈತ್ರಿ ಮೂವೀಸ್ ಬಿಡುಗಡೆ ಮಾಡಿದೆ, ಈ ಪೋಸ್ಟರ್ ಕಂಡು ರಿಷಬ್ ಅಭಿಮಾನಿಗಳು ಉತ್ಸುಕರಾಗಿದ್ದಾರೆ. ಪೋಸ್ಟರ್‌ನಲ್ಲಿ ರಿಷಬ್ ಅವರು, ಭಜರಂಗಬಲಿಯಾಗಿ ಕಾಣಿಸಿಕೊಂಡಿದ್ದು, ಕೈಯಲ್ಲಿ ಶ್ರೀರಾಮನ ವಿಗ್ರಹ ಹಿಡಿದುಕೊಂಡಿದ್ದಾರೆ. ಈ ಮೂಲಕ ರಾಷ್ಟ್ರಪ್ರಶಸ್ತಿ ವಿಜೇತ ನಟ ರಿಷಬ್‌ಶೆಟ್ಟಿ ಮತ್ತು ನಿರ್ದೇಶಕ ಪ್ರಶಾಂತ್‌ವವರ್ಮಾ ಭಕ್ತಿ ಮತ್ತು ಧೈರ್ಯದ ಸುತ್ತ ನಡೆಯೋ ಪೌರಾಣಿಕ ಕಥೆಯನ್ನು ತೆರೆಯಮೇಲೆ ತರುತ್ತಿದ್ದಾರೆ.

ಸೂಪರ್ ಚಿತ್ರ 'ಬಘೀರ'

ರೋರಿಂಗ್ ಸ್ಟಾರ್ ಶ್ರೀಮುರಳಿ, ರುಕ್ಮಿಣಿ ವಸಂತ್ ಅಭಿನಯದ ಬಘೀರ ಈ ವಾರ ದೇಶಾದ್ಯಂತ 400ಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ರಿಲೀಸಾಗಿದೆ. ವಿಜಯ್ ಕಿರಗಂದೂರು ನಿರ್ಮಾಣದ ಬಘೀರ ಹಲವು ಕಾರಣಗಳಿಂದ ಪ್ರೇಕ್ಷಕರಲ್ಲಿ ದೊಡ್ಡಮಟ್ಟದ ನಿರೀಕ್ಷೆ ಹುಟ್ಟಿಸಿದೆ.

ಬಿಗ್‌ಬಜೆಟ್‌ನಲ್ಲಿ ನಿರ್ಮಾಣವಾಗಿರುವ ಈ ಚಿತ್ರ ಗಲ್ಲಾಪೆಟ್ಟಿಗೆಯಲ್ಲಿ ಹೇಗೆ ಸದ್ದು ಮಾಡುತ್ತೆ ಅನ್ನೋ ಕುತೂಹಲವಂತೂ ಎಲ್ಲರಲ್ಲೂ ಇದೆ. ಡಾ.ಸೂರಿ ಆಕ್ಷನ್ ಕಟ್ ಹೇಳಿರುವ ಕನ್ನಡದ ಪ್ರಪ್ರಥಮ ಸೂಪರ್ ಹೀರೋ ಚಿತ್ರ ಇದಾಗಿದೆ. ಹಾಲಿವುಡ್ ಸೂಪರ್ ಹೀರೋ ಸಿನಿಮಾಗಳನ್ನು ನೋಡಿ ಇಂಥ ಚಿತ್ರಗಳು ಕನ್ನಡದಲ್ಲಿ ಏಕೆ ಬರುತ್ತಿಲ್ಲ ಎಂದು ಪ್ರಶ್ನಿಸುವವರಿಗೆ ಬಘೀರ ಉತ್ತರವಾಗಿದೆ.

ಹಾಲಿವುಡ್‌ನ ಬ್ಯಾಟ್‌ಮ್ಯಾನ್‌ನಂಥ ಸೂಪರ್ ಹೀರೋ ಸಿನಿಮಾ ಲೆವೆಲ್‌ನಲ್ಲಿ ಬಘೀರ ನಿರ್ಮಾಣವಾಗಿದೆ. ಈ ಚಿತ್ರಕ್ಕೆ ಒಟ್ಟು 127 ದಿನಗಳ ಚಿತ್ರೀಕರಣ ನಡೆದಿದ್ದು, ಅದರಲ್ಲಿ 60 ದಿನ ರಾತ್ರಿ ವೇಳೆಯಲ್ಲೇ ಶೂಟ್ ಮಾಡಿರುವುದು ವಿಶೇಷ. ಕೆಜಿಎಫ್, ಸಲಾರ್ ಖ್ಯಾತಿಯ ಪ್ರಶಾಂತ್‌ನೀಲ್ ಈ ಚಿತ್ರಕ್ಕೆ ಕಥೆ ಬರೆದಿದ್ದಾರೆ. ಅಲ್ಲದೆ ಅವರು ಈ ಚಿತ್ರಕ್ಕೆ ಸಾಕಷ್ಟು ಸಲಹೆ ಸೂಚನೆಗಳನ್ನು ಸಹ ನೀಡಿದ್ದಾರೆ.

ಭರ್ಜರಿ ಆಕ್ಷನ್ ಜೊತೆಗೆ ಫ್ಯಾಮಿಲಿ ಸೆಂಟಿಮೆಂಟ್, ತಂದೆ ಮಗನ ಬಾಂಧವ್ಯದ ಕಥೆ ಚಿತ್ರದಲ್ಲಿದ್ದು, ಎಲ್ಲ ವರ್ಗದ ಪ್ರೇಕ್ಷಕರನ್ನು ಸೆಳೆಯಲಿದೆ. ಈಗಾಗಲೇ ಯಶಸ್ವೀ ಸಿನಿಮಾಗಳನ್ನು ನಿರ್ಮಿಸಿರುವ ಹೊಂಬಾಳೆ ಫಿಲಂಸ್ ಬಘೀರ ಚಿತ್ರವನ್ನೂ ಸಹ ಅದ್ದೂರಿಯಾಗೇ ನಿರ್ಮಿಸಿರುತ್ತಾರೆಂಬ ನಂಬಿಕೆ ಕನ್ನಡ ಪ್ರೇಕ್ಷಕರಲ್ಲಿದೆ. ಅಲ್ಲದೆ ಚಿತ್ರದ ನಿರ್ಮಾಣಕ್ಕೆ ಮೂರು ವರ್ಷಗಳ ಸುದೀರ್ಘ ಅವಧಿ ತೆಗೆದುಕೊಳ್ಳಲಾಗಿದ್ದು, ಇದು



ಚಿತ್ರತಂಡದ ಶ್ರದ್ಧೆಯನ್ನು ಹೇಳುತ್ತದೆ. ಸಪ್ತಸಾಗರದಾಚೆ ಎಲ್ಲೋ ಮೂಲಕ ತನ್ನದೇ ಅಭಿಮಾನಿ ಬಳಗವನ್ನು ಹುಟ್ಟು ಹಾಕಿಕೊಂಡಿರುವ ನಟಿ ರುಕ್ಮಿಣಿ ವಸಂತ್ ಈ ಚಿತ್ರದ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ.

ಬಘೀರ ಕೇವಲ ಆಕ್ಷನ್, ಸೆಂಟಿಮೆಂಟ್ ಚಿತ್ರವಷ್ಟೇ ಅಲ್ಲ, ಸುಂದರವಾದ ಲವ್‌ಸ್ಟೋರಿ ಕೂಡ ಇದರಲ್ಲಿದೆ. ಅಜನೀಶ್ ಲೋಕನಾಥ್ ಅವರ ಸಂಗೀತ ಈ ಚಿತ್ರದ ಮತ್ತೊಂದು ಹೈಲೈಟ್. ಕನ್ನಡದ ಸಾಕಷ್ಟು ಹಿಟ್ ಸಿನಿಮಾಗಳಿಗೆ ಸಂಗೀತ ನೀಡಿರುವ ಅಜನೀಶ್ ಲೋಕನಾಥ್ 'ಬಘೀರ'ನ ಹಾಡುಗಳನ್ನು ಕಂಪೋಸ್ ಮಾಡಿದ್ದಾರೆ. ಹಾಗೇ ಹಿನ್ನೆಲೆ ಸಂಗೀತವನ್ನು ಒದಗಿಸಿದ್ದಾರೆ. ನಾಯಕನ ತಂದೆ ತಾಯಿಯಾಗಿ ಅಚ್ಯುತ್‌ಕುಮಾರ್, ಸುಧಾರಾಣಿ ಕಾಣಿಸಿಕೊಂಡಿದ್ದಾರೆ. ರಂಗಾಯಣ ರಘು, ಅಲ್ಲದೆ ಖಳನಟ ಗರುಡರಾಮ್ ಡಾನ್ ರಾಣಾ ಪಾತ್ರದಲ್ಲಿ ಅಬ್ಬರಿಸಿದ್ದಾರೆ.

ಟ್ರೇಲರ್‌ನಲ್ಲಿ ತಾರಕೇಶ್ವರನ ಘರ್ಜನೆ!



ತಾರಕೇಶ್ವರ ಈಶ್ವರನ ಮತ್ತೊಂದು ಹೆಸರು. ಈತ ಒಬ್ಬ ರಾಕ್ಷಸನೂ ಹೌದು, ಮಹಾನ್ ದೈವಭಕ್ತನೂ ಹೌದು, ಇದೀಗ ಈತನ ಕಥೆಯನ್ನು ತೆರೆಮೇಲೆ ತರಲು ಹೊರಟಿರುವವರು ನಟ, ನಿರ್ಮಾಪಕ, ಗಣೇಶ್‌ರಾವ್ ಕೇಸರ್‌ಕರ್. ಜಿಆರ್ ಫಿಲಂಸ್ ನಿರ್ಮಾಣದ ಭಕ್ತಿಪ್ರಧಾನ ಕಥಾಹಂದರ ಇರುವ ಈ ಚಿತ್ರದ ಹೆಸರು ತಾರಕೇಶ್ವರ. ಪುರುಷೋತ್ತಮ್ ಓಂಕಾರ್ ಚಿತ್ರಕಥೆ, ಸಂಭಾಷಣೆ ಬರೆದು ಆಕ್ಷನ್ ಕಟ್ ಹೇಳಿರುವ ಈ ಚಿತ್ರದಲ್ಲಿ ಗಣೇಶ್ ರಾವ್ ಅವರೇ ತಾರಕಾಸುರನಾಗಿ ಕಾಣಿಸಿಕೊಂಡಿದ್ದಾರೆ, ಮೈಥಲಾಜಿಕಲ್ ಕಥಾಹಂದರ ಹೊಂದಿರುವ ಈ ಚಿತ್ರದ ಟ್ರೇಲರ್‌ನ್ನು ಇತ್ತೀಚೆಗಷ್ಟೇ ವೇದಾಂತಾ ಚಾರ್ಯ ಶ್ರೀಮಂಜುನಾಥ ಭಾರತೀ ಸ್ವಾಮಿಗಳು ಬಿಡುಗಡೆಗೊಳಿಸಿ ಶುಭ ಹಾರೈಸಿದರು. ಗಣೇಶ್‌ರಾವ್ ಕೇಸರಕರ್ ಅವರ 333ನೇ ಚಿತ್ರ ಇದಾಗಿದೆ.

ಚಿತ್ರದ ಕುರಿತಂತೆ ಮಾತನಾಡಿದ ಗಣೇಶರಾವ್ ಕೇಸರಕರ್ ಹಣಕ್ಕೆ ಪ್ರಾಮುಖ್ಯತೆ ಕೊಡದೆ, ಉತ್ತಮ ಪೌರಾಣಿಕ ಚಿತ್ರವೊಂದನ್ನು ಕನ್ನಡಿಗರಿಗೆ ನೀಡಬೇಕೆಂದು ಈ ಸಿನಿಮಾ ನಿರ್ಮಿಸಿದ್ದೇನೆ. ಎಲ್ಲರೂ ಸೇರಿ ಬಹಳ ಶ್ರದ್ಧೆಯಿಂದ ಚಿತ್ರವನ್ನು ಮಾಡಿದ್ದೇವೆ. ಪೌರಾಣಿಕ ಸಿನಿಮಾ ಮಾಡೋದು ಅಷ್ಟು ಸುಲಭವಲ್ಲ. ಅದರಲ್ಲೂ ಲೊಕೇಶನ್‌ಗಳಲ್ಲಿ ಶೂಟ್ ಮಾಡೋದು ತುಂಬಾ ಕಷ್ಟ, ಲೈಟಿನ ಕಂಭ, ಮೊಬೈಲ್ ಟವರ್ ಕಾಣದಂತೆ ನೋಡಿಕೊಳ್ಳಬೇಕು. ನಿರ್ಮಾಪಕರ ಕಷ್ಟ ಏನೆಂದು ನನಗೀಗ ಅರ್ಥವಾಗಿದೆ ಎಂದರು.

ನಿರ್ದೇಶಕ ಪುರುಷೋತ್ತಮ್ ಮಾತನಾಡುತ್ತ, ಚಿತ್ರವೊಂದರ ಶೂಟಿಂಗ್ ಸಮಯದಲ್ಲಿ ಗಣೇಶ್‌ರಾವ್ ಅವರಿಗೆ ತಾರಕೇಶ್ವರನ ಬಗ್ಗೆ ಒನ್‌ಲೈನ್ ಕಥೆ ಹೇಳಿದ್ದೆ. ಶಿವಪುರಾಣದಲ್ಲಿ ತಾರಕಾಸುರ ಅಸುರನೇ ಆದರೂ, ತಂದೆಯನ್ನು ಕೊಂದವನ ಮೇಲೆ ಸೇಡು ತೀರಿಸಿಕೊಳ್ಳಲು ತಪಸ್ಸು ಮಾಡಿ ತನಗೆ ಸಾವೇ ಬರದಂತೆ ಬ್ರಹ್ಮನಿಂದ ವರ ಪಡೆದುಕೊಳ್ಳುತ್ತಾನೆ. ಮುಂದೆ ಆತ ಯಾವ ರೀತಿ ಹೋರಾಡುತ್ತಾನೆ ಎಂಬುದನ್ನು ಚಿತ್ರದಲ್ಲಿ ಹೇಳಿದ್ದೇವೆ. ಸ್ಕಂದ ಪುರಾಣವನ್ನು ಆಧರಿಸಿ ತಾರಕಾಸುರ ಚಿತ್ರವನ್ನು ನಿರ್ಮಿಸಿದ್ದೇವೆ. ನನ್ನ ನಿರ್ದೇಶನದ 33ನೇ ಚಿತ್ರವಿದು. ಸುಬ್ರಮಣ್ಯನ ಜನನ ಹೇಗಾಯ್ತು, ತಾರಕಾಸುರನ ಅಂತ್ಯ ಹೇಗಾಯಿತು ಎಂಬುದನ್ನು ಸಿನಿಮಾದಲ್ಲಿ ತೋರಿಸಿದ್ದೇವೆ, ಸುಬ್ರಮಣ್ಯನಾಗಿ ಟೆಕ್ವಾಡೋ ಗರ್ಲ್ ಖ್ಯಾತಿಯ ರುತುಸ್ಪರ್ಷ ನಟಿಸಿದ್ದಾರೆ, ರೂಪಾಲಿ ಅವರು ಪಾರ್ವತಿಯಾಗಿ ಕಾಣಿಸಿಕೊಂಡಿದ್ದಾರೆ, ಗಣೇಶ್‌ರಾವ್ ಕೇಸರಕರ್ ಅವರ ಪುತ್ರ ಪ್ರಜ್ವಲ್ ಇಂದ್ರನಾಗಿ ಬಣ್ಣ ಹಚ್ಚಿದ್ದಾರೆ. ಬೆಂಗಳೂರು, ಶ್ರೀರಂಗಪಟ್ಟಣ, ಮೈಸೂರು ಸುತ್ತಮುತ್ತ ಚಿತ್ರದ ಚಿತ್ರೀಕರಣ ನಡೆಸಿದ್ದೇವೆ ಎಂದರು.

ಮಂಜುನಾಥ ಭಾರತೀ ಸ್ವಾಮಿಗಳು ಮಾತನಾಡುತ್ತ ಇತಿಹಾಸಕ್ಕೂ, ಪುರಾಣಕ್ಕೂ ತುಂಬಾ ವ್ಯತ್ಯಾಸವಿದೆ. ಪೌರಾಣಿಕ ಸಿನಿಮಾಗಳ ಮೂಲಕ ಜನರು ನಮ್ಮ ಪುರಾಣದ ಬಗ್ಗೆ ತಿಳಿದುಕೊಳ್ಳಬಹುದಾಗಿದೆ. ಮಕ್ಕಳ ಮೇಲೆ ಇದರ ಪರಿಣಾಮ ಹೆಚ್ಚಿರುತ್ತದೆ. ತಾರಕಾಸುರ ಶಿವಭಕ್ತ ಅಸುರ, ಆದರೂ ಶಿವನ ಮೇಲೆ ಅಪಾರ ಭಕ್ತಿ ಇಟ್ಟುಕೊಂಡಿರುತ್ತಾನೆ ಎಂದರು.




ಅರೆಮಲೆನಾಡಿನಲ್ಲಿ ವಾಸಿಸುವ ವಿವಿಧ ಸಂಸ್ಕೃತಿಯ ಜನರ ಸುತ್ತ ನಡೆಯುವ ಘಟನೆ ಜಂಗಲ್ ಮಂಗಲ್ ತೆರೆಗೆ ಸಿದ್ಧ

ಸಿನಿಪದಬಂಧ-549



ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ____________

ವಿಳಾಸ ____________

ದೂರವಾಣಿ ಸಂಖ್ಯೆ ____________

ಎಡದಿಂದ ಬಲಕ್ಕೆ

1.ರಾಜೇಶ್-ಕಲ್ಪನಾ ಅಭಿನಯದಿ ನೆನಪಿನಲ್ಲುಳಿಯುವ ಹಬ್ಬ!	8
6.ಸಣ್ಣ ಪಟಾಕಿಯ ಸದ್ದು ಹೀಗಲ್ಲವೇ	4
8.ಗಗನದಲ್ಲಿ ಉರಿದ ಹಣತೆ	5
9.ಅನುಶ್ರೀ ಅಭಿನಯದಲ್ಲಿ ಕಿಚ್ಚು ಹಚ್ಚುವ ಪೆಟ್ಟಿಗೆ	4
10.ಚಿತ್ರವೊಂದು ಪಟಾಕಿಗೆ ಹೆಸರುವಾಸಿಯಾಗಿರುವ ಊರನ್ನು ನೆನಪಿಸುತ್ತಿದೆ	4
11.ಪ್ರಭೆಗೆ ಹೀಗೊಂದು ಪದ	3
12.ಕಿಲಾಡಿಯಲ್ಲಿ ಬೆಂಕಿಯ ಕಣವಿದೆ	2
13.ಡಾ.ರಾಜ್‌ಕುಮಾರ್ ಅಭಿನಯದಲ್ಲಿ ಮೂಡಿದ ನೂತನ ಪ್ರಭೆ	5
14.ಚಂದ್ರಶೇಖರ್-ಚಂದ್ರಕಲಾ ಅಭಿನಯದ ಗೃಹದಲ್ಲಿನ ಪ್ರಭೆ	5
15.ಹರಕೆಯ _ _	2

ಮೇಲಿನಿಂದ ಕೆಳಕ್ಕೆ

1.ಒಂದು ಬಗೆಯ ಸುಡು ಮದ್ದು	3
2.ನಂಜುಂಡಿ ಚಿತ್ರದ ಈ ಹಾಡು ದೀಪಾವಳಿಗೆ ಸೂಕ್ತ	11
3.ಅನಂತ್ ನಾಗ್ ಅಭಿನಯದ ಬಣ್ಣದ ಗಾಲಿ	4
4.ಪಟಾಕಿಯ ಜೋರಾದ ಅಬ್ಬರ	3
5.ಹೊಸ ಜೀವನ ಚಿತ್ರದ ನಾಯಕಿ	3
7.ಗಣೇಶ್ ಸಿಡಿಸಿದ ಮದ್ದು	3
8.ಸೃಜನ್ ಲೋಕೇಶ್ ಸಿಡಿಸಿದ ಗಜ ಗಾತ್ರದ ಮದ್ದು	5
11.ಸಿನಿ ಪದಬಂಧವಿರುವ ಪುಟದಲ್ಲಿ ರಜತ ಪ್ರಭೆಯಿದೆ	5
13.ಪಟಾಕಿಯಿಂದ ಉಂಟಾದ ಧೂಮ	2

ಸಿನಿ ಪದಬಂಧ 548ರ ಉತ್ತರ

ಮೈ	ಸೂ	ರು	ಮ	ಲ್ಲಿ	ಗೆ		ಸ	ಪ್ತ	ಪ	ದಿ
ಡಿ			ಹಾ		ದ್ದ		ವ			ಲ್
ಯ	ಮ		ನ				ತಿ		ಪಾ	ಪ
ರ್		ಇಂ	ದಿ	ನ	ರಾ	ಮಾ	ಯ	ಣ		ಸಂ
ಟ್ರೈ		ದ್ರ			ಜ		ನೆ			ದ್
ಗ	ಜಾ	ನ	ನ		ನ	ಮ್ಮೂ	ರ	ರಾ	ಜ	
ರ್		ಗೆ		ಧೀ	ರ		ಳು		ನು	
		ದ್ದ			ಸಿಂ			ಸ	ಮ	ರ
ಉ	ಗ್ರ	ನ	ರ	ಸಿಂ	ಹ		ರ		ದ	
ಷಾ		ರೇಂ					ವ		ಜೋ	
	ಇಂ	ದ್ರ	ಜಾ		ಮ	ರ	ಳಿ	ಗೂ	ಡಿ	ಗೆ

ವಿಜೇತರು: ನಿಶ್ಮಿತ ಬಿ. D/o ಬಲರಾಮ್ ಹೆಚ್.ಎಸ್., #.ಎಂಐಜಿ 477, ಒಂದನೇ ಹಂತ, ಶಾರದಾದೇವಿನಗರ, ಮೈಸೂರು- 570022.

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು–570 015

ಶ್ರೀರಾಮ ಸಕ್ಕರೆ ಕಾರ್ಖಾನೆ ನಿರಾಣಿ ಶುಗರ್ಸ್‌ಗೆ ಗುತ್ತಿಗೆ

ಸರ್ಕಾರದಿಂದ ಅನುಮೋದನೆ: ಶಾಸಕ ರವಿಶಂಕರ್

ಕೆ.ಆರ್.ನಗರ, ಅ.31– ಮೈಸೂರು ಜಿಲ್ಲೆಯ ಸಾಲಿಗ್ರಾಮ ತಾಲೂಕಿನ ಚುಂಚನಕಟ್ಟೆ ಶ್ರೀ ರಾಮ ಸಹಕಾರ ಸಕ್ಕರೆ ಕಾರ್ಖಾನೆಯನ್ನು 40 ವರ್ಷಗಳ ಅವಧಿಗೆ ಬಾಗಲಕೋಟೆ ಜಿಲ್ಲೆಯ ಮುಧೋಳದ ನಿರಾಣಿ ಶುಗರ್ಸ್‌ನವರಿಗೆ ಎಲ್‌ಆರ್‌ಒಟಿ ಆಧಾರದ ಮೇಲೆ ಯಥಾಸ್ಥಿತಿಯಲ್ಲಿ ಗುತ್ತಿಗೆ ನೀಡಲು ಸರ್ಕಾರ ಅನುಮೋದನೆ ನೀಡಿದೆ ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು.

ಎರಡು ವರ್ಷಗಳ ಹಿಂದೆ ಕಾರ್ಖಾನೆಯನ್ನು ಗುತ್ತಿಗೆಗೆ ಪಡೆದಿದ್ದ ನಿರಾಣಿ ಶುಗರ್ಸ್‌ನವರು ಕಾಲಮಿತಿಯೊಳಗೆ ನೋಂದಣಿ ಮಾಡಿಕೊಳ್ಳದ್ದರಿಂದ ವಿಳಂಬದ ಅವಧಿಯನ್ನು ಮನ್ನಾ ಮಾಡಿ ಗುತ್ತಿಗೆ ಒಪ್ಪಂದವನ್ನು ಸಕ್ಷಮ ಪ್ರಾಧಿಕಾರದಲ್ಲಿ ನೋಂದಾಯಿಸಲು ಅನುಮತಿ ನೀಡುವಂತೆ ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರು ಸಕ್ಕರೆ ಮತ್ತು ಕಬ್ಬು ಅಭಿವೃದ್ಧಿ ಆಯುಕ್ತರಿಗೆ ವರದಿ ನೀಡಿದ ಹಿನ್ನೆಲೆಯಲ್ಲಿ ಸರ್ಕಾರ ಈ ಕ್ರಮ ಕೈಗೊಂಡಿದೆ ಎಂದು ತಿಳಿಸಿದ್ದಾರೆ. ಇದರ ಜತೆಗೆ ನಾನು ಕಳೆದ ಬೆಳಗಾವಿ ಅಧಿವೇಶನದಲ್ಲಿ ಸದನದಲ್ಲಿ ಸಕ್ಕರೆ ಸಚಿವರಿಗೆ ಪ್ರಶ್ನೆ ಕೇಳುವ ಮೂಲಕ ಗಮನ ಸೆಳೆದಾಗ ಅವರು ಸಕಾರಾತ್ಮಕವಾಗಿ ಸ್ಪಂದಿಸಿ ಸಮಸ್ಯೆಯನ್ನು ಪರಿಹರಿಸುವ ಉತ್ತರ ನೀಡಿದ್ದರು. ಜತೆಗೆ ಈ



ಡಿ.ರವಿಶಂಕರ್



ಸಂಬಂಧ 05.01.2024ರಲ್ಲಿ ಸರ್ಕಾರಕ್ಕೆ ಪತ್ರ ಬರೆಯುವುದರೊಂದಿಗೆ ಮುಖ್ಯಮಂತ್ರಿಗಳು ಮತ್ತು ಸಕ್ಕರೆ ಸಚಿವರನ್ನು ಹತ್ತಾರು ಬಾರಿ ಭೇಟಿ ಮಾಡಿ ಕಬ್ಬು ಬೆಳೆಗಾರರ ಪರವಾಗಿ ಕೋರಿಕೆ ಸಲ್ಲಿಸಿದ ಹಿನ್ನೆಲೆಯಲ್ಲಿ ಸರ್ಕಾರ ಈ ತೀರ್ಮಾನ ಕೈಗೊಂಡಿದೆ ಎಂದು ಮಾಹಿತಿ ನೀಡಿದರು.

ಕಾರ್ಖಾನೆ ಗುತ್ತಿಗೆ ಪಡೆದುಕೊಳ್ಳಲು ನೋಂದಣಿ ಮಾಡುವ ಸಂಬಂಧ ಈಗಾಗಲೇ ನಾನು ನಿರಾಣಿ ಶುಗರ್ಸ್ ಮಾಲೀಕರ ಜತೆಗೆ ಕೂಲಂಕಷವಾಗಿ ಚರ್ಚೆ ಮಾಡಿದ್ದು, ಕಾಲಮಿತಿಯೊಳಗೆ ಎಲ್ಲಾ ಕಾನೂನಾತ್ಮಕ ಪ್ರಕ್ರಿಯೆ ಮುಗಿಸಿ ತ್ವರಿತವಾಗಿ ಕಬ್ಬು ಅರೆಯುವ ಕಾರ್ಯ ಆರಂಭಿಸುವಂತೆ ತಿಳಿಸಿದ್ದು, ಭವಿಷ್ಯದಲ್ಲಿ ಈ ಭಾಗದ ರೈತರ ಹಿತ ಕಾಯಲು ಬದ್ಧನಾಗಿದ್ದೇನೆ ಎಂದು ನುಡಿದರು.

ಈ ಹಿಂದೆ 12 ವರ್ಷಗಳ ಕಾಲ ಹತ್ತು ಹಲವು ಕಾರಣಗಳಿಂದ ಕಾರ್ಖಾನೆ ಕಬ್ಬು ಅರೆಯುವ ಕಾರ್ಯ ಸ್ಥಗಿತಗೊಳಿಸಿದ ಕಾರಣ 2020–21ರಲ್ಲಿ 40 ವರ್ಷ ಅವಧಿಗೆ ಖಾಸಗಿಯವರಿಗೆ ಗುತ್ತಿಗೆ ನೀಡಲು ಸರ್ಕಾರ ಅನುಮೋದನೆ ನೀಡಿತ್ತು. ಆದರೆ ಯಾವುದೇ ಕಾನೂನಾತ್ಮಕ ಪ್ರಕ್ರಿಯೆಯನ್ನು ಪೂರ್ಣಗೊಳಿಸದೆ, ನೋಂದಣಿಯನ್ನು ಮಾಡಿಕೊಳ್ಳದೆ ಆತುರಾತುರವಾಗಿ ಕಾರ್ಖಾನೆ ಪ್ರಾರಂಭಿಸಿ ಪುನಃ ಮುಚ್ಚುವ ಸ್ಥಿತಿಗೆ ತರಲಾಗಿತ್ತು. ಇದನ್ನು ಅರಿತ ನಾನು ಈಗ ಕಬ್ಬು ಬೆಳೆಗಾರರಿಗೆ ಮತ್ತು ರೈತರಿಗೆ ಅನುಕೂಲ ಕಲ್ಪಿಸಲು ಶಾಸಕನಾಗಿ ಜವಾಬ್ದಾರಿಯಿಂದ ನಡೆದುಕೊಂಡಿದ್ದೇನೆ ಎಂದರು.

ಶ್ರೀರಾಮ ಸಹಕಾರ ಸಕ್ಕರೆ ಕಾರ್ಖಾನೆಯನ್ನು ನಿರಾಣಿ ಶುಗರ್ಸ್‌ನವರಿಗೆ 40 ವರ್ಷಗಳ ಅವಧಿಗೆ ಗುತ್ತಿಗೆ ನೀಡಲು ಅನುಮತಿ ಮತ್ತು ಅನುಮೋದನೆ ನೀಡಿ ಈ ಭಾಗದ ರೈತರಿಗೆ ಅನುಕೂಲ ಕಲ್ಪಿಸಿ ಕ್ಷೇತ್ರದ ಆರ್ಥಿಕಾಭಿವೃದ್ಧಿಗೆ ಕಾರಣರಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರು, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಕ್ಕರೆ ಸಚಿವ ಶಿವಾನಂದ ಪಾಟೀಲ್ ಅವರಿಗೆ ಕ್ಷೇತ್ರದ ಜನತೆಯ ಪರವಾಗಿ ಅಭಿನಂದನೆ ಸಲ್ಲಿಸುವುದಾಗಿ ಡಿ.ರವಿಶಂಕರ್ ಹೇಳಿದರು.

ರಾಜೇಶ್‌ಗೌಡರಿಗೆ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ

ಬನ್ನೂರು, ಅ.31– ಸಮಾಜ ಸೇವಾ ಕಾರ್ಯದಲ್ಲಿ ತನ್ನನ್ನು ತೊಡಗಿಸಿಕೊಂಡು ವಿವಿಧ ಸೇವಾ ಕಾರ್ಯಗಳನ್ನು ನಿರ್ವಹಿಸುತ್ತ, ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವ ಕಾರ್ಯವನ್ನು ನಿರ್ವಹಿಸುತ್ತಿರುವ ತುರಗನೂರು ಗ್ರಾಮದ ಟಿ.ಸಿ. ರಾಜೇಶ್ ಗೌಡರು 69ನೇ ಕನ್ನಡ ರಾಜ್ಯೋತ್ಸವದ ಅಂಗವಾಗಿ ಮೈಸೂರು ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.



ವಕೀಲರಾಗಿರುವ ಟಿ.ಸಿ. ರಾಜೇಶ್‌ಗೌಡ ಗ್ರಾಮೀಣ ಪ್ರದೇಶದ ಮಕ್ಕಳಿಗೆ ನಗರ ಪ್ರದೇಶದಲ್ಲಿ ದೊರೆಯುವ ಶಿಕ್ಷಣದ ವ್ಯವಸ್ಥೆಯನ್ನು ಕಲ್ಪಿಸಬೇಕೆನ್ನುವ ಕನಸಿನೊಂದಿಗೆ ತನ್ನೂರಿನಲ್ಲಿಯೇ ಎನ್‌ಸಿಆರ್ ಶಿಕ್ಷಣ ಸಂಸ್ಥೆಯನ್ನು ತೆರೆದು ಗ್ರಾಮೀಣ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಇಂಗ್ಲೀಷ್ ಶಿಕ್ಷಣವನ್ನು ಕೊಡುವಲ್ಲಿಯೂ ಯಶಸ್ವಿಯಾಗಿದ್ದು, ಇಲ್ಲಿನ ವಿದ್ಯಾರ್ಥಿಗಳು ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮ, ಪ್ರತಿಭಾ ಕಾರಂಜಿಯಂತಹ ಸ್ಪರ್ಧೆಗಳಲ್ಲಿ ಹಾಗೂ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶವನ್ನು ಪಡೆಯುತ್ತಿರುವುದು ಇವರ ಸಾಧನೆಗೆ ಹಿಡಿದ ಕನ್ನಡಿಯಾಗಿದೆ.

ವಿವಿಧ ಸೇವಾ ಕಾರ್ಯಗಳನ್ನು ಹಮ್ಮಿಕೊಳ್ಳುತ್ತ ಸಾಮಾಜಿಕ ಬದುಕಿನಲ್ಲಿಯೂ ಉತ್ತಮ ಕಾರ್ಯವನ್ನು ನಿರ್ವಹಿಸುತ್ತಿರುವ ಇವರು ರೋಟರಿ ಸಂಸ್ಥೆಯಲ್ಲಿಯೂ ಕಾರ್ಯನಿರ್ವಹಿಸುತ್ತಿದ್ದಾರೆ.

ಇವರ ಸಾಮಾಜಿಕ ಕಾರ್ಯವನ್ನು ಗುರುತಿಸಿ ಮೈಸೂರು ಜಿಲ್ಲಾ ಕನ್ನಡ ರಾಜ್ಯೋತ್ಸವದ ಪ್ರಶಸ್ತಿಗೆ ಆಯ್ಕೆ ಮಾಡಿದ್ದು, ಎನ್‌ಸಿಆರ್ ಶಿಕ್ಷಕ ವೃಂದದವರು, ತುರಗನೂರಿನ ಗ್ರಾಮಸ್ಥರು, ಮುಖಂಡರು, ವಿವಿಧ ಸಂಘಸಂಸ್ಥೆಯ ಮುಖಂಡರು, ರೋಟರಿ ಸಂಸ್ಥೆಯ ಅಧ್ಯಕ್ಷರು, ಪದಾಧಿಕಾರಿಗಳು ಇವರನ್ನು ಅಭಿನಂದಿಸಿದ್ದಾರೆ.

ಸಂಕಷ್ಟದಲ್ಲಿರುವ 17 ಕುಟುಂಬಗಳಿಗೆ ಪುನರ್ವಸತಿ

ಕಬಿನಿ ಹಿನ್ನೀರಿನಿಂದ ಜೀವನ ನಿರ್ವಹಿಸಲು ಪರದಾಡುತ್ತಿದ್ದ ಕುಟುಂಬಗಳು

ಹೆಚ್.ಡಿ.ಕೋಟೆ, ಅ.31– ಹಲವಾರು ವರ್ಷಗಳಿಂದ ಕಬಿನಿ ಹಿನ್ನೀರಿನಿಂದ ಜಲಾವೃತಗೊಂಡು ಜೀವನ ನಡೆಸಲು ಕಷ್ಟಪಡುತ್ತಿದ್ದ 17 ಕುಟುಂಬಗಳನ್ನು ಸೂಕ್ತ ಸ್ಥಳಕ್ಕೆ ಸ್ಥಳಾಂತರಿಸಿ ಪುನರ್ವಸತಿ ಕಲ್ಪಿಸಲು ತಾಲೂಕು ಆಡಳಿತ ಮುಂದಾಗಿದೆ.

ತಾಲೂಕಿನ ಅಂತರಸಂತೆ ಹೋಬಳಿಯ ಹೊಸಹೊಳಲು ಗ್ರಾಮದಲ್ಲಿ ಹಲವಾರು ವರ್ಷಗಳಿಂದ ಮಳೆಗಾಲದಲ್ಲಿ ಮತ್ತು ಕಬಿನಿ, ತಾರಕ ಜಲಾಶಯಗಳು ಭರ್ತಿಯಾದಾಗ ಈ ಗ್ರಾಮದ ತಗ್ಗು ಪ್ರದೇಶದ ಸುಮಾರು 17 ಕುಟುಂಬಗಳ ಮನೆಗಳಿಗೆ ನೀರು ಹರಿದು ಸಮಸ್ಯೆ ಉಂಟಾಗುತ್ತಿತ್ತು.

ಇದು ಪ್ರತಿ ವರ್ಷವೂ ಪುನರಾವರ್ತನೆ ಆಗುತ್ತಿತ್ತು. ಜತೆಗೆ ಮನೆಯ ಗೋಡೆಗಳು ಶೀತದಿಂದ ಬಿದ್ದುಹೋಗಿವೆ. ಈ ಹಿನ್ನೆಲೆಯಲ್ಲಿ ತಹಸೀಲ್ದಾರ್ ಶ್ರೀನಿವಾಸ್, ತಾಪಂ ಇಒ ಧರಣೇಶ್, ಕಬಿನಿ ಎಇ ಸಿ.ಗಣೇಶ್ ಸ್ಥಳಕ್ಕೆ ಭೇಟಿ ನೀಡಿ ವಾಸ್ತವ ಸ್ಥಿತಿಯನ್ನು ಪರಿಶೀಲಿಸಿದರು.

ಈ ವೇಳೆ ತಹಸೀಲ್ದಾರ್ ಶ್ರೀನಿವಾಸ್ ಮಾತನಾಡಿ, ಈ ಜಾಗದಲ್ಲಿ ಜನರು ಮನೆ ಕಟ್ಟಿರುವುದು ಯೋಗ್ಯವಲ್ಲದ ಸ್ಥಳವಾಗಿದೆ. ಇದು ಅತ್ಯಂತ ತಗ್ಗು ಪ್ರದೇಶವಾಗಿದ್ದು, ಮಳೆಗಾಲದಲ್ಲಿ ನೀರು ತುಂಬುತ್ತಿದ್ದು, ಇದರಿಂದ ಈ ಪ್ರದೇಶದಲ್ಲಿರುವ ಜನರಿಗೆ ಜೀವನ ನಡೆಸಲು ಕಷ್ಟವಾಗುತ್ತಿದೆ. ಆದುದರಿಂದ ಈ ಭಾಗದ ಜನರಿಗೆ ಬದಲಿ ಜಾಗವನ್ನು, ಗುರುತಿಸಿ ಸ್ಥಳಾಂತರ ಮಾಡಲು ಜಂಟಿಯಾಗಿ, ಸಮಗ್ರ ವರದಿಯನ್ನು ಹುಣಸೂರು ಉಪ ವಿಭಾಗಾಧಿಕಾರಿಗಳಿಗೆ ಸಲ್ಲಿಸುತ್ತೇವೆ ಎಂದು ತಿಳಿಸಿದರು. ಬಳಿಕ ತಾಪಂ ಇಒ ಧರಣೇಶ್ ಮಾತನಾಡಿ, ಈ ಜಾಗವನ್ನು ಗ್ರಾಮ ಪಂಚಾಯಿತಿ ಅಧೀನಕ್ಕೆ ತೆಗೆದುಕೊಂಡು ಈ 17 ಕುಟುಂಬದವರಿಗೆ ಬದಲಿ ಸರ್ಕಾರಿ ಜಾಗವನ್ನು ಗುರುತಿಸಿ ಕೊಡಲಾಗುವುದು ಎಂದು ತಿಳಿಸಿದರು.



ಹೆಚ್.ಡಿ.ಕೋಟೆ ತಾಲೂಕಿನ ಅಂತರಸಂತೆ ಹೋಬಳಿಯ ಹೊಸಹೊಳಲು ಗ್ರಾಮದಲ್ಲಿ ಹಲವಾರು ವರ್ಷಗಳಿಂದ ಮಳೆಗಾಲದಲ್ಲಿ ಮತ್ತು ಕಬಿನಿ, ತಾರಕ ಜಲಾಶಯಗಳು ಭರ್ತಿಯಾದಾಗ ಈ ಗ್ರಾಮದ ತಗ್ಗು ಪ್ರದೇಶದ ಸುಮಾರು 17 ಕುಟುಂಬಗಳ ಮನೆಗಳಿಗೆ ನೀರು ಹರಿದು ಸಮಸ್ಯೆ ಉಂಟಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ತಹಸೀಲ್ದಾರ್ ಶ್ರೀನಿವಾಸ್ ಭೇಟಿ ನೀಡಿರುವುದು.

ಮಳೆ ಹಾನಿಯಿಂದ ಮನೆ ಕಳೆದುಕೊಂಡ ರಮೇಶ್ ಮಾತನಾಡಿ, ನಮ್ಮನ್ನು ಈ ಜಾಗದಿಂದ ಸ್ಥಳಾಂತರ ಮಾಡಿಸಬೇಕು. 2–3 ತಿಂಗಳು ಕೂಡ ನಾವು ಇಲ್ಲಿ ಜೀವನ ಮಾಡಲು ಆಗುತ್ತಿಲ್ಲ. ನಮ್ಮ ಮಕ್ಕಳು ಶಾಲೆಗೆ ಹೋಗಲು ಆಗುತ್ತಿಲ್ಲ. ನಮಗೆ ಸಹಾಯ ಮಾಡಬೇಕು ಎಂದು ಮನವಿ ಮಾಡಿದರು. ಪಿಡಿಒ ರಮೇಶ್, ಗ್ರಾಮ ಲೆಕ್ಕಾಧಿಕಾರಿ ಪೂಜಾ, ನಾಗರಾಜ್, ಲಿಂಗರಾಜ್ ಮತ್ತಿತರರು ಹಾಜರಿದ್ದರು.

ಹುಣಸೂರು ನಗರಸಭೆಯ ಇಂಜಿನಿಯರ್ ಸೌಮ್ಯ ಅಧಿಕಾರ ಸ್ವೀಕಾರ



ಹುಣಸೂರು, ಅ.31– ನಗರಸಭೆಯ ಪರಿಸರ ವಿಭಾಗದ ನೂತನ ಸಹಾಯಕ ಎಕ್ಸಿಕ್ಯೂಟಿವ್ ಇಂಜಿನಿಯರ್ ಆಗಿ ಸೌಮ್ಯ ಬುಧವಾರ ಅಧಿಕಾರ ವಹಿಸಿಕೊಂಡಿದ್ದಾರೆ.

ಈ ಹಿಂದೆ ಪರಿಸರ ವಿಭಾಗದಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರಾಗಿ ಕಾರ್ಯ ನಿರ್ವಹಿಸುತ್ತಿದ್ದ ಶ್ರೀಮತಿ ರೂಪ ಅವರು ವರ್ಗಾವಣೆಯಾಗಿದ್ದು, ಆ ಸ್ಥಾನಕ್ಕೆ ಮಡಿಕೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸೌಮ್ಯ ಅವರನ್ನು ವರ್ಗಾವಣೆ ಮಾಡಲಾಗಿದೆ.

ಇಂದು ಹುಣಸೂರಲ್ಲಿ ಕನ್ನಡ ರಾಜ್ಯೋತ್ಸವ

ಹುಣಸೂರು, ಅ.31– 69 ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ನಾಳೆ (ಶುಕ್ರವಾರ) ಬೆಳಗ್ಗೆ 9 ಗಂಟೆಗೆ ನಗರದ ಮುನೇಶ್ವರ ಕಾವಲ್ ಮೈದಾನದಲ್ಲಿ ತಾಲೂಕು ಆಡಳಿತ ಮತ್ತು ತಾಪಂ ವತಿಯಿಂದ ಆಯೋಜಿಸಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮತ್ತು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ರಾಜ್ಯ ಉಪಾಧ್ಯಕ್ಷೆ ಡಾ.ಪುಷ್ಪ ಅಮರ್ ನಾಥ್ ರವರ ಉಪಸ್ಥಿತಿಯಲ್ಲಿ ನಡೆಯಲಿದೆ.

ಶಾಸಕ ಜಿ.ಡಿ.ಹರೀಶ್‌ಗೌಡರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ನಾಡ ಧ್ವಜಾರೋಹಣ ಮಾಡಲಿದ್ದು, ಮುಖ್ಯ ಅತಿಥಿಗಳಾಗಿ ಸಂಸದ ಯದುವೀರ್, ವಿಧಾನಪರಿಷತ್ ಸದಸ್ಯರಾದ ಹೆಚ್.ವಿಶ್ವನಾಥ್, ಡಾ. ತಿಮ್ಮಯ್ಯ, ಮಧು.ಜಿ.ಮಾದೇಗೌಡ, ಡಾ. ಯತೀಂದ್ರ ಕೆ. ವಿವೇಕಾನಂದ ಇತರರು ಭಾಗವಹಿಸಲಿದ್ದಾರೆ.

ಮುಜರಾಯಿ ಇಲಾಖೆಯಿಂದ ದೇವಸ್ಥಾನ ನಿರ್ವಹಣೆಗೆ ಮನವಿ

ನಂಜನಗೂಡು, ಅ.31– ರಾಜ್ಯ ಸರಕಾರದ ಮುಜರಾಯಿ ಇಲಾಖೆಗೆ ಸೇರಿದ ತಾಲೂಕಿನ ಕಳಲೆ ಗೇಟ್‌ನಲ್ಲಿರುವ ಶ್ರೀ ಕೈವಲ್ಯದೇವಿ ದೇವಸ್ಥಾನದಲ್ಲಿ ದೇವರ ಹೆಸರಿನಲ್ಲಿ ಖಾಸಗಿ ವ್ಯಕ್ತಿಗಳು ರಚಿಸಿರುವ ಟ್ರಸ್ಟ್ ಅನ್ನು ರದ್ದುಪಡಿಸಿ ಮುಜರಾಯಿ ಇಲಾಖೆಯಿಂದಲೇ ದೇವಸ್ಥಾನ ನಿರ್ವಹಣೆ ಮಾಡಬೇಕು ಎಂದು ಒತ್ತಾಯಿಸಿ ಕಳಲೆ ಗ್ರಾಮಸ್ಥರು ಅಪರ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭ ಮಾತನಾಡಿದ ಸ್ಥಳೀಯ ಗ್ರಾಮಸ್ಥರು, ಕಳಲೆ ಶ್ರೀ ಲಕ್ಷ್ಮಿಕಾಂತ ಸ್ವಾಮಿ ದೇವಸ್ಥಾನಕ್ಕೆ ಸೇರಿದ 7 ದೇವಾಲಯಗಳು ಮುಜರಾಯಿ ಇಲಾಖೆಗೆ ಸೇರಿದೆ. ಆದರೆ ಶ್ರೀ ಕೈವಲ್ಯದೇವಿ ದೇವಸ್ಥಾನದಲ್ಲಿ ಖಾಸಗಿಯವರು ಟ್ರಸ್ಟ್ ಮೂಲಕ ನಿರ್ವಹಣೆ ಮಾಡುತ್ತಿದ್ದು, ಈ ಹಿಂದೆ 2015ರಲ್ಲಿ ಈ ದೇವಸ್ಥಾನವನ್ನು ಪಾರುಪತ್ತೆದಾರರ ಉಸ್ತುವಾರಿಗೆ ನೀಡಲು ತಹಶೀಲ್ದಾರ್ ಸೂಚನೆ ನೀಡಿದ್ದರು. ಆದರೆ ಈ ವೇಳೆ ಟ್ರಸ್ಟ್‌ನವರು ಗಲಾಟೆ ಮಾಡಿ ಒಂದು ತಿಂಗಳ ಕಾಲಾವಕಾಶ ಪಡೆದುಕೊಂಡಿದ್ದರಾದರೂ ಈವರೆಗೂ ಪಾರುಪತ್ತೆದಾರರ ಉಸ್ತುವಾರಿಗೆ ಅವಕಾಶ ನೀಡಿಲ್ಲ. ಇನ್ನು ನಂಜನಗೂಡು ತಾಲೂಕು ಕಚೇರಿಯಲ್ಲಿರುವ ಮುಜರಾಯಿ ಇಲಾಖೆ ವಿಷಯ ನಿರ್ವಾಹಕರು ಶ್ರೀ ಕೈವಲ್ಯದೇವಿ ದೇವಸ್ಥಾನ ಖಾಸಗಿಯವರಿಗೆ ಸೇರಿದ್ದು ಎಂಬ ತಪ್ಪು ಮಾಹಿತಿ ನೀಡುವ ಮೂಲಕ ಸರಕಾರದ ಆಸ್ತಿ ಎಂಬ ದಾಖಲೆಗಳಿರುವ ದೇವಾಲಯವನ್ನು ಖಾಸಗಿಯವರ ವಶಕ್ಕೆ ಒಪ್ಪಿಸುವ ಪ್ರಯತ್ನಕ್ಕೆ ಮುಂದಾಗಿದ್ದಾರೆ. ಆದ್ದರಿಂದ ಸರಕಾರ ಮುಜರಾಯಿ ಇಲಾಖೆಗೆ ಸೇರಿದ ಶ್ರೀ ಕೈವಲ್ಯದೇವಿ ದೇವಾಲಯದಲ್ಲಿ ರಚಿಸಿರುವ ಟ್ರಸ್ಟ್ ರದ್ದುಪಡಿಸಿ ದೇವಾಲಯವನ್ನು ರಕ್ಷಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.



ಮುಜರಾಯಿ ಇಲಾಖೆಯಿಂದಲೇ ದೇವಸ್ಥಾನ ನಿರ್ವಹಣೆ ಮಾಡಬೇಕು ಎಂದು ಒತ್ತಾಯಿಸಿ ಕಳಲೆ ಗ್ರಾಮಸ್ಥರು ಅಪರ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭ ದಸಂಸ ಜಿಲ್ಲಾ ಸಂಚಾಲಕ ಕಾರ್ಯ ಬಸವಣ್ಣ, ಶ್ರೀ ಲಕ್ಷ್ಮಿಕಾಂತ ಸ್ವಾಮಿ ದೇವಾಲಯದ ಪಾರುಪತ್ತೇದಾರ ಜಯರಾಮ್, ಕಳಲೆ ಅಂಕಣ್ಣ, ಕಳಲೆ ಕುಮಾರ್, ರಾಮು, ಗ್ರಾಮದ ಯಜಮಾನರು ಉಪಸ್ಥಿತರಿದ್ದರು.

ವರಕೋಡು ಗ್ರಾಪಂ ನೂತನ ಅಧ್ಯಕ್ಷರ ಆಯ್ಕೆ



ಮೈಸೂರು ತಾಲೂಕು ವರಕೋಡು ಗ್ರಾಪಂ ನೂತನ ಅಧ್ಯಕ್ಷರಾಗಿ ಕೃಷ್ಣ ದೊಡ್ಡರಾಮೇಗೌಡ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಈ ಸಂದರ್ಭದಲ್ಲಿ ತಾಪಂ ಮಾಜಿ ಸದಸ್ಯ ಮುದ್ದರಾಮೇಗೌಡ, ಮಾಜಿ ಗ್ರಾಪಂ ಅಧ್ಯಕ್ಷ ಬಸವರಾಜು, ಮಾಜಿ ಉಪಾಧ್ಯಕ್ಷೆ ಮಹದೇವಮ್ಮ ಶಂಕರ್, ಸದಸ್ಯರುಗಳಾದ ರಾಜಮ್ಮ ಸಿದ್ದೇಗೌಡ, ಶಿವಣ್ಣ, ರಾಧ ಮಹದೇವು, ಶಿವರಾಜು, ಸುಮಾರವಿ, ರತ್ನಮ್ಮರಾಜಣ್ಣ, ಗ್ರಾಮಗಳ ಯಜಮಾನರುಗಳಾದ ಮರೀಗೌಡ, ಬೋಳಯ್ಯನ ಪ್ರಕಾಶ್, ಚರಣ್, ರವಿಮೈಕ್, ಬಸವಯ್ಯ, ಸಾಕಪ್ಪ, ಪ್ರಭಾಕರ್, ರವಿ, ಉಮೇಶ್, ಕತ್ತಮರಿ ಮಹದೇವು, ಬಸವರಾಜು, ಕೆ.ಆರ್.ಸಿದ್ದರಾಮೇಗೌಡ, ಕರಿಗೌಡ, ಮಂಗಳಮ್ಮ ಚಿಕ್ಕಣ್ಣ, ಚಿಕ್ಕರಾಮೇಗೌಡ, ರಾಮಲಿಂಗು, ಮೆಲ್ಲಹಳ್ಳಿ ಸಾಕಣ್ಣ ಮತ್ತು ಎಲ್ಲಾ ಗ್ರಾಮದ ಮುಖಂಡರು ಶುಭ ಹಾರೈಸಿದರು.

ಮೈಸೂರು ವಿವಿ ಅಂತರ ಕಾಲೇಜು ಸ್ಪರ್ಧೆಯಲ್ಲಿ ನಂಜನಗೂಡು ವಿದ್ಯಾರ್ಥಿಗಳ ಸಾಧನೆ



ನಂಜನಗೂಡು, ಅ.31– ಮೈಸೂರು ವಿಶ್ವವಿದ್ಯಾನಿಲಯ ಅಂತರ ಕಾಲೇಜು ಕ್ರೀಡಾ ಸ್ಪರ್ಧೆಯಲ್ಲಿ ನಂಜನಗೂಡು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಕುಸ್ತಿ ಮತ್ತು ಜಿಮ್ನಾಸ್ಟಿಕ್ ಸ್ಪರ್ಧೆಯಲ್ಲಿ ಸಾಧನೆ ಮಾಡಿದ್ದಾರೆ.

ಉತ್ತಮ ದೇಹದಾರ್ಢ್ಯ ಸ್ಪರ್ಧೆಯಲ್ಲಿ ಕಾಲೇಜಿನ ತೃತೀಯ ಬಿಎ ವಿದ್ಯಾರ್ಥಿ ಮಹೇಶ್ ಬಿ.ಎಮ್. ಅವರು ಪ್ರಥಮ ಸ್ಥಾನ ಗಳಿಸುವ ಮೂಲಕ ಮಿಸ್ಟರ್ ಮೈಸೂರು ಯೂನಿವರ್ಸಿಟಿ ಟೈಟಲನ್ನು ತನ್ನದಾಗಿಸಿಕೊಂಡಿದ್ದಾರೆ. ಅಲ್ಲದೆ ರಾಷ್ಟ್ರೀಯ ಮಟ್ಟದಲ್ಲಿ ನಡೆಯುವ ಉತ್ತಮ ದೇಹದಾರ್ಢ್ಯ ಸ್ಪರ್ಧೆಗೆ ಆಯ್ಕೆಗೊಂಡಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯ ಅಂತರ ಕಾಲೇಜು ಕುಸ್ತಿ ಸ್ಪರ್ಧೆಯಲ್ಲಿ ಕಾಲೇಜಿನ ಎಂ.ನಿಶಾಂತ್, ಗೋಲ್ಡ್ ಮೆಡಲ್ ಪಡೆದರೆ ಬಿ.ಗಣೇಶ್ ಸಿಲ್ವರ್ ಮೆಡಲ್, ನಂಜುಂಡಸ್ವಾಮಿ, ರಜನಿಕಾಂತ್, ಪ್ರೀತಮ್ ಕ್ರಮವಾಗಿ ಕಂಚಿನ ಪದಕ ಪಡೆದಿದ್ದಾರೆ. ವಿದ್ಯಾರ್ಥಿಗಳ ಈ ಸಾಧನೆಗೆ ಕಾಲೇಜಿನ ಪ್ರಾಂಶುಪಾಲ ಕೆಂಪೇಗೌಡ ಮತ್ತು ದೈಹಿಕ ಶಿಕ್ಷಣ ನಿರ್ದೇಶಕ ಎಸ್. ಮಂಜು, ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ಇಂದು ಕಾಲಭೈರವೇಶ್ವರ ಸ್ವಾಮಿಯ ಉತ್ಸವ

ಹಿರೀಕ್ಯಾತನಹಳ್ಳಿ, ಅ.31– ಹುಣಸೂರು ತಾಲೂಕಿನ ಗಾವಡಗೆರೆ ಗ್ರಾಮದಲ್ಲಿ ದೀಪಾವಳಿ ಅಮಾವಾಸ್ಯೆ ಪ್ರಯುಕ್ತ ಶುಕ್ರವಾರ ಕಾಲಭೈರವೇಶ್ವರ ಸ್ವಾಮಿಯ ಉತ್ಸವ ನಡೆಯಲಿದೆ.



ದೇವಸ್ಥಾನ ಅಭಿವೃದ್ಧಿ ಸಮಿತಿ ವತಿಯಿಂದ ಬೆಳಗ್ಗೆಯಿಂದ ಅಭಿಷೇಕ, ಧಾರ್ಮಿಕ ಪೂಜಾ ಕೈಂಕರ್ಯ ನಡೆಯಲಿವೆ. ನಂತರ ಗ್ರಾಮದ ಕೆರೆಯಿಂದ ದೇವರನ್ನು ಅಲಂಕರಿಸಿ, ಕಳಸ ಹೊತ್ತ ಮಹಿಳೆಯರು, ಕುಣಿಗುಡ್ಡರು, ವಾದ್ಯಗಳ ಮೂಲಕ ಪ್ರಮುಖಬೀದಿಗಳಲ್ಲಿ ಮೆರವಣಿಗೆ ನಡೆಸಲಾಗುವುದು.

ಬೆಳಿಗ್ಗೆ 9 ಗಂಟೆಗೆ ಗ್ರಾಮದ ಕೆರೆಯಿಂದ ಗಂಗಾ ಮತ್ತು ಕಳಸ ಪೂಜೆ, 9.30ಕ್ಕೆ ದೇವಸ್ಥಾನದ ಅಭಿವೃದ್ಧಿಗಾಗಿ ನೀಡಿದ ಜಮೀನು ಭೂ ದಾನಿಗಳಿಗೆ ಸನ್ಮಾನ, 10 ಗಂಟೆಗೆ ಉತ್ಸವಮೂರ್ತಿಯ ಪೂಜೆ ನಂತರ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ, 12.30ಕ್ಕೆ ದೇವಸ್ಥಾನದಲ್ಲಿ ಮಹಾ ಮಂಗಳಾರತಿ, ಮಧ್ಯಾಹ್ನ 1 ಗಂಟೆಗೆ ಪ್ರಸಾದ ಅನ್ನ ಸಂತರ್ಪಣೆ, ಸಂಜೆ 7 ಗಂಟೆಗೆ ಕಾರ್ತಿಕ ಮಾಸದ ಮೊದಲ ದೀಪೋತ್ಸವ. ನಂತರ ಮಂಗಳಾರತಿ ನಂತರ ಪ್ರಸಾದ ವಿನಿಯೋಗವಿರುತ್ತದೆ ಎಂದು ಸಮಿತಿಯ ಪ್ರಧಾನ ಕಾರ್ಯದರ್ಶಿ ಜಿ.ವಿ. ಶ್ರೀನಾಥ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಲೆ ಮಹದೇಶ್ವರ ಬೆಟ್ಟಕ್ಕೆ ಭಕ್ತರ ಯಾತ್ರೆ



ಶ್ರೀಮಹದೇಶ್ವರ ಬೆಟ್ಟದಲ್ಲಿ ದೀಪಾವಳಿ ಜಾತ್ರೆ ಹಾಗೂ ರಥೋತ್ಸವ ನೋಡಲು ಸರಗೂರು ಪಟ್ಟಣದಿಂದ ಭಕ್ತರು ಬುತ್ತಿ ಕಟ್ಟಿಕೊಂಡು ಸಾಂಪ್ರದಾಯದಂತೆ ಪ್ರಯಾಣ ಬೆಳಸಿದರು.

ಯುವ ಮೋರ್ಚಾ ಅಧ್ಯಕ್ಷ ಸ್ಥಾನದಿಂದ ಗೋವರ್ಧನ್ ವಜಾ

ನಂಜನಗೂಡು: ಬಿಜೆಪಿ ಪಕ್ಷದ ನಂಜನಗೂಡು ಗ್ರಾಮಾಂತರ ಮಂಡಲ ಯುವ ಮೋರ್ಚಾ ಅಧ್ಯಕ್ಷ ಗೋವರ್ಧನ್ ಅವರನ್ನು ಕೊಲೆ ಆರೋಪದ ಹಿನ್ನೆಲೆಯಲ್ಲಿ ಪಕ್ಷದ ಪ್ರಾಥಮಿಕ ಸದಸ್ಯತ್ವ ಸ್ಥಾನ ಮತ್ತು ಯುವ ಮೋರ್ಚಾ ಅಧ್ಯಕ್ಷ ಸ್ಥಾನದಿಂದ ವಜಾಗೊಳಿಸಲಾಗಿದೆ.



ವೀರಶೈವ ಯುವ ಘಟಕದ ಅಧ್ಯಕ್ಷರಾಗಿ ಮಹದೇವಸ್ವಾಮಿ ನೇಮಕ

ಮಲ್ಕುಂಡಿ: ಅಖಿಲ ಭಾರತ ವೀರಶೈವ ಲಿಂಗಾಯಿತ ತಾಲೂಕು ಯುವ ಘಟಕದ ಅಧ್ಯಕರಾಗಿ ಗ್ರಾಮದ ಎಂ.ಜಿ. ಮಹದೇವಸ್ವಾಮಿ ಅವರನ್ನು ವೀರಶೈವ ತಾಲೂಕು ಘಟಕದ ಅಧ್ಯಕ್ಷ ಎಸ್.ಎಂ. ಕೆಂಪಣ್ಣ ನೇಮಕ ಮಾಡಿ, ಆದೇಶ ಪತ್ರ ನೀಡಿದ್ದಾರೆ.



ಚಿರತೆ ದಾಳಿಗೆ ಹಸು ಬಲಿ

ತಿ.ನರಸೀಪುರ, ಅ.31– ತಾಲೂಕಿನ ಆಲಸ್ತಿಕಟ್ಟೆಹುಂಡಿ ಗ್ರಾಮದಲ್ಲಿ ಹಾಡಹಗಲೇ ಚಿರತೆ ಒಂದು ದಾಳಿ ಮಾಡಿ ಹಸುವನ್ನು ಬಲಿ ಪಡೆದಿದೆ. ಗ್ರಾಮದ ವಾಸಿ ಈರೇಗೌಡರ ಮಗ ಮಹದೇವಯ್ಯ ಎಂಬುವರ ಸುಮಾರು 50 ಸಾವಿರ ರೂ. ಬೆಲೆ ಬಾಳುವ ಜೆರ್ಸಿ ಹಸುವನ್ನು ಇಂದು ಮಧ್ಯಾಹ್ನ ಚಿರತೆ ದಾಳಿ ಮಾಡಿ ಕೊಂದಿದ್ದು, ಗ್ರಾಮಸ್ಥರು ಆತಂಕಗೊಂಡಿದ್ದಾರೆ. ವಲಯ ಅರಣ್ಯ ಅಧಿಕಾರಿಗಳ ಬೇಜವಾಬ್ದಾರಿಯಿಂದ ಈ ರೀತಿ ಅನಾಹುತಗಳು ತಡೆಯುತ್ತಿವೆ. ಯಾರು ಹೇಳೋರಿಲ್ಲ ಕೇಳೋರು ಇಲ್ಲ ಎಂಬುದು ಗ್ರಾಮಸ್ಥರು ಅಳಲು.



ಜಿಲ್ಲಾ ಜನಜಾಗೃತಿಯ ವೇದಿಕೆ ಅಧ್ಯಕ್ಷ ಕರೋಹಟ್ಟಿ ಪ್ರಭುಸ್ವಾಮಿ ಅವರು ದೂರವಾಣಿ ಕರೆ ಮಾಡಿ ಅರಣ್ಯಾಧಿಕಾರಿ ಉಮೇಶ್ ಅವರಿಗೆ ಅಲಸ್ತೀ ಕಟ್ಟಹುಂಡಿ ಗ್ರಾಮದಲ್ಲಿ ಚಿರತೆ ದಾಳಿ ಮಾಡಿರುವ ಮಾಹಿತಿ ನೀಡಿದರು. ನಂತರ ಅವರು ಸ್ಥಳಕ್ಕೆ ಭೇಟಿ ನೀಡಿ, ಇವತ್ತೆ ಬೋನಿಟ್ಟು ಕ್ರಮ ಕೈಗೊಳ್ಳುತ್ತೇನೆ. ಹಾಗೂ ಮತ್ತೆ ಹಸುವನ್ನು ಸರ್ಕಾರದಿಂದ ಬರುವ ಪರಿ ಹಾರವನ್ನು ಶೀಘ್ರದಲ್ಲೇ ಮಾಡಿಕೊಡು ತ್ತೇನೆ ಎಂದು ಭರವಸೆ ನೀಡಿದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಕೆ.ಆರ್.ನಗರ, ಅ.31– ತಾಲೂಕು ಸಂಗೊಳ್ಳಿ ರಾಯಣ್ಣ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ವತಿಯಿಂದ 2023–2024ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ನಡೆದ ಪರೀಕ್ಷೆಯಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಶೇ.85 ಕ್ಕಿಂತ ಹೆಚ್ಚು ಅಂಕ ಪಡೆದ ಕುರುಬ ಸಮಾಜದ ಮಕ್ಕಳಿಗೆ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ತಮ್ಮ ಅಂಕಪಟ್ಟಿ ನಕಲು, ಮೊಬೈಲ್ ಸಂಖ್ಯೆ, ಪ್ರತಿಯೊಂದಿಗೆ ಅ.31ರೊಳಗೆ ಅರ್ಜಿ ಸಲ್ಲಿಸಬಹುದಾಗಿದ್ದು ಅರ್ಹರು ಪಟ್ಟಣದ ವಿವಿ ರಸ್ತೆಯಲ್ಲಿರುವ ಚಾಮುಂಡಿ ಮೆಡಿಕಲ್ ಸ್ಟೋರ್‌ಗೆ ದಾಖಲೆ ನೀಡಬಹುದು.

2024–25ನೇ ಸಾಲಿನಲ್ಲಿ ಎಂ.ಬಿ.ಬಿ.ಎಸ್, ಎಂಡಿ ಮತ್ತು ಇತರೆ ಸ್ನಾತಕೋತ್ತರ ಪದವಿಗಳಿಗೆ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳಿಗೂ ಪುರಸ್ಕಾರ ನೀಡಲು ತೀರ್ಮಾನಿಸಲಾಗಿದ್ದು ಅವರುಗಳನ್ನು ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಬಿ.ಸ್ವಾಮಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಮಾಹಿತಿಗಾಗಿ ದೂ. 7259367506 ಮತ್ತು 8050181306 ಸಂಪರ್ಕಿಸಬಹುದಾಗಿದೆ.

ಕೌಶಲ ತರಬೇತಿಯಿಂದ ಮಹಿಳೆಯರ ಆರ್ಥಿಕ ಸ್ಥಿತಿ ಸದೃಢ

ತಿ.ನರಸೀಪುರ, ಅ.31– ಕೌಶಲ ವೃತ್ತಿ ತರಬೇತಿಗಳಿಂದ ಮಹಿಳೆಯರು ಆರ್ಥಿಕವಾಗಿ ಸಶಕ್ತರಾಗುತ್ತಿದ್ದು, ಸರ್ಕಾರೇತರ ಸಂಸ್ಥೆಗಳ ಕ್ರಿಯಾಶೀಲತೆಯ ಕಾರ್ಯವೈಖರಿಯಿಂದ ಮಹಿಳೆಯರು ಸಂಘಟಿತರಾಗಿ ಸ್ವಾವಲಂಬಿಗಳಾಗಲು ಸಾಧ್ಯವಾಯಿತು ಎಂದು ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕರೋಹಟ್ಟಿ ಮಹದೇವಯ್ಯ ಹೇಳಿದರು.

ಪಟ್ಟಣದ ಡಾ.ಬಿ.ಆರ್. ಅಂಬೇಡ್ಕರ್ ಸಮುದಾಯ ಭವನದಲ್ಲಿ ಗೌತಮ ಬುದ್ಧ ಜನಸೇವಾ ಟ್ರಸ್ಟ್ ಆಯೋಜಿಸಿದ್ದ ಸಂಸ್ಥೆಯ 10ನೇ ವಾರ್ಷಿಕೋತ್ಸವದ ಅಂಗವಾಗಿ ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷ ದಿವಂಗತ ಸೋಸಲೆ ಶ್ರೀನಿವಾಸಮೂರ್ತಿ ಅವರಿಗೆ ನುಡಿನಮನ ಹಾಗೂ ಕೌಶಲಾಭಿವೃದ್ಧಿ ಕಾರ್ಯಕ್ರಮದಲ್ಲಿ ಹೊಲಿಗೆ ಯಂತ್ರ ತರಬೇತಿ ಪಡೆದ ಮಹಿಳೆಯರಿಗೆ ಪ್ರಮಾಣ ಪತ್ರ ವಿತರಿಸಿ ಮಾತನಾಡಿದ ಅವರು, ಕೌಶಲ ಆಧಾರಿತ ತರಬೇತಿಗಳನ್ನು ಪಡೆದ ಮಹಿಳೆ ಈಗ ಪ್ರತಿಯೊಂದು ಕುಟುಂಬದ ಭೂಷಣವಾಗಿದ್ದಾರೆ ಎಂದರು.

ಕೇಂದ್ರ ಹಾಗೂ ರಾಜ್ಯ ಸರ್ಕಾರದ ಕೌಶಲ ಅಭಿವೃದ್ಧಿ ಕಾರ್ಯಕ್ರಮದಡಿ ಗ್ರಾಮೀಣ ಪ್ರದೇಶಗಳ ಮಹಿಳೆಯರಿಗೆ ವೃತ್ತಿ ತರಬೇತಿಗಳನ್ನು ದೊಡ್ಡ ಮಟ್ಟದಲ್ಲಿ ನೀಡಬೇಕೆಂದು ಸೋಸಲೆ ಶ್ರೀನಿವಾಸಮೂರ್ತಿಯವರು ಗೌತಮ ಬುದ್ಧ ಜನಸೇವಾ ಟ್ರಸ್ಟ್ ಆರಂಭಿಸಿದ್ದರು. ಅದಕ್ಕಾಗಿ ಸೂಕ್ತವಾದ ಕಟ್ಟಡವನ್ನು ಪಟ್ಟಣದ ಹೊರವಲಯದಲ್ಲಿ ನಿರ್ಮಾಣ ಮಾಡಲು ಉದ್ದೇಶಿಸಿದ್ದರು. ಅವರ ಅಕಾಲಿಕ ನಿಧನದಿಂದಾಗಿ ಅವರ ಸಾಮಾಜಿಕ ಸೇವಾ ಕಾರ್ಯಕ್ಕೆ ಸ್ವಲ್ಪ ಮಟ್ಟಿಗೆ ಹಿನ್ನಡೆಯಾಗಿದೆ. ಟ್ರಸ್ಟ್‌ನಲ್ಲಿರುವ ಅವರ ಒಡನಾಡಿಗಳು ಸಂಸ್ಥೆಯನ್ನು ಉತ್ತಮವಾಗಿ ಕಟ್ಟುವ ಮೂಲಕ ಕನಸನ್ನ ನನಸುಗೊಳಿಸಬೇಕೆಂದು ಕರೋಹಟ್ಟಿ ಮಹದೇವಯ್ಯ ಸಲಹೆ ನೀಡಿದರು.



ಕೌಶಲಾಭಿವೃದ್ಧಿ ಕಾರ್ಯಕ್ರಮದಲ್ಲಿ ಹೊಲಿಗೆ ಯಂತ್ರ ತರಬೇತಿ ಪಡೆದ ಮಹಿಳೆಯರಿಗೆ ಪ್ರಮಾಣ ಪತ್ರ ವಿತರಣೆ ಕಾರ್ಯಕ್ರಮವನ್ನು ಪೊಲೀಸ್ ಇನ್ಸ್‌ಪೆಕ್ಟರ್ ಧನಂಜಯ ಉದ್ಘಾಟಿಸಿದರು. ಬೋಧಿರತ್ನ ಭಂತೇಜಿ, ಕರೋಹಟ್ಟಿ ಮಹದೇವಯ್ಯ, ಎಸ್.ಎನ್.ಸಿದ್ಧಾರ್ಥ, ಕೆ.ಎನ್. ಪ್ರಭುಸ್ವಾಮಿ, ಕೋಮಲಾಕ್ಷಿ ನಾಗರಾಜು, ಬಿ. ಮಹದೇವಸ್ವಾಮಿ, ಇತರರು ಇದ್ದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಪೊಲೀಸ್ ಇನ್ಸ್‌ಪೆಕ್ಟರ್ ಧನಂಜಯ ಮಾತನಾಡಿದರು. ನಳಂದ ಬುದ್ಧ ವಿಹಾರದ ಬೋಧಿರತ್ನ ಭಂತೇಜಿ ದಿವ್ಯ ಸಾನ್ನಿಧ್ಯ ವಹಿಸಿದ್ದರು. ಅಧ್ಯಕ್ಷತೆ ವಹಿಸಿದ್ದ ಜಿಪಂ ಮಾಜಿ ಅಧ್ಯಕ್ಷ ಎಸ್.ಎನ್.ಸಿದ್ಧಾರ್ಥ ಮಾತನಾಡಿದರು. ಜಿಲ್ಲಾ ಜನಜಾಗೃತಿ ಸಮಿತಿಯ ಅಧ್ಯಕ್ಷ ಕೆ.ಎನ್.ಪ್ರಭುಸ್ವಾಮಿ, ತಾಪಂ ಮಾಜಿ ಸದಸ್ಯರಾದ ಕುಕ್ಕೂರು ಗಣೇಶ್, ರಾಮಲಿಂಗಯ್ಯ, ವಾಲ್ಮೀಕಿ ನಾಯಕ ಸಂಘಗಳ ಒಕ್ಕೂಟದ ಜಿಲ್ಲಾಧ್ಯಕ್ಷ ತಾಯೂರು ಪ್ರಕಾಶ್, ಜನಾಭಿವೃದ್ಧಿ ಪರಿಣತರು ಡಾ. ಜಿ.ಅಚ್ಯುತರಾವ್, ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್, ಬಿಎಸ್‌ಪಿ ಜಿಲ್ಲಾ ಕಾರ್ಯದರ್ಶಿ ಅಂಕನಹಳ್ಳಿ ಪುಟ್ಟರಾಜು, ಟ್ರಸ್ಟ್ ಅಧ್ಯಕ್ಷೆ ಕೋಮಲಾಕ್ಷಿ ನಾಗರಾಜು, ಕಾರ್ಯದರ್ಶಿ ಬಿ.ಮಹದೇವಸ್ವಾಮಿ, ವಕೀಲ ಪುಟ್ಟಮರುಡಯ್ಯ, ಸಾಹಿತಿ ವೈ.ಜಿ.ಮಹದೇವು, ಆಶಾ ಕಾರ್ಯಕರ್ತೆಯರ ಸಂಘದ ಅಧ್ಯಕ್ಷೆ ಮಣಿಲ, ಸಮಾಜ ಸೇವಕ ಎಸ್.ಆರ್. ಶಶಿಕಾಂತ್, ಎನ್‌ಆರ್‌ಎಲ್‌ಎಂ ಕಾರ್ಯಕ್ರಮ ವ್ಯವಸ್ಥಾಪಕಿ ರೂಪಶ್ರೀ, ಸಂಜೀವಿನಿ ವಲಯ ಮೇಲ್ವಿಚಾರಕ ಸುರೇಶ್, ರೈತ ಸಂಘದ ಮಹಿಳಾ ಅಧ್ಯಕ್ಷೆ ಮಹಾಲಕ್ಷ್ಮಿ ಮಹಾದೇವ್, ಸರೋಜಮ್ಮ, ಹೊಲಿಗೆ ತರಬೇತಿ ಶಿಕ್ಷಕಿ ರುಕ್ಮಿಣಿ, ಛಾಯಾಗ್ರಾಹಕರ ಸಂಘದ ಅಧ್ಯಕ್ಷ ಎಸ್. ಕೆ.ಶಿವಕುಮಾರ್, ಟ್ರಸ್ಟ್ ಪದಾಧಿಕಾರಿಗಳಾದ ಹೊನ್ನಮ್ಮ, ಚಿಕ್ಕಮಹದೇವಿ, ಶ್ವೇತಾ, ಸಾಕಮ್ಮ, ರೋಜ, ನಾಗಮಣಿ, ಸುಜಾತ, ಮಲ್ಲಾಜಮ್ಮ, ಸೌಭಾಗ್ಯ, ಶಾಂತಮ್ಮ ಹಾಗೂ ಇನ್ನಿತರರು ಇದ್ದರು.

ಶಿವಕುಮಾರಸ್ವಾಮಿ ನಿಧನ

ಮೂಗೂರು, ಅ.31– ಗ್ರಾಮದ ಬಂಡಿ ಬೀದಿಯ ನಿವಾಸಿ ಮತ್ತು ವರ್ತಕರಾದ ಎಂ.ಎಂ. ಶಿವಕುಮಾರಸ್ವಾಮಿ (57) ಗುರುವಾರ ಮುಂಜಾನೆ ಹೃದಯಾಘಾತದಿಂದ ನಿಧನರಾದರು.



ಮೃತರು ಕರ್ನಾಟಕ ಪಬ್ಲಿಕ್ ಶಾಲೆಯ ಕಾಲೇಜು ಅಭಿವೃದ್ಧಿ ಸಮಿತಿಯ ಅಧ್ಯಕ್ಷರೂ ಆಗಿದ್ದರು. ಪತ್ನಿ ಸೇರಿದಂತೆ ಇಬ್ಬರು ಪುತ್ರರು ಮತ್ತು ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಮೂಗೂರಿನ ಜಮೀನಿನಲ್ಲಿ ಗುರುವಾರ ನಡೆಯಿತು.

ಇಂದಿನಿಂದ ಪರಂಪರೆ, ಭಕ್ತಿ–ಭಾವೈಕ್ಯತೆಯ
ಕುಂಬಾರಕೊಪ್ಪಲು ಶ್ರೀ ಮಹದೇಶ್ವರಸ್ವಾಮಿ ಜಾತ್ರೆ

● ನ.2ರಂದು ರಾತ್ರಿ ಹಾಲರವಿ, ಬಾಯಿಬೀಗ ಉತ್ಸವ ● ನ.3ರಂದು ಬೆಳಗಿನ ಜಾವ ಶ್ರೀ ಮಹದೇಶ್ವರಸ್ವಾಮಿಯ ಹುಲಿವಾಹನೋತ್ಸವ





ಸುಣ್ಣ–ಬಣ್ಣ ಲೇಪನ ಮತ್ತು ವಿದ್ಯುತ್ ದೀಪಾಲಂಕಾರ ಮಾಡಿರುವ ಕುಂಬಾರಕೊಪ್ಪಲು ಶ್ರೀ ಮಹದೇಶ್ವರಸ್ವಾಮಿ ದೇವಸ್ಥಾನ. ಮತ್ತೊಂದು ಚಿತ್ರದಲ್ಲಿ ದೇವಸ್ಥಾನದ ಮುಖ್ಯದ್ವಾರದ ಗೋಪುರವೂ ಬಣ್ಣ ಲೇಪನದಿಂದಾಗಿ ಕಂಗೊಳಿಸುತ್ತಿರುವುದು ಮತ್ತು ಗೋಪುರಕ್ಕೆ ವಿದ್ಯುತ್ ದೀಪಾಲಂಕಾರ ಮಾಡುತ್ತಿರುವುದನ್ನು ಕಾಣಬಹುದು.

ಮೈಸೂರು,ಅ.31(ಪಿಎಂ)–ಪ್ರತಿವರ್ಷ ದೀಪಾವಳಿ ಹಬ್ಬದ ಸಂದರ್ಭದಲ್ಲಿ ಮೂರು ದಿನಗಳ ಕಾಲ ವಿಜೃಂಭಣೆಯಿಂದ ನಡೆಯುವ ಮೈಸೂರಿನ ಕುಂಬಾರಕೊಪ್ಪಲು ಶ್ರೀ ಮಹದೇಶ್ವರಸ್ವಾಮಿ ಜಾತ್ರಾ ಮಹೋತ್ಸವ ಈ ಬಾರಿ ನ.1ರಿಂದ 3ರವರೆಗೆ ನಡೆಯಲಿದೆ.

ಪರಂಪರೆ, ಭಕ್ತಿ ಮತ್ತು ಭಾವೈಕ್ಯತೆಯ ಸಮಾಗಮದ ಈ ಜಾತ್ರಾ ಮಹೋತ್ಸವಕ್ಕೆ ಕುಂಬಾರಕೊಪ್ಪಲು ಗ್ರಾಮದ ಶ್ರೀ ಮಹದೇಶ್ವರಸ್ವಾಮಿ ದೇವಸ್ಥಾನ ಕೇಂದ್ರ ಬಿಂದು. ನ.1ರಂದು ಶ್ರೀ ಮಹದೇಶ್ವರ ಸ್ವಾಮಿ ದೇವಸ್ಥಾನ ಸೇರಿದಂತೆ ಗ್ರಾಮದ ಎಲ್ಲಾ ದೇವಾಲಯಗಳಲ್ಲಿ ವಿಶೇಷ ಪೂಜೆ ಜರುಗುವ ಮೂಲಕ ಜಾತ್ರಾ ಮಹೋತ್ಸವಕ್ಕೆ ಚಾಲನೆ ದೊರೆಯಲಿದೆ.


ಕುಂಬಾರಕೊಪ್ಪಲಿನಲ್ಲಿ ಗ್ರಾಮಸ್ಥರು ಪ್ರತಿವರ್ಷ ಭಕ್ತಿಭಾವದಿಂದ ಈ ಜಾತ್ರಾ ಮಹೋತ್ಸವ ಆಚರಿಸುವುದು ಪರಂಪರಾಗತವಾಗಿ ನಡೆದು ಬಂದಿದ್ದು, ಜಾತ್ರೆಯ ಮೊದಲ ದಿನ ಶ್ರೀ ಮಹದೇಶ್ವರಸ್ವಾಮಿ ದೇವಸ್ಥಾನ, ಇದೇ ದೇವಾಲಯದ ಆವರಣದಲ್ಲಿರುವ ಶ್ರೀ ಸಿದ್ದಪ್ಪಾಜಿ ದೇವಸ್ಥಾನ, ಶ್ರೀ ವರಸಿದ್ಧಿ ವಿನಾಯಕ ದೇವಸ್ಥಾನ ಸೇರಿದಂತೆ ಗ್ರಾಮದ ಮಾರಮ್ಮನಗುಡಿ, ಬನ್ನಿ ಮಾರಮ್ಮ ದೇವಾಲಯ ಹಾಗೂ ಶ್ರೀ ಬಸವೇಶ್ವರ ದೇವಸ್ಥಾನಗಳಲ್ಲಿ ವಿಶೇಷ ಪೂಜಾ ಕೈಂಕರ್ಯಗಳು ನಡೆಯಲಿವೆ.


ಹಾಲರವಿ, ಬಾಯಿಬೀಗ ಉತ್ಸವ: ನ.2ರಂದು ರಾತ್ರಿ 7ಕ್ಕೆ ತಿಪ್ಪಾಜಿ ಕೊಳದಿಂದ ಪ್ರಾರಂಭಗೊಳ್ಳುವ ಹಾಲರವಿ ಮತ್ತು ಬಾಯಿಬೀಗ ಉತ್ಸವವು ಕುಂಬಾರಕೊಪ್ಪಲಿನ ಪ್ರಮುಖ ಬೀದಿಗಳಲ್ಲಿ ಸಾಗಲಿದೆ. ಜಾನಪದ ಕಲಾ ತಂಡಗಳೊಂದಿಗೆ ಸಾಗುವ ಉತ್ಸವವು ಅಂತಿಮವಾಗಿ ಶ್ರೀ ಮಹದೇಶ್ವರಸ್ವಾಮಿ ದೇವಸ್ಥಾನ ತಲುಪಲಿದೆ. ಹಾಲರವಿ ಮತ್ತು ಬಾಯಿಬೀಗ ಉತ್ಸವದಲ್ಲಿ ಬೆಳ್ಳಿಯ ಮಹದೇಶ್ವರರ ಮುಖವಾಡ ಮತ್ತು ವೀರಭದ್ರಸ್ವಾಮಿ ಹಲಗೆಗೆ ಸ್ನಾನ ಮಾಡಿಸಿ, ಬಾಯಿಬೀಗ ಹರಕೆಗೆ ಚಾಲನೆ ನೀಡಲಾಗುತ್ತದೆ.

ನ.3ರಂದು ಬೆಳಗಿನ ಜಾವ 2ಕ್ಕೆ ಶ್ರೀ ಮಹದೇಶ್ವರಸ್ವಾಮಿಯ ಹುಲಿವಾಹನೋತ್ಸವ ಜರುಗಲಿದೆ. ಶ್ರೀಮಹದೇಶ್ವರ ಸ್ವಾಮಿ ದೇವಸ್ಥಾನದಿಂದ ಹೊರಡುವ ಹುಲಿವಾಹನೋತ್ಸವ, ಊರಿನ ಪ್ರಮುಖ ಬೀದಿಗಳಲ್ಲಿ ಸಾಗಲಿದೆ.

ನಂತರ ಅಂದು ಬೆಳಗ್ಗೆ 11ಕ್ಕೆ ದೇವಸ್ಥಾನಕ್ಕೆ ಹುಲಿವಾಹನೋತ್ಸವ ಮರಳಲಿದೆ. ನಂತರ ಇಲ್ಲಿ ಕೊಂಡೋತ್ಸವ ನಡೆಯಲಿದೆ. ಇದೇ ದಿನ ಮಧ್ಯಾಹ್ನ 12ಕ್ಕೆ ಶ್ರೀ ಮಹದೇಶ್ವರ ಸಮುದಾಯ ಭವನದಲ್ಲಿ ಅನ್ನ ಸಂತರ್ಪಣೆ ನಡೆಯಲಿದೆ. 8ರಿಂದ 10 ಸಾವಿರ ಮಂದಿಗೆ ವಾಂಗಿಬಾತ್, ಮೊಸರನ್ನ, ಲಾಡು ಊಣಬಡಿಸಲು ವ್ಯವಸ್ಥೆ ಮಾಡಲಾಗಿದೆ.


ಕುಸ್ತಿ, ಕಬಡ್ಡಿ ಆಯೋಜನೆ: ನ.3ರಂದು ಕೊಂಡೋತ್ಸವ ಬಳಿಕ ದೇವಸ್ಥಾನದ ಸಮೀಪದಲ್ಲೇ ಇರುವ ಶ್ರೀ ಕೆಂಪೇಗೌಡ ಕ್ರೀಡಾಂಗಣದಲ್ಲಿ ಬಯಲು ಕುಸ್ತಿ ಪಂದ್ಯಾವಳಿ ನಡೆಯಲಿದ್ದು, ಇದಕ್ಕಾಗಿ ಅಖಾಡ ಸಜ್ಜುಗೊಳಿಸಲಾಗುತ್ತಿದೆ. ಜೊತೆಗೆ ನ.1ರಿಂದ 3ರವರೆಗೆ ಕಬಡ್ಡಿ ಪಂದ್ಯಾವಳಿಯು ಇಲ್ಲಿನ ಶ್ರೀ ಕೆಂಪೇಗೌಡ ಕ್ರೀಡಾಂಗಣದಲ್ಲಿ ನಡೆಯಲಿದೆ. ಗ್ರಾಮಸ್ಥರು ಹಾಗೂ ಅವರ ನೆಂಟರಿಷ್ಟರು ಸೇರಿದಂತೆ ಸುಮಾರು 30 ಸಾವಿರ ಮಂದಿ ಈ ಮೂರು ದಿನಗಳ ಜಾತ್ರೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಕುಂಬಾರಕೊಪ್ಪಲು ಅಭ್ಯುದಯ ಸಂಘದ ನೇತೃತ್ವದಲ್ಲಿ ಈ ಜಾತ್ರಾ ಮಹೋತ್ಸವ ನಡೆಯಲಿದೆ. ಇಲ್ಲಿನ ಶ್ರೀ ಮಹದೇಶ್ವರಸ್ವಾಮಿ ದೇವಸ್ಥಾನ ಹಾಗೂ ದೇವಸ್ಥಾನದ ಮುಖ್ಯದ್ವಾರದ ಗೋಪುರ ಮೊದಲಾದ ನಿರ್ಮಾಣಗಳಿಗೆ ಸುಣ್ಣ–ಬಣ್ಣದ ಲೇಪನ ಕಾರ್ಯ ಪೂರ್ಣಗೊಳಿಸಿದ್ದು, ವಿದ್ಯುತ್ ದೀಪಾಲಂಕಾರ ಕಾರ್ಯ ಅಂತಿಮ ಹಂತಕ್ಕೆ ತಲುಪಿದೆ.






ಶ್ರೀ ಮಹದೇಶ್ವರಸ್ವಾಮಿ ದೇವಸ್ಥಾನದ ಗರ್ಭಗುಡಿ. ಮತ್ತೊಂದು ಚಿತ್ರದಲ್ಲಿ ದೇವಸ್ಥಾನದ ಆವರಣದಲ್ಲಿ ನಿರ್ಮಿಸಿರುವ ಮಹದೇಶ್ವರರ ಜೀವನ ಚರಿತ್ರೆ ಬಿಂಬಿಸುವ ಕಲಾಕೃತಿಗಳ ಪೈಕಿ ಕೊನೆಯ ಅಂಕಣದಲ್ಲಿರುವ ಮಹದೇಶ್ವರಸ್ವಾಮಿಯವರ ಪ್ರತಿಮೆಯನ್ನು ಕಾಣಬಹುದು.

ಮಹದೇಶ್ವರಸ್ವಾಮಿ ಚರಿತ್ರೆ ಅನಾವರಣ



ಇಲ್ಲಿನ ಶ್ರೀ ಮಹದೇಶ್ವರ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಮಹದೇಶ್ವರರ ಜೀವನ ಚರಿತ್ರೆ ಬಿಂಬಿಸುವ ಕಲಾಕೃತಿಗಳನ್ನು ನಿರ್ಮಿಸಲಾಗಿದೆ. ವಿಧಾನ ಪರಿಷತ್ ಮಾಜಿ ಸದಸ್ಯರು, ಗ್ರಾಮದ ಹಿರಿಯ ಮುಖಂಡರೂ ಆದ ಕುಂಬಾರಕೊಪ್ಪಲು ಅಭ್ಯುದಯ ಸಂಘದ ಮಹಾಪೋಷಕ ಡಿ.ಮಾದೇಗೌಡ ಅವರ ಪರಿಕಲ್ಪನೆಯಡಿ ಈ ಕಲಾಕೃತಿಗಳನ್ನು ನಿರ್ಮಿಸಲಾಗಿದೆ.

'ಸತ್ಯವನ್ನೇ ಹೇಳುತ್ತೇನೆ' ನಾಟಕ ಯಶಸ್ವಿ



'ಸತ್ಯವನ್ನೇ ಹೇಳುತ್ತೇನೆ' ನಾಟಕದ ದೃಶ್ಯ.

ಮೈಸೂರು, ಅ.31(ಎಂಕೆ)– ರಂಗಭೂಮಿ ಟ್ರಸ್ಟ್ ಕೊಡಗು ಪ್ರಸ್ತುತಿಯ ಮೈಸೂರು ರಂಗಾಯಣ ಮಾಜಿ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ, ರಚಿಸಿ, ನಿರ್ದೇಶಿಸಿರುವ 'ಸತ್ಯವನ್ನೇ ಹೇಳುತ್ತೇನೆ' ನಾಟಕದ ನಾಲ್ಕನೇ ಪ್ರದರ್ಶನವೂ ಯಶಸ್ವಿಯಾಯಿತು. ಮೈಸೂರಿನ ಕಲಾಮಂದಿರದ ಕಿರುರಂಗಮಂದಿರದಲ್ಲಿ ಪ್ರದರ್ಶನಗೊಂಡ ಸತತ ನಾಲ್ಕನೇ ಪ್ರದರ್ಶನಕ್ಕೂ ಇಡೀ ಸಭಾಂಗಣ ಕಿಕ್ಕಿರಿದು ತುಂಬಿತ್ತು. ನಾಟಕದ ಆಕರ್ಷಕ ಸಂಭಾಷಣೆ ಆಲಿಸುತ್ತಾ ಶಿಳ್ಳೆ–ಚಪ್ಪಾಳೆ ಮೂಲಕ ಕಲಾವಿದರನ್ನು ಪ್ರೋತ್ಸಾಹಿಸಲಾಯಿತು. ಪಾತ್ರಧಾರಿಗಳ ಅಚ್ಚುಕಟ್ಟು ಅಭಿನಯ ನೋಡುಗರ ಮನಗೆದ್ದಿತು. ಸುಮಾರು 50ಕ್ಕೂ ಹೆಚ್ಚು ಮಂದಿ ಪ್ರೇಕ್ಷಕರು ಟಿಕೆಟ್ ಸಿಗದೆ ನಿರಾಶೆಯಿಂದ ವಾಪಸ್ಸಾದರು.

ನಾಟಕ ಗೆದ್ದಿದೆ: ಸತತ ನಾಲ್ಕು ಪ್ರದರ್ಶನದ ನಂತರ ನವೆಂಬರ್ 11 ಮತ್ತು 13 ರಂದು ಮುಂದಿನ ಪ್ರದರ್ಶನಗಳು ನಡೆಯಲಿವೆ. 'ಸತ್ಯವನ್ನೇ ಹೇಳುತ್ತೇನೆ' ನಾಟಕವನ್ನು ಜನರು ಗೆಲ್ಲಿಸಿದ್ದಾರೆ.

ಒಳ್ಳೆಯದನ್ನು, ಸತ್ಯವನ್ನು ಹೇಳಲು ಹೊರಟರೆ ಜನರು ಒಪ್ಪುತ್ತಾರೆ ಎಂಬುದು ಈ ನಾಟಕದ ಮೂಲಕ ಸಾಬೀತಾಗಿದೆ. ಸತತ ನಾಲ್ಕು ದಿನಗಳು ನಾಟಕ ವೀಕ್ಷಣೆ ಮಾಡಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸುತ್ತೇನೆ ಎಂದು ನಾಟಕ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ಉಗ್ರಾವತಾರ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಬಘೀರ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಭೂಲ್ ಭುಲಯ್ಯ 3 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಬಘೀರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಬಘೀರ (ಕ)	4 ಪ್ರದರ್ಶನಗಳು
ರಾಜಕಮಲ್	
ಅಮರನ್ (ತ)	4 ಪ್ರದರ್ಶನಗಳು
ಸಂಗಂ	
ಭೂಲ್ ಭುಲಯ್ಯ 3 (ಹಿಂ)	4 ಪ್ರದರ್ಶನಗಳು
ಲಿಡೋ	
ಕೃಷ್ಣಂ ಪ್ರಣಯ ಸಖಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ವೇಟೇಯನ್ (ತ)	4 ಪ್ರದರ್ಶನಗಳು
ಪ್ರಭಾ	
ಅಂಜದಗಂಡು (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಲಕ್ಕಿ ಭಾಸ್ಕರ್ (ತೆ): ಬೆ.10.30ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ವೇನಂ ದಿ ಲಾಸ್ಟ್ ಡ್ಯಾನ್ಸ್ (3ಡಿ)(ಇಂ): ಮ.1.30ಕ್ಕೆ, ಲಕ್ಕಿ ಭಾಸ್ಕರ್ (ಮ): ರಾ.9.55ಕ್ಕೆ.
ಸ್ಕ್ರೀನ್ 2	ವೇನಂ ದಿ ಲಾಸ್ಟ್ ಡ್ಯಾನ್ಸ್ (3ಡಿ)(ಇಂ): ಬೆ.10.55ಕ್ಕೆ, ಬ್ಲಡಿ ಬೆಗ್ಗರ್ (ತ): ಮ.1.20ಕ್ಕೆ, ಬ್ರದರ್ (ತ): ಸಂ.4.20ಕ್ಕೆ, ಬಘೀರ (ಕ): ರಾ.7.05ಕ್ಕೆ, ಕ (ತೆ): ರಾ.10.10ಕ್ಕೆ.
ಸ್ಕ್ರೀನ್ 3	ಅಮರನ್ (ತ): ಬೆ.10.05ಕ್ಕೆ, ಮ.1.15ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಅನ್ನ (ಕ): ಸಂ.4.30ಕ್ಕೆ.
ಸ್ಕ್ರೀನ್ 4	ಬಘೀರ (ಕ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ, ರಾ.10.20ಕ್ಕೆ.

ಐನಾಕ್ಸ್ ಮೂವೀಸ್
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ವೆಟ್ಟೈಯನ್ (ತ): ಮ.1ಕ್ಕೆ, ಎಲ್ಲಿಗೆ ಪಯಣ ಯಾವುದೋ ದಾರಿ (ಕ): ಸಂ.4ಕ್ಕೆ, ಮಾರ್ಟಿನ್ (ಕ): ಸಂ.6.30ಕ್ಕೆ, ವೆಟ್ಟೈಯನ್ (ತ): ರಾ.9.15ಕ್ಕೆ.
ಸ್ಕ್ರೀನ್ 2	ವೇನಂ ದಿ ಲಾಸ್ಟ್ ಡ್ಯಾನ್ಸ್ (3ಡಿ)(ಇಂ): ಮ.1.30ಕ್ಕೆ, ಸಂ.4ಕ್ಕೆ, ರಾ.7ಕ್ಕೆ.
ಸ್ಕ್ರೀನ್ 3	ಯಲಾಕುನ್ನಿ (ಕ): ಮ.1.30ಕ್ಕೆ, ಒಬ್ಬಟ್ಟು (ಕ): ಸಂ.4.30ಕ್ಕೆ, ಉದಾಹರಣೆ (ಕ): ರಾ.7ಕ್ಕೆ, ವೇನಂ ದಿ ಲಾಸ್ಟ್ ಡ್ಯಾನ್ಸ್ (3ಡಿ)(ಇಂ): ರಾ.9.15ಕ್ಕೆ.
ಸ್ಕ್ರೀನ್ 4	ಮಾರ್ಟಿನ್ (ಕ): ಮ.1.10ಕ್ಕೆ, ಯಲಾಕುನ್ನಿ (ಕ): ಮ.3.55ಕ್ಕೆ, ವೆಟ್ಟೈಯನ್ (ತ): ಸಂ.6.30ಕ್ಕೆ, ಪಣಿ (ಮ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಆಯುರ್ವೇದ ವೈದ್ಯಕೀಯ ವಿದ್ಯಾರ್ಥಿಗೆ ಪ್ರಶಸ್ತಿ



ಮೈಸೂರು ಸರ್ಕಾರಿ ಆಯುರ್ವೇದ ಮೆಡಿಕಲ್ ಕಾಲೇಜಿನಲ್ಲಿ ನಡೆದ 9ನೇ ರಾಷ್ಟ್ರೀಯ ಆಯುರ್ವೇದ ದಿನದ ಅಂಗವಾಗಿ ಅರ್ಕ ಔಷಧ ಸಂಶೋಧನೆ ಮಾಡಿದ ಅಂತಿಮ ವರ್ಷದ ವಿದ್ಯಾರ್ಥಿ ಜಿ.ಎಸ್.ಗಣೇಶ್ ಪ್ರಸಾದ್ ಅವರಿಗೆ ಕಾಲೇಜಿನ ಪ್ರಾಂಶುಪಾಲ ಗಜಾನನ ಹೆಗಡೆ ಅವರು ಪ್ರಶಸ್ತಿ ಪ್ರದಾನ ಮಾಡಿದರು. ಈತ ಗುಂಡ್ಲುಪೇಟೆ ಪತ್ರಕರ್ತ ಸೋಮಶೇಖರ್ ಮತ್ತು ಶಾಂತ ದಂಪತಿ ಪುತ್ರ.

ಹಾಸನಾಂಬೆ ದರ್ಶನ ವ್ಯವಸ್ಥೆ ಅಸ್ತವ್ಯಸ್ತ: ಪೊಲೀಸರು–ಕಂದಾಯ ಇಲಾಖೆ ಸಿಬ್ಬಂದಿ ಮಾರಾಮಾರಿ ನಡುವೆ ಹರಿದು ಬಂದ ಭಕ್ತ ಸಾಗರ

ನಿಯಂತ್ರಿಸಲು ಪೊಲೀಸರ ಹೆಣಗಾಟ; ನೀಡಿದ ಪಾಸ್‌ಗಳು ರದ್ದು; ಮಾಡಿದ್ದ ಬಸ್ ಸೌಕರ್ಯ ಸ್ಥಗಿತ

ಹಾಸನ, ಅ.31– ವರ್ಷಕ್ಕೊಮ್ಮೆ ದರ್ಶನ ನೀಡುವ ಹಾಸನದ ಶಕ್ತಿ ದೇವತೆ ಹಾಸನಾಂಬೆ ದರ್ಶನ ವಿಚಾರದಲ್ಲಿ ಗುರುವಾರವೂ ಗಲಾಟೆ ಮುಂದುವರಿದಿದೆ. ದೇವಾಲಯದಲ್ಲಿ ಕುಟುಂಬಸ್ಥರನ್ನು ದೇಗುಲಕ್ಕೆ ಕರೆದೊಯ್ಯುವ ವಿಚಾರವಾಗಿ ಕಂದಾಯ ಇಲಾಖೆ ಸಿಬ್ಬಂದಿಯ ನಡುವೆ ಮಾರಾಮಾರಿ ನಡೆದಿದೆ.

ಹಾಸನಾಂಬೆ ದೇವಾಲಯದ ಎಕ್ಸಿಟ್ ಗೇಟ್ ಬಳಿ ಘಟನೆ ನಡೆದಿದ್ದು, ಸಿಬ್ಬಂದಿ ಕೈಕೈ ಮಿಲಾಯಿಸಿಕೊಂಡಿದ್ದಾರೆ. ಸಿಬ್ಬಂದಿಯ ಜಗಳ ಬಿಡಿಸಲು ಹರಸಾಹಸಪಟ್ಟ ಪೊಲೀಸರು, ಲಘು ಲಾಠಿ ಪ್ರಹಾರ ನಡೆಸಿ ಎಲ್ಲರನ್ನೂ ಚದುರಿಸಿದರು.

ನಿನ್ನೆಯೂ ಹಾಸನಾಂಬೆ ದರ್ಶನ ವಿಚಾರವಾಗಿ ಹಾಸನ ನಗರಸಭೆ ಎದುರಿನ ಮುಖ್ಯದ್ವಾರದ ಬಳಿ ಪೊಲೀಸ್ ಇಲಾಖೆ ಸಿಬ್ಬಂದಿ ಹಾಗೂ ಡಿಸಿ ಕಚೇರಿ ಸಿಬ್ಬಂದಿ ಕೈ ಕೈ ಮಿಲಾಯಿಸಿದ್ದರು. ಜಗಳ ಬಿಡಿಸಲು ಸಿಬ್ಬಂದಿ ಹರಸಾಹಸಪಟ್ಟಿದ್ದರು.

ತಾಯಿ ಹಾಸನಾಂಬೆ ದರ್ಶನಕ್ಕೆ ರಾಜ್ಯದ ವಿವಿಧೆಡೆಯಿಂದ ಲಕ್ಷಾಂತರ ಭಕ್ತರು ಆಗಮಿಸಿದ ಹಿನ್ನೆಲೆಯಲ್ಲಿ ನೂಕು–ನುಗ್ಗಲು ಉಂಟಾಗುವ ಹಿನ್ನೆಲೆಯಲ್ಲಿ ಜಿಲ್ಲಾಡಳಿತದಿಂದ ನೀಡಲಾಗಿದ್ದ ಎಲ್ಲಾ ಮಾದರಿಯ ವಿಐಪಿ, ವಿವಿಐಪಿ ಪಾಸುಗಳನ್ನು ರದ್ದುಗೊಳಿಸಿ ದೇವಸ್ಥಾನದ ಆಡಳಿತ ಮಂಡಳಿಯಿಂದ ಆದೇಶ ಹೊರಡಿಸಲಾಗಿದೆ ಅಲ್ಲದೇ ರಾಜ್ಯದ ವಿವಿಧೆಡೆಯಿಂದ ಬಿಡಲಾಗಿದ್ದ 500ಕ್ಕೂ ಹೆಚ್ಚು ವಿಶೇಷ ಬಸ್‌ಗಳ ಸಂಚಾರವನ್ನು ಸ್ಥಗಿತಗೊಳಿಸಲಾಗಿದೆ. ದೇವರ ದರ್ಶನಕ್ಕೆ ಬಂದು ಬೆಳಗ್ಗೆಯಿಂದ ಕಿಲೋಮೀಟರ್ ಗಟ್ಟಲೆ ಸರತಿ ಸಾಲಿನಲ್ಲಿ ನಿಂತಿರುವ ಜನರು ಗಾಳಿ, ಮಳೆಯನ್ನೂ ಲೆಕ್ಕಿಸದೇ ಗಂಟೆಗಟ್ಟಲೇ ಕಾಯುತ್ತಿದ್ದಾರೆ. ಆದರೆ, ಸರತಿ ಸಾಲಿನಲ್ಲಿ ನಿಂತು ಕಾಯುತ್ತಿರುವ ಜನರಿಗಿಂತ ಹೆಚ್ಚಿನ ಜನರು ಪಾಸ್‌ಗಳನ್ನು ತೋರಿಸಿ ನೇರವಾಗಿ ದೇವಸ್ಥಾನದೊಳಗೆ ಹೋಗುತ್ತಿದ್ದರು. ಪಾಸ್ ತೋರಿಸಿದವರನ್ನೆಲ್ಲಾ ಒಳಗೆ ಬಿಟ್ಟರೆ ಧರ್ಮದರ್ಶನ ಮಾಡಲು ಬಂದ ಭಕ್ತಾದಿಗಳು ಎಲ್ಲಿಗೆ ಹೋಗಬೇಕು ಎಂದು ದೇವಸ್ಥಾನ ಆಡಳಿತ ಮಂಡಳಿ ವಿರುದ್ಧ ಜನರು ಕೆಂಡ ಕಾರಿದ್ದಾರೆ. ಈ ಹಿನ್ನೆಲೆಯಲ್ಲಿ ಎಲ್ಲಾ ಪಾಸ್‌ಗಳನ್ನು ರದ್ದುಗೊಳಿಸಿ ಹಾಸನಾಂಬೆ ದೇವಾಲಯ ಆಡಳಿತ ಅಧಿಕಾರಿ ಮಾರುತಿ ಆದೇಶ ಹೊರಡಿಸಿದ್ದಾರೆ. ಇದರಿಂದಾಗಿ ಪಾಸ್ ಪಡೆದುಕೊಂಡು ಬಂದವರು ಕೂಡ ಆಡಳಿತ ಮಂಡಳಿ ವಿರುದ್ಧ ಆಕ್ರೋಶ ಹೊರಹಾಕಿದ್ದಾರೆ. ನಾವು ಸಚಿವರು, ಶಾಸಕರು ಹಾಗೂ ಅಧಿಕಾರಿಗಳ ದುಂಬಾಲು ಬಿದ್ದು ಪಾಸ್‌ಗಳನ್ನು ಪಡೆದುಕೊಂಡು ಬಂದರೆ, ಇಲ್ಲಿ ಒಳಗೆ ಹೋಗಲು ಬಿಡುತ್ತಿಲ್ಲ. ನೀವು ಕೊಟ್ಟ ಪಾಸ್‌ಗೆ ಅನುಮತಿ ಇಲ್ಲವೆಂದರೆ ಈ ಪಾಸ್‌ಗಳನ್ನು ಏನಕ್ಕೆ ಕೊಟ್ಟಿದ್ದೀರಿ ಎಂದು ಕಿಡಿಕಾರಿದ್ದಾರೆ. ವಿವಿಐಪಿ ಪಾಸ್ ಬೇಕಾಬಿಟ್ಟಿಯಾಗಿ ಹಂಚಿಕೆ ಮಾಡಿ, ಈಗ ಪ್ರಾಯಶ್ಚಿತ್ತದ ಕ್ರಮವಾಗಿ ಪಾಸ್ ರದ್ದುಗೊಳಿಸುತ್ತಿದ್ದೀರಾ ಎಂದು ಆಕ್ರೋಶ ಹೊರ ಹಾಕಿದ್ದಾರೆ.



ವಿಶೇಷ ಬಸ್‌ಗಳ ಸಂಚಾರ ರದ್ದು: ಬೆಂಗಳೂರು, ತುಮಕೂರು, ಮಂಡ್ಯ, ಮೈಸೂರು, ರಾಮನಗರ, ಚಾಮರಾಜನಗರ, ಕೊಡಗು ಸೇರಿದಂತೆ ವಿವಿಧ ಜಿಲ್ಲೆಗಳಿಂದ ಹಾಸನಾಂಬೆ ದರ್ಶನಕ್ಕಾಗಿ ವಿಶೇಷ ಬಸ್ ಸಂಚಾರ ವ್ಯವಸ್ಥೆಗಳನ್ನು ಮಾಡಲಾಗಿತ್ತು. ಆದರೆ, ಇಂದು ಹಾಸನದಲ್ಲಿ ಭಕ್ತರ ಸಂಖ್ಯೆ ಹೆಚ್ಚಾದ ಹಿನ್ನೆಲೆಯಲ್ಲಿ ಹಾಸನಾಂಬೆ ದರ್ಶನಕ್ಕೆ ಬಿಟ್ಟಿದ್ದ ಎಲ್ಲ ವಿಶೇಷ ಸಾರಿಗೆ ಬಸ್‌ಗಳ ಸಂಚಾರವನ್ನು ರದ್ದುಗೊಳಿಸಲಾಗಿದೆ. ಬೆಂಗಳೂರು ಸೇರಿದಂತೆ ವಿವಿಧ ಜಿಲ್ಲೆಗಳಿಂದ ಸುಮಾರು 500ಕ್ಕೂ ಅಧಿಕ ಬಸ್‌ಗಳನ್ನು ಹಾಸನಕ್ಕೆ ಬಿಡಲಾಗಿತ್ತು. ಇನ್ನು ಇದೀಗ ದೀಪಾವಳಿ ರಜೆ ಹಿನ್ನೆಲೆಯಲ್ಲಿ ಹಾಸನಾಂಬ ದರ್ಶನಕ್ಕೆ ಬರುವ ಭಕ್ತರ ಸಂಖ್ಯೆ ಹೆಚ್ಚಾದ ಬೆನ್ನಲ್ಲಿಯೇ ವಿಶೇಷ ಬಸ್ ಸಂಚಾರ ಸ್ಥಗಿತಗೊಳಿಸಲಾಗಿದೆ ಎಂದು ತಿಳಿದುಬಂದಿದೆ.

ನಿಯಂತ್ರಣ ತಪ್ಪಿದ ಹಾಸನಾಂಬೆ ದರ್ಶನೋತ್ಸವ: ಹಾಸನದಲ್ಲಿ ದೇವಿ ಹಾಸನಾಂಬೆ ದರ್ಶನ ಪಡೆಯಲು ಬಂದ ಭಕ್ತರನ್ನು ನಿಯಂತ್ರಿಸಲು ಪೊಲೀಸರು ಅಕ್ಷರಶಃ ಹೆಣಗಾಡುತ್ತಿದ್ದಾರೆ. ದರ್ಶನದ ವೇಳೆ ಭಾರೀ ಮಳೆ ಸುರಿಯುತ್ತಿದೆ. ಆದರೆ, ಭಕ್ತರು ಮಾತ್ರ ಮಳೆಗೂ ಜಗ್ಗದೇ ಸರತಿ ಸಾಲಿನಲ್ಲಿ ನಿಂತಿದ್ದಾರೆ. ಇನ್ನು ಕೆಲವರು ಮಳೆಯ ರಭಸಕ್ಕೆ ತಾಳಲಾರದೇ ಬ್ಯಾರಿಕೇಡ್ ಮುರಿದು ಒಳ ನುಗ್ಗುತ್ತಿದ್ದಾರೆ. ಇದರಿಂದ ಪೊಲೀಸರು ಭಕ್ತರನ್ನು ನಿಯಂತ್ರಿಸಲಾಗದೆ ಪರದಾಡುತ್ತಿದ್ದಾರೆ.

ಜಗತ್ತಿಗೆ ಪ್ರೀತಿ, ಪ್ರಜ್ಞೆ ಸಾರುವ ಏಕೈಕ ಧರ್ಮ 'ಬೌದ್ಧ ಧಮ್ಮ'

ಉರಿಲಿಂಗ ಪೆದ್ದಿಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ಅಭಿಮತ



68ನೇ ಧಮ್ಮದೀಕ್ಷಾ ವರ್ಷಾಚರಣೆಯ ಪ್ರಯುಕ್ತ 25ಕ್ಕೂ ಹೆಚ್ಚು ಮಂದಿಗೆ 'ರಾಜ್ಯ ಮಟ್ಟದ ಧಮ್ಮ ಸೇವಾರತ್ನ ಪ್ರಶಸ್ತಿ ಪ್ರದಾನ' ಮಾಡಲಾಯಿತು.

ಮೈಸೂರು, ಅ.31(ಎಂಕೆ)– ಜಗತ್ತಿಗೆ ಪ್ರೀತಿ ಮತ್ತು ಪ್ರಜ್ಞೆಯನ್ನು ಹೇಳಿಕೊಟ್ಟಂತಹ ಧಮ್ಮ(ಧರ್ಮ) ಯಾವುದಾದರೂ ಇದ್ದರೆ, ಅದು ತಥಾಗತ ಗೌತಮ ಬುದ್ಧರು ಹೇಳಿದ ಬೌದ್ಧ ಧಮ್ಮ. ಬೌದ್ಧ ಧಮ್ಮವೇ ಪ್ರೀತಿ ಮತ್ತು ಪ್ರಜ್ಞೆಯ ಮೇಲೆ ನಿಂತಿದೆ ಎಂದು ಗಾಂಧಿನಗರ ಉರಿಲಿಂಗ ಪೆದ್ದಿಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ಹೇಳಿದರು.

ಮೈಸೂರು ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದಲ್ಲಿ ತನುಮನ ಸಂಸ್ಥೆ, ಮೈಸೂರು ವತಿಯಿಂದ 68ನೇ ಧಮ್ಮದೀಕ್ಷಾ ವರ್ಷಾಚರಣೆಯ ಪ್ರಯುಕ್ತ ಗುರುವಾರ ಆಯೋಜಿಸಿದ್ದ 'ಧಮ್ಮ ಸಂಗೀತೋತ್ಸವ ಮತ್ತು ರಾಜ್ಯ ಮಟ್ಟದ ಧಮ್ಮ ಸೇವಾರತ್ನ ಪ್ರಶಸ್ತಿ ಪ್ರದಾನ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮನುಷ್ಯತ್ವವನ್ನು ಹುಡುಕುವ ಧಮ್ಮವೇ ಬುದ್ಧ ಧಮ್ಮ. ಹಾಗಾಗಿ ರಾಜ್ಯದ 31 ಜಿಲ್ಲೆಗಳಲ್ಲಿ ಧಮ್ಮ(ಮನುಷ್ಯತ್ವವುಳ್ಳವರ ಹುಡುಕುವ)ದ ಸೇವೆ ಮಾಡುತ್ತಿರುವವರಿಗೆ ಧಮ್ಮ ಸೇವಾರತ್ನ ಪ್ರಶಸ್ತಿ ನೀಡುತ್ತಿದ್ದೇವೆ ಎಂದರು.

ಸ್ವಾಮಿ ವಿವೇಕಾನಂದರು ಈ ದೇಶದ ಮೂರನೇ ಎರಡರಷ್ಟು ಜನ ಬೌದ್ಧರಿದ್ದಾರೆ ಎಂದು ಹೇಳಿದ್ದರು. ಅಂದಿನಿಂದಲೂ ಇರುವ ಹಿಂದೂ, ಮುಸ್ಲಿಂ, ಕ್ರೈಸ್ತ, ಜೈನರೆಲ್ಲರೂ ಈಗಲೂ ಇದ್ದಾರೆ. ಆದರೆ, ಬೌದ್ಧರೆಲ್ಲಿ ಹೋದರು. ಈ ದೇಶದ ಎಸ್‌ಸಿ, ಎಸ್‌ಟಿ ಮತ್ತು ಒಬಿಸಿಗಳೇ ಬೌದ್ಧ ಧಮ್ಮಕ್ಕೆ ಸೇರಿದವರು. ಆದರೆ, ಇದನ್ನು ಮುಚ್ಚಿ, ಪರದೆ ಹಾಕಿದ್ದಾರೆ ಎಂದು ತಿಳಿಸಿದರು.

ಬಾಬಾ ಸಾಹೇಬರಿಂದ ಪುನರ್ ಸ್ಥಾಪನೆ: ಈ ದೇಶದಲ್ಲಿದ್ದ ಬೌದ್ಧ ಧಮ್ಮವನ್ನು 500 ಅಡಿ ಆಳಕ್ಕೆ ಹೂತಿದ್ದರು. 84 ಸಾವಿರ ಬೌದ್ಧ ಸ್ತೂಪಗಳನ್ನು ಮಣ್ಣಿನಲ್ಲಿ ಮುಚ್ಚಿ ಇತಿಹಾಸಕ್ಕೆ ಸೇರಿಸಿದ್ದರು. ಆದರೆ, ಬುದ್ಧರನ್ನು ಮತ್ತೆ ಈ ದೇಶದಲ್ಲಿ ಪುನರ್ ಪ್ರತಿಷ್ಠಾಪಿಸಿ, ಹೊಸ ಚೈತನ್ಯ ನೀಡಿದ್ದು ಬಾಬಾ ಸಾಹೇಬ್ ಅಂಬೇಡ್ಕರ್ ಎಂದು ಸ್ಮರಿಸಿದರು.

ದೀಪಾವಳಿಗೆ ಹೊಸ ಕಥೆ: ಇಂದು ನಮಗೆ ಬೆಂಕಿಯನ್ನು ಆರಿಸುವ ಧಮ್ಮ ಬೇಕಿದೆ. ನಮ್ಮ ದೇಶದ ಪ್ರಧಾನಿಯೇ ನಾವು ಯುದ್ಧದ ಭೂಮಿಯಿಂದ ಬಂದಿಲ್ಲ, ಬುದ್ಧನ ಭೂಮಿಯಿಂದ ಬಂದಿದ್ದೇವೆ ಎಂದು ಹೇಳಿಕೊಂಡಿದ್ದಾರೆ. ಸಾಮ್ರಾಟ ಅಶೋಕ ಕ್ರಿಸ್ತಪೂರ್ವದಲ್ಲಿ ಆರಂಭಿಸಿದ್ದ ದೀಪಾವಳಿಗೆ ಹೊಸ ಕಥೆ ಕಟ್ಟಲಾಗಿದೆ. ನಮ್ಮ ಚರಿತ್ರೆಯನ್ನೇ ತಿರುಚಿ ಕಲ್ಲಿನೊಳಗಿನ ದೇವರನ್ನು ವಿಜೃಂಭಿಸುವ ಮನುಸ್ಮೃತಿ ಹಾರಾಡುತಿದೆ. ಹಾಗಾಗಿ ಬುದ್ಧನ ತತ್ವ ಪಾಲನೆ ಮಾಡುವ ಅನಿವಾರ್ಯತೆಯಿದೆ ಎಂದು ಪ್ರತಿಪಾದಿಸಿದರು.

ಪ್ರಶಸ್ತಿ ಪ್ರದಾನ ಮತ್ತು ಧಮ್ಮ ಸಂಗೀತೋತ್ಸವ: ನಂತರ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ 25ಕ್ಕೂ ಹೆಚ್ಚು ಮಂದಿಗೆ ರಾಜ್ಯ ಮಟ್ಟದ ಧಮ್ಮ ಸೇವಾರತ್ನ ಪ್ರಶಸ್ತಿಯನ್ನು ಎಪಿಎಂಸಿ ಮಾಜಿ ಉಪಾಧ್ಯಕ್ಷ ಚಿಕ್ಕಜವರಪ್ಪ ಪ್ರದಾನ ಮಾಡಿದರು. ಬಳಿಕ ಖ್ಯಾತ ಗಾಯಕ ಲಕ್ಷ್ಮಿರಾಮ್ ತಂಡದಿಂದ ಧಮ್ಮ ಸಂಗೀತೋತ್ಸವ ನಡೆಯಿತು. ಮಾಜಿ ಶಾಸಕ ಬಿ.ಹರ್ಷವರ್ಧನ್, ಅಶೋಕಪುರಂ ಮುಖಂಡ ಹೆಚ್. ವಾಸು, ಕೆಪಿಸಿಸಿ ಕಾನೂನು ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಎ.ಆರ್. ಕಾಂತರಾಜು, ಡಾ.ಟಿ.ಮಂಜು ಸತ್ತಿಗೆಹುಂಡಿ, ಎಸ್.ಕೆ.ರಾಜೂಗೌಡ, ಟಿ.ಎಸ್. ಸುಮಾ ಮತ್ತಿತರರಿದ್ದರು.

ನೆಮ್ಮದಿ ಬದುಕಿಗೆ ಅಂಬೇಡ್ಕರ್ ಸಂವಿಧಾನ ಕಾರಣ...

ದೇಶದ ಜನರು ನೆಮ್ಮದಿಯಿಂದ ಜೀವನ ಸಾಗಿಸಲು ಸಂವಿಧಾನದ ಮೂಲಕ ಅಗತ್ಯ ವಾತಾವರಣ ಕಲ್ಪಿಸಿದವರು ಬಿ.ಆರ್.ಅಂಬೇಡ್ಕರ್. ಸಂವಿಧಾನದಿಂದ ದೊರೆತ ಅವಕಾಶದಿಂದಲೇ ನಾನು ಸಹ ಶಾಸಕನಾಗಲೂ ಸಾಧ್ಯವಾಯಿತು. ಸಂವಿಧಾನವಿಲ್ಲದಿದ್ದರೆ ಇಂದಿಗೂ ನಾವುಗಳು ಜೀತ ಪದ್ಧತಿಯಲ್ಲೇ ಇರಬೇಕಿತ್ತು. ಧಮ್ಮ ದೀಕ್ಷೆಯ ಮೂಲಕ ಶೋಷಿತರಿಗೆ ಧ್ವನಿ ನೀಡಿದ ಮಹಾನ್ ವ್ಯಕ್ತಿ ಅಂಬೇಡ್ಕರ್.

– ಡಿ.ರವಿಶಂಕರ್, ಶಾಸಕ, ಕೆ.ಆರ್.ನಗರ

ಮನುಷ್ಯನೊಳಗಿನ ಮನುಷ್ಯ ಕುಬ್ಜನಾಗುತ್ತಿದ್ದಾನೆ...!

ಕಲ್ಲಿನೊಳಗೆ ದೇವರಿದ್ದಾನೆ ಎಂದು ನಂಬಿಸಿ, ವಿಜೃಂಭಿಸುತ್ತಿರುವ ಧರ್ಮ ಒಂದು ಕಡೆ ಇದೆ. ಮನುಷ್ಯರೊಳಗಡೆ ಮನುಷ್ಯನಿದ್ದಾನೆ ಎಂಬುದನ್ನು ಸಾಬೀತುಪಡಿಸುವ ಬುದ್ಧನ ಧಮ್ಮ ಒಂದು ಕಡೆ ಇದೆ. ಕಲ್ಲಿನೊಳಗಿನ ದೇವರು ವಿಜೃಂಭಿಸುತ್ತಿದ್ದರೆ, ಮನುಷ್ಯನೊಳಗಿನ ಮನುಷ್ಯ ಕುಬ್ಜನಾಗುತ್ತಿದ್ದಾನೆ. ಈ ಕಾರಣಕ್ಕಾಗಿಯೇ ತಥಾಗತ ಗೌತಮ ಬುದ್ಧರು, ಜಗತ್ತಿನ ಅದ್ಭುತಗಳು ಹೊರಗಿನಿಂದ ಯಾವುದೂ ಸಂಭವಿಸುವುದಿಲ್ಲ. ಅದ್ಭುತಗಳು ಒಳಗಿನಿಂದ ಸಂಭವಿಸುತ್ತವೆ ಎಂದಿದ್ದಾರೆ. ಒಂದು ಮೊಟ್ಟೆಯನ್ನು ಹೊರಗಡೆ ಹೊಡೆದರೆ, ಅದು ಹೊಡೆದು ಹೋಗುತ್ತೆ. ಆದರೆ ತನ್ನೊಳಗಡೆ ಹೊಡೆದಾಗ ಜೀವ ವಿಕಾಸವಾಗುತ್ತದೆ. ಇದುವೆ ಬುದ್ಧನ ಧಮ್ಮ. ತನ್ನೊಳಗಡೆ ವಿಕಾಸವಾಗುವ ಧಮ್ಮವೇ ಬೌದ್ಧ ಧಮ್ಮ.

– ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಉರಿಲಿಂಗ ಪೆದ್ದಿಮಠ, ಗಾಂಧಿನಗರ

ಹಿರಿಯ ವಕೀಲ 'ಲಾ ಗೈಡ್' ವೆಂಕಟೇಶ್‌ಗೆ ಮೈಸೂರು ಜಿಲ್ಲಾ ರಾಜ್ಯೋತ್ಸವ ಪುರಸ್ಕಾರ



ಮೈಸೂರು, ಅ.31– 'ಲಾ ಗೈಡ್' ಕನ್ನಡ ಕಾನೂನು ಪತ್ರಿಕೆಯ ಗೌರವ ಸಂಪಾದಕರೂ ಆದ ಹಿರಿಯ ವಕೀಲ ಹೆಚ್.ಎನ್. ವೆಂಕಟೇಶ್, ಮೈಸೂರು ಜಿಲ್ಲಾ ರಾಜ್ಯೋತ್ಸವ ಪುರಸ್ಕಾರಕ್ಕೆ ಭಾಜನರಾಗಿದ್ದಾರೆ.

ಕಾನೂನು ಸೇವಾ ವಿಭಾಗದಲ್ಲಿ ಲಾ ಗೈಡ್ ವೆಂಕಟೇಶ್ ಅವರಿಗೆ ರಾಜ್ಯೋತ್ಸವ ಪುರಸ್ಕಾರ ನೀಡಲಾಗಿದೆ. ಕಾನೂನಿಗೆ ಸಂಬಂಧಿಸಿದಂತೆ ಪ್ರಪ್ರಥಮವಾಗಿ ಕನ್ನಡದಲ್ಲಿ ಪತ್ರಿಕೆ ಹೊರತಂದು ಯುವ ವಕೀಲರು ಹಾಗೂ ಸಾರ್ವಜನಿಕರಿಗೆ ಕಾನೂನು ಅರಿವು ಮೂಡಿಸುವಲ್ಲಿ ಹೆಚ್.ಎನ್. ವೆಂಕಟೇಶ್ ನಿರತರಾಗಿದ್ದಾರೆ. ವಕೀಲರಿಗೆ ಉಪಯೋಗವಾಗುವಂತೆ ಪ್ರತಿವರ್ಷ ಕ್ಯಾಲೆಂಡರ್ ಮತ್ತು ಡೈರಿಯನ್ನು ಲಾ ಗೈಡ್ ಬಳಗ ದಿಂದ ಡಿಸೆಂಬರ್ ತಿಂಗಳಿನಲ್ಲೇ ಬಿಡುಗಡೆ ಮಾಡಿ, ಹಂಚುತ್ತಾರೆ.

ನ್ಯಾಯಾಧೀಶರ ಹುದ್ದೆಗೆ ಅರ್ಜಿ ಆಹ್ವಾನಿಸುವ ವೇಳೆಯಲ್ಲಿ ಜೆಎಸ್‌ಎಸ್ ಕಾನೂನು ಕಾಲೇಜು ಮತ್ತು ಮೈಸೂರು ಜಿಲ್ಲಾ ವಕೀಲರ ಸಂಘದ ಸಹಯೋಗದೊಂದಿಗೆ ಯುವ ವಕೀಲರಿಗೆ ನ್ಯಾಯಾಧೀಶರ ಹುದ್ದೆಯ ಪರೀಕ್ಷೆ ಹಾಗೂ ಸಂದರ್ಶನಕ್ಕೆ ತರಬೇತಿ ನೀಡುವ ಶಿಬಿರಗಳನ್ನು ನಡೆಸುತ್ತಿದ್ದು, ಇವರು ನಡೆಸಿದ ಶಿಬಿರದ ಪ್ರಯೋಜನ ಪಡೆದು ಹಲವಾರು ವಕೀಲರು ನ್ಯಾಯಾಧೀಶರ ಹುದ್ದೆಗೇರಿರುವುದು ಇವರ ಹಿರಿಮೆ.

ಕೋವಿಡ್ ಸಂದರ್ಭದಲ್ಲಿ ಸುಮಾರು 20 ಲಕ್ಷ ರೂ. ವೆಚ್ಚದಲ್ಲಿ ಬಡ ವಕೀಲರಿಗೆ ಆಹಾರ ಕಿಟ್‌ಗಳು ಮತ್ತು ಧನಸಹಾಯ ಮಾಡಿ ಮಾನವೀಯತೆ ಮೆರೆದಿರುವ ವೆಂಕಟೇಶ್, ದೇಶದಲ್ಲಿ 'ಭಾರತೀಯ ನ್ಯಾಯ ಸಂಹಿತೆ' ಜಾರಿಗೆ ಬಂದಾಗ ಈ ಸಂಬಂಧ ವಕೀಲರಿಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಸಾವಿರ ಪುಸ್ತಕಗಳನ್ನು ಜಿಲ್ಲಾ ಪ್ರಧಾನ ಸತ್ರ ನ್ಯಾಯಾಧೀಶರಾದ ರವೀಂದ್ರ ಹೆಗಡೆ, ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್, ಕಾರ್ಯದರ್ಶಿ ಸುಧೀರ್ ನೇತೃತ್ವದಲ್ಲಿ ವಿತರಿಸುವ ಮೂಲಕ ಯುವ ವಕೀಲರಿಗೆ ನೆರವಾಗಿದ್ದಾರೆ. ಜ್ಞಾನದೀಪ್ತಿ ಟ್ರಸ್ಟ್ ಆಶ್ರಯದಲ್ಲಿ ಬಡ ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಲು ತರಬೇತಿ ನೀಡುವ ಮೂಲಕ ಬಡ ವಿದ್ಯಾರ್ಥಿಗಳು ಸರ್ಕಾರಿ ಹುದ್ದೆಗೇರಲು ವೆಂಕಟೇಶ್ ಕಾರಣಕರ್ತರಾಗಿದ್ದಾರೆ. ಇವರ ಈ ಸೇವೆಯನ್ನು ಪರಿಗಣಿಸಿ ಜಿಲ್ಲಾ ರಾಜ್ಯೋತ್ಸವ ಪುರಸ್ಕಾರಕ್ಕೆ ಆಯ್ಕೆ ಮಾಡಲಾಗಿದೆ.

ಮಾಜಿ ಪ್ರಧಾನಿ ಮೊಮ್ಮಗ, ಮಾಜಿ ಸಿಎಂ ಮಗನಾಗಿದ್ದೇ ನನ್ನ ದುರದೃಷ್ಟ: ಕಣ್ಣೀರಿಟ್ಟ ನಿಖಿಲ್ ಕುಮಾರಸ್ವಾಮಿ



ರಾಮನಗರ, ಅ.31– ನಾನು ರಾಜಕೀಯ ಷಡ್ಯಂತ್ರಕ್ಕೆ ಬಲಿಯಾಗಿದ್ದೇನೆ. ಸತತ ಎರಡು ಚುನಾವಣೆಯಲ್ಲಿ ಸೋತಿರುವೆ ನಾನು ಏನು ತಪ್ಪು ಮಾಡಿದ್ದೇನೆಂದು ಗೊತ್ತಾಗುತ್ತಿಲ್ಲ ಎಂದು ಚನ್ನಪಟ್ಟಣ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಗುರುವಾರ ಭಾವುಕರಾಗಿ ಕಣ್ಣೀರು ಹಾಕಿದರು.

ನಾನು ಎರಡು ಚುನಾವಣೆಗಳಲ್ಲಿ ಸೋತಿದ್ದೇನೆ. ಜನರು ನನಗೆ ಮತ ಹಾಕಿದ್ದಾರೆ. ಆದರೆ ನಾನು ರಾಜಕೀಯ ಷಡ್ಯಂತ್ರಕ್ಕೆ ಬಲಿಯಾಗಿದ್ದೇನೆ. ಇದರಿಂದ ನನಗೆ ತೀವ್ರ ನೋವಾಗಿದೆ. ಪಕ್ಷದ ಕಾರ್ಯಕರ್ತರಿಗೆ ಕೃತಜ್ಞತೆ ಸಲ್ಲಿಸಲು ಈ ಬಾರಿ ಚುನಾವಣೆಯಲ್ಲಿ ನಿಂತಿದ್ದೇನೆ. ನೀವೆಲ್ಲರೂ ಈ ಯುವಕನಿಗೆ ಗೆಲ್ಲುವ ಅವಕಾಶ ನೀಡಬೇಕೆಂದು ವಿನಂತಿಸುತ್ತೇನೆ ಎಂದು ಕಣ್ಣೀರು ಹಾಕುತ್ತಾ, ಮನವಿ ಮಾಡಿದರು.

ಇಂದು ಕನ್ನಮಂಗಲ ಗ್ರಾಮದಲ್ಲಿ ಚುನಾವಣಾ ಪ್ರಚಾರ ಸಭೆಯನ್ನುದ್ದೇಶಿಸಿ ಮಾತನಾಡಿದ ನಿಖಿಲ್ ಕುಮಾರಸ್ವಾಮಿ, ನಾನು ಎರಡು ಬಾರಿ ಚುನಾವಣೆಯಲ್ಲಿ ಸೋತಿದ್ದೇನೆ ನಾನೇನು ತಪ್ಪು ಮಾಡಿದ್ದೆನೋ ಗೊತ್ತಿಲ್ಲ. ಬಹುಶಃ ಮಾಜಿ ಪ್ರಧಾನಿಯ ಮೊಮ್ಮಗನಾಗಿ ಮತ್ತು ಮಾಜಿ ಮುಖ್ಯಮಂತ್ರಿಯ ಮಗನಾಗಿ ಹುಟ್ಟಿರುವುದು ನನ್ನ ದುರದೃಷ್ಟವೋ ಗೊತ್ತಿಲ್ಲ ಎಂದರು.

ಈ ಚುನಾವಣೆಯಲ್ಲಿ ನಾನು ಕಣ್ಣೀರು ಹಾಕಬಾರದು ಎಂದು ನಿರ್ಧರಿಸಿದ್ದೆ. ಆದರೆ ತುಂಬಾ ನೋವುಗಳಿವೆ. ಕಳೆದ ಲೋಕಸಭಾ ಚುನಾವಣೆ ವೇಳೆ ಮಂಡ್ಯದಲ್ಲಿ ನಡೆದ ನೋವಿನ ಘಟನೆಗಳನ್ನು ನೆನಪಿಸಿಕೊಂಡ ನಿಖಿಲ್, ನನ್ನ ಮೂಲಕ ಉತ್ತರ ಕೊಡ್ಬೇಕು ಅಂತ ಕಾರ್ಯಕರ್ತರ ಭಾವನೆಯಾಗಿತ್ತು ಅಂಬೇಡ್ಕರ್ ಭವನದಲ್ಲಿ ನಡೆದ ಕಾರ್ಯಕರ್ತರ ಸಭೆಯಲ್ಲಿ ಏನಾಗಿತ್ತು ಅಂತ ಎಲ್ಲರಿಗೂ ಗೊತ್ತು ಎಂದು ಹೇಳಿದರು.

ಒಮ್ಮೆ ನಾನು ದೇವೇಗೌಡರಿಗೆ ಪ್ರಾದೇಶಿಕ ಪಕ್ಷ ಕಟ್ಟುವುದು ಕಷ್ಟ ಇದೆ, ಬೇಡ ಎಂದು ಮನವಿ ಮಾಡಿದ್ದೆ. ಆದರೆ ರೈತ ಪರವಾಗಿ ಕಾಳಜಿ ಇಟ್ಟುಕೊಂಡು ಈ ಪಕ್ಷವನ್ನು ಕಟ್ಟಿದ್ದಾರೆ. ನಂತರ ಕುಮಾರಣ್ಣ ಅವರು ಅಧಿಕಾರ ಇರಲಿ, ಇಲ್ಲದೆ ಇರಲಿ ರೈತರ ಪರವಾಗಿ ನಿರಂತರವಾಗಿ ಸಾಲ ಮನ್ನಾ ಮಾಡಿದ್ದಾರೆ. ಅನೇಕ ಅಭಿವೃದ್ಧಿ ಕೆಲಸಗಳು ಮಾಡಿದ್ದಾರೆ ಎಂದರು.

ಪ್ರಾದೇಶಿಕ ಪಕ್ಷ ಕಟ್ಟುವುದು ಕಷ್ಟ ಆದರೆ ನಿಮ್ಮೆಲ್ಲರ ಆಶೀರ್ವಾದದಿಂದ ರಾಜ್ಯದಲ್ಲಿ ಜೆಡಿಎಸ್ ಉಳಿದಿದೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರ ಪುತ್ರ ಹೇಳಿದ್ದಾರೆ.

ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು